ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 10 ಭಾನುವಾರ 2026

47

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 47 | ಸಂಚಿಕೆ: 24 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಜುಲೈನಲ್ಲಿ ಅಮರ್‌ನಾಥ, ವೈಷ್ಣೋದೇವಿ ಯಾತ್ರೆ



ಸರ್ಕಾರದಿಂದ 5 ಸಾವಿರ ಸಹಾಯಧನ

ಮೈಸೂರು, ಮೇ 9(ಜಿಎ)–ಅಮರ್‌ನಾಥ್, ವೈಷ್ಣೋದೇವಿ ಯಾತ್ರೆಯಲ್ಲಿ ಪಾಲ್ಗೊಳ್ಳ ಬಯಸುವವರಿಗಾಗಿ ಕರ್ನಾಟಕ ರಾಜ್ಯ ಅಭಿ ವೃದ್ಧಿ ಪರಿಷತ್‌ನಿಂದ ಜುಲೈ ತಿಂಗಳಲ್ಲಿ ವ್ಯವಸ್ಥೆ ಮಾಡಿಕೊಡಲಿದ್ದು, ಸರ್ಕಾರದಿಂದಲೇ ಸುಮಾರು 5 ಸಾವಿರ ರೂ., ಸಹಾಯಧನ ಸಹಾ ಸಿಗಲಿದೆ ಎಂದು ರಾಜ್ಯ ಅಭಿವೃದ್ಧಿ ಪರಿಷತ್ ಖಜಾಂಚಿ ಮಂಜುಳಾ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸುಮಾರು 20 ಮಂದಿಗೆ ಅವಕಾಶವಿರಲಿದೆ. ಕೇವಲ 11,250 ರೂ. ಮಾತ್ರ ವೆಚ್ಚ ತಗುಲಲಿದೆ. ಇದು ರೈಲಿನ ಪ್ರಯಾಣ. ಕೊಯಮತ್ತೂರಿಗೆ ಬಸ್‌ನಲ್ಲಿ ಕರೆದೊಯ್ದು, ಅಲ್ಲಿಂದ ರೈಲಿನಲ್ಲಿ ಕರೆದುಕೊಂಡು ಹೋಗಿ, ವಾಪಸು ಕರೆತರಲಾಗುವುದು. ಊಟ, ವಸತಿ, ಗೈಡ್ ನಿಯೋಜನೆ ಒಳಗೊಂಡಿರಲಿದೆ. 18ರಿಂದ 70 ವರ್ಷದೊಳಗಿನವರು ಪ್ರಯೋಜನ ಪಡೆಯಬಹುದು. ಮಾಹಿತಿಗೆ ದೂ. 99646 83183, 81478 23336 ಸಂಪರ್ಕಿಸುವಂತೆ ಕೋರಿದರು. ಗೋಷ್ಠಿಯಲ್ಲಿ ಶ್ರೀನಿವಾಸ ಕುಮಾರ್, ರಾಧಾ, ಸಿಂಧುವಳ್ಳಿ ಶಿವಕುಮಾರ್, ಅರುಣ್‌ಕುಮಾರ್ ಉಪಸ್ಥಿತರಿದ್ದರು.

ಮೇ 11ರಿಂದ ಶಾಪಿಂಗ್ ಮಹೋತ್ಸವ

ಮೈಸೂರು, ಮೇ 9(ಜಿಎ)–ಮೈಸೂರಿನ ರ‍್ಯಾಡಿಸನ್ ಬ್ಲೂ ಹೋಟೆಲ್‌ನಲ್ಲಿ ಮೇ 11 ಮತ್ತು 12ರಂದು ಬೆಳಗ್ಗೆ 10ರಿಂದ ರಾತ್ರಿ 9ರವರೆಗೆ ಹೈಲೈಫ್ ಸಂಸ್ಥೆ ವತಿಯಿಂದ ಎರಡು ದಿನಗಳ ಶಾಪಿಂಗ್ ಮಹೋತ್ಸವ ಹಮ್ಮಿಕೊಳ್ಳಲಾಗಿದೆ ಎಂದು ಆಯೋಜಕರಾದ ಶೋಮಿಕಾ ಎಸ್.ರಾವ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಮ್ಮ ಸಂಸ್ಥೆ ವತಿಯಿಂದ 18ನೇ ಆವೃತ್ತಿಯ ಹೈಲೈಫ್ ಶಾಪಿಂಗ್ ಮಹೋತ್ಸವ ಆಯೋಜಿಸಲಾಗುತ್ತಿದ್ದು, ಮೈಸೂರಲ್ಲಿ ಉತ್ತಮ ಪ್ರತಿಕ್ರಿಯೆ ಇರುವುದರಿಂದ ಮೊದಲು ವರ್ಷದಲ್ಲಿ ಎರಡು ಬಾರಿ ಆಯೋಜಿಸುತ್ತಿದ್ದ ಮಹೋತ್ಸವವನ್ನು ಪ್ರತಿ ಮೂರು ತಿಂಗಳಿಗೊಮ್ಮೆ ಆಯೋಜಿಸುತ್ತಿದ್ದೇವೆ ಎಂದರು.

ಈ ಬಾರಿ ಬೇಸಿಗೆಯನ್ನು ಗಮನದಲ್ಲಿಟ್ಟುಕೊಂಡು ಬಿಸಿಲಿಗೆ ಬೇಕಾಗುವಂತಹ ಬಟ್ಟೆಗಳು ಮೇಳದಲ್ಲಿ ಪ್ರಮುಖ ಆಕರ್ಷಣೆಯಾಗಲಿವೆ. 45 ಮಳಿಗೆಗಳಲ್ಲಿ ಮುಖ್ಯವಾಗಿ ಹತ್ತಿ ಬಟ್ಟೆ, ದೇಶದ ವಿವಿಧ ಭಾಗಗಳಿಂದ ಬಂದಿರುವ ಅತ್ಯುತ್ತಮ ಉಡುಪು, ಆಭರಣ, ಫ್ಯಾಷನ್ ವಸ್ತುಗಳು, ಲೆಹೆಂಗಾ, ಸೀರೆ, ಗೌನ್ ಮೊದಲಾದವು ಇಲ್ಲಿ ಪ್ರದರ್ಶನ ಮತ್ತು ಮಾರಾಟಕ್ಕೆ ಇರಲಿವೆ. ದುಬಾರಿ ಎಂದು ಅಂಜುವ ಅಗತ್ಯವೂ ಇಲ್ಲ. ಕೇವಲ ನೂರು ರೂ.ಗೂ ಸಿಗುವ ವಸ್ತುಗಳು ಇಲ್ಲಿರಲಿವೆ ಎಂದರು.

ಸುದ್ದಿಗೋಷ್ಠಿಯಲ್ಲಿ ಸಂಯೋಜಕ ಎಸ್.ಶ್ರೀಕಾಂತ್ ಉಪಸ್ಥಿತರಿದ್ದರು.

ಡಿ.ಇಎಲ್.ಇಡಿ, ಸಿಯುಇಟಿ–ಯುಜಿ ಪರೀಕ್ಷಾ ಕೇಂದ್ರಗಳ ಸುತ್ತ ನಿಷೇಧಾಜ್ಞೆ

ಮೈಸೂರು,ಮೇ 9(ಪಿಎಂ)– ನಗರದ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್)ಯಲ್ಲಿ ಮೇ 12ರಿಂದ 18ರವರೆಗೆ ಪ್ರಥಮ ಮತ್ತು ದ್ವಿತೀಯ ಡಿ.ಇಎಲ್.ಇಡಿ ಪರೀಕ್ಷೆಗಳು ನಡೆಯಲಿದ್ದು, ಈ ಪರೀಕ್ಷಾ ಕೇಂದ್ರದ ಸುತ್ತಲೂ 200 ಮೀಟರ್ ವ್ಯಾಪ್ತಿಯಲ್ಲಿ ಬೆಳಗ್ಗೆ 6ರಿಂದ ಸಂಜೆ 6ರವರೆಗೆ ನಿಷೇಧಾಜ್ಞೆ ಜಾರಿಗೊಳಿಸಿ ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಆದೇಶ ಹೊರಡಿಸಿದ್ದಾರೆ.

ಅದೇ ರೀತಿ ನ್ಯಾಷನಲ್ ಟೆಸ್ಟಿಂಗ್ ಏಜೆನ್ಸಿ ವತಿಯಿಂದ ಮೇ 11ರಿಂದ 31ರವರೆಗೆ ಹೆಬ್ಬಾಳ ಕೈಗಾರಿಕಾ ಪ್ರದೇಶದ (ಭಾರತ್ ಕ್ಯಾನ್ಸರ್ ಆಸ್ಪತ್ರೆ ಎದುರು) ಐಓಎನ್ ಡಿಜಿಟಲ್ ಜೋನ್, ಐಡಿಝುಡ್ ಹೆಬ್ಬಾಳ್ ಜ್ಯೋತಿರ್ಗಮಯ ವ್ಯಾನ್ಷನ್‌ನಲ್ಲಿ (299/ಡಿ) ಕಾಮನ್ ಯೂನಿವರ್ಸಿಟಿ ಎಂಟ್ರನ್ಸ್ ಟೆಸ್ಟ್ (ಸಿಯುಇಟಿ–ಯುಜಿ) 2026ರ ಪರೀಕ್ಷೆ ನಡೆಯಲಿದ್ದು, ಈ ಪರೀಕ್ಷಾ ಕೇಂದ್ರದ ಸುತ್ತಲೂ 200 ಮೀಟರ್ ವ್ಯಾಪ್ತಿಯಲ್ಲಿ ಪರೀಕ್ಷಾ ದಿನಗಳಂದು ಬೆಳಗ್ಗೆ 6ರಿಂದ ಸಂಜೆ 6ರವರೆಗೆ ನಿಷೇಧಾಜ್ಞೆ ಜಾರಿಗೊಳಿಸಿ ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಆದೇಶ ಹೊರಡಿಸಿದ್ದಾರೆ. ನಿಷೇಧಾಜ್ಞೆ ಅವಧಿ ಮತ್ತು ಪ್ರದೇಶದಲ್ಲಿ ಪರೀಕ್ಷಾರ್ಥಿಗಳು ಹಾಗೂ ಪರೀಕ್ಷಾ ಸಿಬ್ಬಂದಿ ಹೊರತುಪಡಿಸಿ ಅನಧಿಕೃತ ವ್ಯಕ್ತಿಗಳು ಸಂಚರಿಸಬಾರದು ಮತ್ತು ಯಾವುದೂ ಆಕ್ಷೇಪಾರ್ಹ ವಸ್ತುಗಳನ್ನು ಒಯ್ಯಬಾರದು ಹಾಗೂ ಪರೀಕ್ಷಾ ಕೇಂದ್ರಗಳ ಸುತ್ತಮುತ್ತಲಿರುವ ಜೆರಾಕ್ಸ್, ಬ್ರೌಸಿಂಗ್ ಸೆಂಟರ್‌ಗಳನ್ನು ಪರೀಕ್ಷಾ ಅವಧಿಯಲ್ಲಿ ಮುಚ್ಚುವಂತೆ ಆದೇಶಿಸಲಾಗಿದೆ.

ಉಚಿತ ವಿದ್ಯಾರ್ಥಿನಿಲಯದ ಪ್ರವೇಶಾತಿ ಅರ್ಜಿ ಆಹ್ವಾನ

ಮೈಸೂರು: ರಾಷ್ಟ್ರ ಭಾರತಿ ಚಾರಿಟಬಲ್ ಟ್ರಸ್ಟ್ ವತಿಯಿಂದ ಪದವಿಪೂರ್ವ, ಪದವಿ ಶಿಕ್ಷಣ ಓದುವ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಭಾರತೀಯ ಸಂಸ್ಕೃತಿ ಮತ್ತು ಸಂಸ್ಕಾರಯುತ ವಿದ್ಯಾರ್ಥಿ (ಬಾಲಕರ) ನಿಲಯ ಮೈಸೂರಿನ ಜೆ.ಪಿ.ನಗರದ ಸಾರ್ವಜನಿಕ ವಿದ್ಯಾರ್ಥಿ ನಿಲಯದಲ್ಲಿ ವ್ಯವಸ್ಥೆ ಮಾಡಲಾಗುತ್ತಿದೆ. ನೋಂದಣಿಗೆ ಮೇ 30 ಕೊನೆ ದಿನಾಂಕ. ಹೆಚ್ಚಿನ ಮಾಹಿತಿಗೆ ಮೊ. 9916821631, 8550812101.

ಅಗ್ನಿ ಅವಘಡ: ವೃದ್ಧ ಸಾವು, ಅಪಾರ ಹಾನಿ



ನವದೆಹಲಿ: ಎಸಿ ಸರ್ವಿಸ್ ಸೆಂಟರ್‌ನಲ್ಲಿ ಭಾರೀ ಬೆಂಕಿ ಅವಘಡ ಸಂಭವಿಸಿ, ವೃದ್ಧನೋರ್ವ ಸಾವನ್ನಪ್ಪಿದ ಘಟನೆ ದೆಹಲಿಯ ಗಾಜಿಯಾಬಾದ್‌ನಲ್ಲಿ ನಡೆದಿದೆ.

ಇಲ್ಲಿನ ಪಟೇಲ್ ನಗರ ಪ್ರದೇಶದಲ್ಲಿ ಈ ಅವಘಡ ಸಂಭವಿಸಿದ್ದು, 80 ವರ್ಷದ ತ್ರಿಲೋಕಿ ಸಾವನ್ನಪ್ಪಿದ್ದಾರೆ. ಶುಕ್ರವಾರ ಬೆಳಗಿನ ಜಾವ 3 ಗಂಟೆ ಸುಮಾರಿಗೆ ಕಟ್ಟಡದಲ್ಲಿ ಬೆಂಕಿ ಕಾಣಿಸಿಕೊಂಡಿದ್ದು, ಅಗ್ನಿ ಶಾಮಕ ದಳ ಸ್ಥಳಕ್ಕೆ ಧಾವಿಸುವಷ್ಟರಲ್ಲಿ ಕಟ್ಟಡದ ತುಂಬೆಲ್ಲ ಜ್ವಾಲೆ ವ್ಯಾಪಿಸಿದೆ. ಗ್ಯಾಸ್ ಸಿಲಿಂಡರ್‌ಗಳು, ಎಸಿ ಕಂಪ್ರೆಸರ್‌ಗಳು ಸ್ಫೋಟಗೊಂಡ ಕಾರಣದಿಂದ ಬೆಂಕಿ ನಂದಿಸುವ ಕಾರ್ಯಾಚರಣೆ ವಿಳಂಬವಾಯಿತು. ಕಟ್ಟಡದಲ್ಲಿದ್ದ ತ್ರಿಲೋಕಿ ಹೊರಬರಲಾಗದೆ ಸಾವನ್ನಪ್ಪಿದ್ದಾರೆ. ಅಗ್ನಿ ಶಾಮಕ ಸಿಬ್ಬಂದಿ ಹಲವು ನೀರಿನ ಮಾರ್ಗಗಳನ್ನು ಬಳಸಿ ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತಂದರು. ಘಟನೆಯಲ್ಲಿ 10 ಕಾರುಗಳು, 10 ಬೈಕ್‌ಗಳು ಸೇರಿದಂತೆ ಹಲವು ವಸ್ತುಗಳ ಸಂಪೂರ್ಣ ಸುಟ್ಟು ಭಸ್ಮವಾಗಿವೆ.

ನಿಧನ



ಎ.ಅನಂತನಾರಾಯಣ

ಮೈಸೂರು, ಮೇ 9– ಮೈಸೂರು ವಿವಿ ಮೊಹಲ್ಲಾ ನಿವಾಸಿ ಎ.ಅನಂತನಾರಾಯಣ (96) ನಿನ್ನೆ ನಿಧನರಾದರು. ಇವರು ಇಬ್ಬರು ಪುತ್ರರು, ಇಬ್ಬರು ಪುತ್ರಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು, ಮುಮ್ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧುವರ್ಗ ಮಿತ್ರರನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಇಂದು ಮಧ್ಯಾಹ್ನ ಚಾಮುಂಡಿಬೆಟ್ಟದ ತಪ್ಪಲಿನಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಪುಟ್ಟಲಿಂಗಮ್ಮ

ಮೈಸೂರು ಕೆಜಿ ಕೊಪ್ಪಲಿನ 2ನೇ ಕ್ರಾಸ್ ನಿವಾಸಿ ಕಾರ್ಪೊರೇಷನ್ ದೇವರಾಜ್ ಅವರ ತಾಯಿ ಪುಟ್ಟಲಿಂಗಮ್ಮ (81) ನಿಧನರಾದರು. ಮೃತರು ಪುತ್ರರಾದ ಡಿ.ದೇವರಾಜು, ಡಿ.ಪಾಪಣ್ಣ, ಪುತ್ರಿಯರಾದ ಡಿ.ಲಕ್ಷ್ಮಿ, ಡಿ.ಜಯಮ್ಮ, ಸೊಸೆಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ನಾಳೆ (ಭಾನುವಾರ) ಬೆಳಿಗ್ಗೆ 11:30 ಗಂಟೆಗೆ ಕೆ.ಜಿ.ಕೊಪ್ಪಲು ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬ ವರ್ಗ ತಿಳಿಸಿದೆ.



ಸಿದ್ದರಾಜು

ಮೈಸೂರು, ಮೇ 9– ಮೈಸೂರು ತಾಲೂಕು ನಾಗನಹಳ್ಳಿ ಗ್ರಾಮ ಪಂಚಾಯ್ತಿ ಮಾಜಿ ಅಧ್ಯಕ್ಷ ಸಿದ್ದರಾಜು (52) ಅವರು ಅನಾರೋಗ್ಯದಿಂದ ಶನಿವಾರ ನಿಧನರಾದರು.

ಇವರು ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದು, ಅಂತ್ಯಕ್ರಿಯೆಯು ಭಾನುವಾರ (ಮೇ 10) ಮಧ್ಯಾಹ್ನ 1 ಗಂಟೆಗೆ ನಾಗನಹಳ್ಳಿ ಗ್ರಾಮದ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಹಣ್ಣುಗಳ ರಾಜ ಮಾವಿನ ಇಳುವರಿಯೂ ಕುಸಿತ; ಇತ್ತ ಬೆಲೆಯೂ ಕಡಿತ

ಮಾವು ಬೆಳೆಗಾರರು, ಮಾರಾಟಗಾರರ ಅಳಲು

ಮೈಸೂರು,ಮೇ 9(ಎಂಟಿವೈ)–ಬಾಯಲ್ಲಿ ನೀರೂರಿಸುವ ಹಣ್ಣುಗಳ ರಾಜ 'ಮಾವಿನ ಹಣ್ಣು' ಈಗಾಗಲೆ ಮಾರುಕಟ್ಟೆಗೆ ಬಂದಿದ್ದರೂ ಬಿಸಿಲಿನ ಬೇಗೆ ನಡುವೆ ಖರೀದಿಸಲು ಗ್ರಾಹಕರು ಏನೋ...ಎಂತೋ ಎಂಬ ಆತಂಕದಿಂದ ಹಿಂದೇಟು ಹಾಕುತ್ತಿರುವುದರಿಂದ ಬೆಲೆ ಕುಸಿದಿದೆ.

ಈ ಸಾಲಿನ ಬೇಸಿಗೆ ಬಿರು ಬಿಸಿಲು ಮಾವಿನ ಬೆಳೆ ಮೇಲೆ ಪ್ರತಿಕೂಲ ಪರಿಣಾಮ ಬೀರಿದೆ. ಅಲ್ಲದೆ, ಜನವರಿ, ಫೆಬ್ರವರಿ ತಿಂಗಳಲ್ಲಿ ಸುರಿದ ಅಕಾಲಿಕ ಮಳೆಯಿಂದಾಗಿ ಮಾವಿನ ಹೂವು ಉದುರಿ ಈ ಬಾರಿ ಫಸಲು ಪ್ರಮಾಣವೂ ಕುಸಿದಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಈ ಬಾರಿ ಶೇ.40ರಷ್ಟು ಮಾವಿನ ಬೆಳೆ ಕೈಕೊಟ್ಟಿದೆ. ಆದರೂ, ಮಾರುಕಟ್ಟೆಯಲ್ಲಿ ಸೂಕ್ತ ಬೆಲೆ ಸಿಗದೇ ಮಾವು ಬೆಳೆಗಾರರು ಸಂಕಷ್ಟಕ್ಕೀಡಾಗಿದ್ದಾರೆ.

ಪ್ರತಿ ವರ್ಷದಂತೆ ಈ ಬಾರಿಯೂ ಏಪ್ರಿಲ್ ತಿಂಗಳಲ್ಲೇ ವಿವಿಧ ತಳಿಯ ಮಾವಿನಹಣ್ಣು ಮಾರುಕಟ್ಟೆಗೆ ಬಂದಿದೆ. ಆರಂಭದಲ್ಲಿ ಉತ್ತಮ ಬೆಲೆ ಇತ್ತಾದರೂ, ಕ್ರಮೇಣ ಕುಸಿತ ಕಂಡಿದೆ. ಬೆಲೆ ಕಡಿಮೆಯಿದ್ದರೂ ಮಾವು ಸವಿಯಲು ಜನ ಹಿಂದೇಟು ಹಾಕುತ್ತಿರುವುದರಿಂದ ಬೇಡಿಕೆ ಅಷ್ಟಿಲ್ಲ. ಹಾಗಾಗಿ ಹಣ್ಣಿನ ಮಳಿಗೆ ಹಾಗೂ ಬೀದಿ ಬದಿ ತಳ್ಳುವ ಗಾಡಿಯಲ್ಲಿ ವ್ಯಾಪಾರ ಮಾಡುವ ವ್ಯಾಪಾರಿಗಳು ಗ್ರಾಹಕರನ್ನು ಸೆಳೆಯಲು ಕಸರತ್ತು ಮಾಡಬೇಕಾದ ಅನಿವಾರ್ಯ ಪರಿಸ್ಥಿತಿ ಎದುರಾಗಿದೆ.

50 ರೂ. ದಾಟದ ಸಗಟು ಬೆಲೆ: ಬೆಲೆ, ಬೇಡಿಕೆ, ಇಳುವರಿ ಪ್ರಮಾಣ ಕುಸಿದಿದ್ದರೂ ಮೈಸೂರಿನ ಮಾರುಕಟ್ಟೆಗೆ ವಿವಿಧ ತಳಿಯ ಮಾವಿನಹಣ್ಣುಗಳು ಟನ್‌ಗಟ್ಟಲೇ ಬರುತ್ತಿವೆ. ಮೈಸೂರು, ರಾಮನಗರ ಸೇರಿದಂತೆ ವಿವಿಧ ಜಿಲ್ಲೆಗಳಿಂದ ಮಾವು ಲೋಡ್‌ಗಟ್ಟಲೇ ಈಗಾಗಲೇ ಮಾರುಕಟ್ಟೆಗೆ ಬಂದಿದೆ. ಆರ್‌ಎಂಸಿ ಹಣ್ಣಿನ ಮಾರುಕಟ್ಟೆಯಲ್ಲಿ ಉತ್ತಮ ಮಾವಿನ ಹಣ್ಣಿನ ಬೆಲೆ ಕೆಜಿ 30 ರೂ.ನಿಂದ 40 ರೂ. ಇದೆ. ಆದರೂ, ಬೇಡಿಕೆ ಮಾತ್ರ ಇಲ್ಲ. ಹೋಲ್‌ಸೇಲ್‌ನಲ್ಲಿ ಬಾದಾಮಿ ಕೆಜಿಗೆ 30ರಿಂದ 40 ರೂ., ರಸಪುರಿ ಕೆಜಿಗೆ 20ರಿಂದ 30 ರೂ., ತೋತಾಪುರಿ ಕೆಜಿಗೆ 20ರಿಂದ 40 ರೂ.ಗೆ ಮಾರಾಟವಾಗುತ್ತಿವೆ. ವಿವಿಧೆಡೆ ರಸ್ತೆ ಬದಿ ಮಾರಾಟ ಮಾಡುವ ವ್ಯಾಪಾರಿಗಳು ಆರ್‌ಎಂಸಿಯ ಹಣ್ಣಿನ ಗೋದಾಮಿನಲ್ಲಿ ಖರೀದಿಸುತ್ತಿದ್ದಾರೆ.

ಮಳಿಗೆಗಳಲ್ಲಿ ದರ ಹೆಚ್ಚು: ಆರ್‌ಎಂಸಿ ಯಾರ್ಡ್‌ನಿಂದ ನೂರಾರು ಕೆಜಿ ಮಾವಿನ ಹಣ್ಣನ್ನು ಖರೀದಿಸುವ ವ್ಯಾಪಾರಿಗಳು ವಿವಿಧ ರಸ್ತೆ, ಬಡಾವಣೆಗಳಲ್ಲಿ ತಳ್ಳುವ ಗಾಡಿಯಲ್ಲಿ ಮಾರಾಟ ಮಾಡುತ್ತಿದ್ದು, ಕೆಜಿಗೆ 20 ರೂ. ಲಾಭ ಇಟ್ಟುಕೊಂಡು ಮಾರಾಟ ಮಾಡುತ್ತಿದ್ದಾರೆ. ದಿನಕ್ಕೆ 200ರಿಂದ 300 ಕೆಜಿ ಮಾವಿನಹಣ್ಣು ಖರೀದಿಸುವ ವ್ಯಾಪಾರಿಗಳು ಮಾವಿನಹಣ್ಣು ಮಾರಾಟ ಮಾಡಲು ಪರದಾಡುವಂತಾಗಿದೆ. ದಿನ ಪೂರ್ತಿ ಮಾರಾಟವಾಗದೇ ಉಳಿದ ಮಾವಿನಹಣ್ಣನ್ನು ರಾತ್ರಿ ಟಾರ್ಪಾಲ್‌ನಲ್ಲಿ ಮುಚ್ಚಿಟ್ಟು ಹೋಗುವುದರಿಂದ ಆ ಶಾಖಕ್ಕೆ ಹಣ್ಣುಗಳು ಕಪ್ಪಾಗಿ ಹಾಳಾಗುತ್ತಿವೆ. ಇದರಿಂದಾಗುವ ನಷ್ಟವನ್ನು ಸರಿದೂಗಿಸಿಕೊಳ್ಳಲು ಕೆಜಿ ಹಣ್ಣಿಗೆ 15ರಿಂದ 20 ರೂ. ಲಾಭವಿರಿಸಿ ಮಾರಾಟ ಮಾಡಲಾಗುತ್ತಿದೆ ಎಂದು ಬೀದಿ ಬದಿ ವ್ಯಾಪಾರಿಯೊಬ್ಬರು ತಿಳಿಸಿದ್ದಾರೆ.

ವಾಂತಿ–ಭೇದಿ ಭಯ: ಕಣ್ಣಿಗೆ ರಾಚುವ ಬಣ್ಣ, ಮೂಗಿಗೆ ಬಡಿಯುವ ವಾಸನೆಯಿಂದ ಜನರಿಗೆ ಮಾವಿನ ಹಣ್ಣಿನ ಮೇಲೆ ಆಕರ್ಷಣೆಯಾದರೂ ಬಿಸಿಲ ಬೇಗೆಯಿಂದಾಗಿ ಆರೋಗ್ಯದ ಮೇಲೆ ಪರಿಣಾಮ ಬೀರಬಹುದೆಂಬ ಆತಂಕದಿಂದ ಜನ ಮಾವಿನಹಣ್ಣಿನ ರುಚಿ ಸವಿಯಲು ಹಿಂದೇಟು ಹಾಕುತ್ತಿದ್ದಾರೆ. ಒಂದೆಡೆ ಕಾಡುತ್ತಿರುವ ಬಿರು ಬಿಸಿಲಿನಿಂದಾಗಿ ಮಾವಿನ ಹಣ್ಣು ತಿಂದರೆ ಭೇದಿಯಾಗುತ್ತದೆ ಎಂಬ ಆತಂಕವೂ ಜನರಲ್ಲಿ ಮನೆ ಮಾಡಿದೆ.



ಮೈಸೂರಿನ ಹಳೆ ಆರ್‌ಎಂಸಿ ಯಾರ್ಡ್‌ನಲ್ಲಿ ಮಾವಿನಹಣ್ಣು ಮಾರಾಟ ಮಾಡುತ್ತಿರುವುದನ್ನು ಚಿತ್ರದಲ್ಲಿ ಕಾಣಬಹುದು.

> ಈ ವರ್ಷ ಮಾವು ಬೆಳೆ ಕಡಿಮೆ. ಮಳೆ ಸರಿಯಾಗಿ ಬರಲಿಲ್ಲ. ಅಕಾಲಿಕ ಮಳೆಗೆ ಹೂವು ಉದುರಿ ಹೋದವು. ಇದರೊಂದಿಗೆ ಬಿರು ಬಿಸಿಲಿಗೂ ಹೂವು ಗಿಡದಲ್ಲಿ ನಿಲ್ಲಲಿಲ್ಲ. ಹೂ ಕಚ್ಚುವ ಸಮಯದಲ್ಲಿ ಬಿಸಿಲಿಗೆ ಬಾಡಿ ಹೋದವು. 100 ಮರಗಳಲ್ಲಿ 40 ರಲ್ಲಿ ಫಸಲು ಇಲ್ಲದಂತಾಗಿದೆ. ಬೆಳೆ ಕಚ್ಚಿದರೂ ಮಾವಿನ ಕಾಯಿ ದಪ್ಪ ಆಗಲಿಲ್ಲ. ಬಿಸಿಲಿಗೆ ದರವೂ ಕುಸಿದಿದೆ. ಇತ್ತ ಜನ ಮಾವಿನಹಣ್ಣು ಖರೀದಿಸುತ್ತಿಲ್ಲ. ಈಗ ಬೆಲೆ 20ರಿಂದ 40 ರೂ. ಗೆ ಕುಸಿತವಾಗಿದೆ. ಆರಂಭದಲ್ಲಿ 130ರಿಂದ 140 ರೂ. ದರ ಇತ್ತು. ಜ್ಯೂಸ್ ಕಾರ್ಖಾನೆಗಳು ಆರಂಭವಾದರೆ ಹೆಚ್ಚಿನ ಹಣ್ಣು ಮಾರಾಟವಾಗಬಹುದು. ಆಗ ಬೆಲೆಯೂ ಏರಿಕೆಯಾಗುವ ವಿಶ್ವಾಸವಿದೆ. **–ಬಸವೇಗೌಡ, ಶಿಂಡೇನಹಳ್ಳಿ, ಮಾವು ಬೆಳೆಗಾರರು**

ಮೈಸೂರು ಭಾಗದಲ್ಲಿ ಫಸಲು ಕ್ಷೀಣಿಸಿದೆ

> ಹವಾಮಾನ ವೈಪರಿತ್ಯದಿಂದಾಗಿ ಮಾವು ಬೆಳೆ ಮೇಲೆ ದುಷ್ಪರಿಣಾಮ ಬೀರಿದ್ದು, ಈ ಬಾರಿ ಶೇ.40ರಷ್ಟು ಫಸಲು ಕ್ಷೀಣಿಸಿದೆ. ಬಿರು ಬಿಸಿಲು ಮತ್ತು ಅಕಾಲಿಕ ಮಳೆಯಿಂದಾಗಿ ಮಾವಿನ ಹೂವು ಉದುರಿ ಹೋಗಿದೆ. ಇದರಿಂದ ಸಹಜವಾಗಿ ಮಾವಿನ ಇಳುವರಿ ಕಡಿಮೆಯಾಗಿದೆ. ತೋಟಗಾರಿಕಾ ಇಲಾಖೆ ವತಿಯಿಂದ ಮಾವು ಮೇಳ ಆಯೋಜನೆಗೆ ಇನ್ನು ನಿರ್ಧಾರ ಮಾಡಿಲ್ಲ. ಸೋಮವಾರ ಸಭೆ ನಡೆಸಿ, ಈ ಬಗ್ಗೆ ನಿರ್ಧರಿಸಿ ಅಧಿಕೃತವಾಗಿ ಪ್ರಕಟಿಸಲಾಗುವುದು. **–ಮಂಜುನಾಥ್ ಅಂಗಡಿ, ಉಪ ನಿರ್ದೇಶಕರು, ತೋಟಗಾರಿಕಾ ಇಲಾಖೆ**

ಕಲಿಕೆ ನಂತರ ಸವಾಲು ಎದುರಿಸಲು ಸಜ್ಜಾಗಿ

ನರ್ಸಿಂಗ್ ವಿದ್ಯಾರ್ಥಿಗಳಿಗೆ ಪ್ರಾಧ್ಯಾಪಕಿ ಡಾ.ಪ್ರತಿಭಾ ಸ್ವಾಮಿ ಸಲಹೆ

ಮೈಸೂರು,ಮೇ 9(ಬಿಎಲ್‌ಯು)–ಕಲಿಕೆಯ ನಂತರ ನಿಜವಾದ ಸವಾಲು ಆರಂಭವಾಗಲಿದ್ದು, ಇದನ್ನು ಎದುರಿಸಲು ವಿದ್ಯಾರ್ಥಿಗಳು ಸಜ್ಜಾಗಬೇಕು ಎಂದು ನಿಮಾನ್ಸ್ ಕಾಲೇಜ್ ಆಫ್ ನರ್ಸಿಂಗ್ ಪ್ರಾಧ್ಯಾಪಕಿ ಡಾ.ಪ್ರತಿಭಾ ಸ್ವಾಮಿ ಕಿವಿಮಾತು ಹೇಳಿದರು.

ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯ ಶ್ರೀ ರಾಜೇಂದ್ರ ಶತಮಾನೋತ್ಸವ ಸಭಾಂಗಣದಲ್ಲಿ ಜೆಎಸ್‌ಎಸ್ ಸ್ಕೂಲ್ ಆಫ್ ನರ್ಸಿಂಗ್‌ನ ವಿದ್ಯಾರ್ಥಿಗಳಿಗೆ ಪ್ರತಿಜ್ಞಾ ವಿಧಿ ಬೋಧಿಸಿದ ನಂತರ ಮಾತನಾಡಿದ ಅವರು, ಕಲಿಕೆ ಮುಗಿದ ನಂತರ ಜವಾಬ್ದಾರಿ ಮುಗಿಯಿತು ಎಂಬ ಮನೋಭಾವ ಬೇಡ. ಕಲಿಕೆಯ ನಂತರವೇ ನಿಜವಾದ ಸವಾಲು ಆರಂಭವಾಗುತ್ತದೆ ಎಂದರು.

ವೃತ್ತಿಯಲ್ಲಿ ಬದ್ಧತೆ, ನಿಷ್ಠೆ ಹಾಗೂ ಪ್ರಾಮಾಣಿಕತೆ ಇದ್ದರೆ ತಾವು ಕರ್ತವ್ಯ ನಿರ್ವಹಿಸುವ ಕ್ಷೇತ್ರದಲ್ಲಿ ಯಶಸ್ವಿ ಮೆಟ್ಟಿಲು ಹತ್ತಲು ಸಾಧ್ಯವಾಗುತ್ತದೆ. ಈ ಬಗ್ಗೆ ವಿದ್ಯಾರ್ಥಿಗಳಲ್ಲಿ ಗಂಭೀರ ಚಿಂತನೆ ಅಗತ್ಯ ಎಂದು ಡಾ.ಪ್ರತಿಭಾ ಸ್ವಾಮಿ ಸಲಹೆ ನೀಡಿದರು.

ಕಮ್ಯೂನಿಟಿ ಹೆಲ್ತ್ ಅಧಿಕಾರಿಗಳ ನೇಮಕಾತಿಯನ್ನು ಸರ್ಕಾರ ಈಗ ಆರಂಭಿಸಿದೆ. ಇದರಿಂದ ನರ್ಸಿಂಗ್ ಕೋರ್ಸ್ ಕಲಿತ ವಿದ್ಯಾರ್ಥಿಗಳಿಗೆ ಉದ್ಯೋಗದಲ್ಲಿ ವಿಫುಲ ಅವಕಾಶಗಳಿದ್ದು, ಸಮುದಾಯದ ಆರೋಗ್ಯ ಕಾಪಾಡುವ ಈ ಉದ್ಯೋಗಕ್ಕೆ ಭವಿಷ್ಯದಲ್ಲಿ ಹೆಚ್ಚು ಬೇಡಿಕೆ ಇದೆ ಎಂದರು.

ಕಲಿಕೆ ನಂತರ ವೃತ್ತಿ ಕೌಶಲ್ಯವಿದ್ದರೆ ಉದ್ಯೋಗಾವಕಾಶ ಖಚಿತ. ಈ ನಿಟ್ಟಿನಲ್ಲಿ ಕೌಶಲ್ಯತೆ ರೂಢಿಸಿಕೊಳ್ಳಲು ಗಮನಹರಿಸಬೇಕು. ಈ ಹಿನ್ನೆಲೆಯಲ್ಲಿ ದೃಢ ಸಂಕಲ್ಪ ಮಾಡಿ, ಪರಿಶ್ರಮ ಪಟ್ಟರೆ ಉತ್ತಮ ಬದುಕು ಕಟ್ಟಿಕೊಳ್ಳಬಹುದು ಎಂದು ಹೇಳಿದರು.

ಜನರ ಆರೋಗ್ಯದ ಜವಾಬ್ದಾರಿಯ ಹಿನ್ನೆಲೆಯಲ್ಲಿ ನರ್ಸಿಂಗ್ ಕ್ಷೇತ್ರದಲ್ಲಿ ಪರಿಣಾಮಕಾರಿಯಾಗಿ ಕೆಲಸ ನಿರ್ವಹಿಸಬೇಕು. ಈ ಮೂಲಕ ಜನರ ನಂಬಿಕೆ ಉಳಿಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು. ಜೆಎಸ್‌ಎಸ್ ನರ್ಸಿಂಗ್ ಕಾಲೇಜಿನಲ್ಲಿ ದೊರೆಯುವ ಉತ್ತಮ ಬೋಧನೆಯನ್ನು ಸದುಪಯೋಗ ಮಾಡಿಕೊಳ್ಳಬೇಕು. ಈ ಕಾಲೇಜಿನಲ್ಲಿ ಶಿಸ್ತಿಗೆ ಮಹತ್ವವಿದ್ದು, ಉತ್ತಮ ಕಲಿಕೆ ಮೂಲಕ ವೃತ್ತಿಪರತೆ ಎತ್ತಿ ಹಿಡಿಯಬೇಕು ಎಂದು ಸಲಹೆ ನೀಡಿದರು. ವಾರ್ಷಿಕ ಕ್ರೀಡಾಕೂಟ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು. ಕಾಲೇಜಿನ ಪ್ರಿನ್ಸಿಪಾಲ್ ರೇಣುಕಾದೇವಿ, ವೈದ್ಯಕೀಯ ಶಿಕ್ಷಣ ವಿಭಾಗದ ನಿರ್ದೇಶಕ ಆರ್.ಮಹೇಶ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.



ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯ ಶ್ರೀ ರಾಜೇಂದ್ರ ಶತಮಾನೋತ್ಸವ ಸಭಾಂಗಣದಲ್ಲಿ ಜೆಎಸ್‌ಎಸ್ ಸ್ಕೂಲ್ ಆಫ್ ನರ್ಸಿಂಗ್‌ನ ವಿದ್ಯಾರ್ಥಿಗಳಿಗೆ ಪ್ರತಿಜ್ಞಾ ವಿಧಿ ಬೋಧಿಸುವ ಕಾರ್ಯಕ್ರಮವನ್ನು ನಿಮಾನ್ಸ್ ಕಾಲೇಜ್ ಆಫ್ ನರ್ಸಿಂಗ್ ಪ್ರಾಧ್ಯಾಪಕಿ ಡಾ.ಪ್ರತಿಭಾ ಸ್ವಾಮಿ ಉದ್ಘಾಟಿಸಿದರು.

ಮುದ್ರಾಪ್ರಾಣಾಯಾಮ ಶಿಬಿರ

ಮೈಸೂರು, ಮೇ 9–ಧನ್ಯ ಸ್ಕೂಲ್ ಆಫ್ ಯೋಗ ಹಾಗೂ ಮುದ್ರಾ ಪ್ರಾಣಾಯಾಮ ರಿಸರ್ಚ್ ಸೆಂಟರ್ ವತಿಯಿಂದ ಜೆಎಲ್‌ಬಿ ರಸ್ತೆಯಲ್ಲಿರುವ ಮಹಿಳಾ ಸಮಾಜದಲ್ಲಿ ಮೇ 11ರಿಂದ ಪ್ರತಿದಿನ ಸಂಜೆ 5.30ರಿಂದ 6.30ರವರೆಗೆ ಹಾಗೂ 6.30ರಿಂದ 7.30ರವರೆಗೆ ಮುದ್ರಾಪ್ರಾಣಾಯಾಮ ಹಾಗೂ ಸಂಕಲ್ಪ ಸಿದ್ಧಿ ಧ್ಯಾನ ಶಿಬಿರ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 9945614565, 9141096102 ಸಂಪರ್ಕಿಸಬಹುದು.

ಮೂಲವ್ಯಾಧಿ ವಿಶೇಷ ಚಿಕಿತ್ಸಾ ಶಿಬಿರ

ಮೈಸೂರು, ಮೇ 9–ಕಾವೇರಿ ಆಯುರ್ವೇದ ಆಸ್ಪತ್ರೆ ವತಿಯಿಂದ ಮೇ 11ರಿಂದ 20ರವರೆಗೆ ಉಚಿತ ಆಯುರ್ವೇದ ವೈದ್ಯಕೀಯ ತಪಾಸಣಾ ಮತ್ತು ಚಿಕಿತ್ಸಾ ಶಿಬಿರವನ್ನು ಬೆಳಗ್ಗೆ 9.30ರಿಂದ ಸಂಜೆ 4.30ರವರೆಗೆ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 9731799317, ದೂ. 0821–2970619 ಸಂಪರ್ಕಿಸಬಹುದು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

10.5.2026 ಭಾನುವಾರ, ಮಳೆ ನಕ್ಷತ್ರ: ಭರಣಿ 27.04.2026ರಿಂದ 10.05.2026ರವರೆಗೆ ಪರಾಭವ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಕೃಷ್ಣ ಪಕ್ಷ, ತಿಥಿ: ಅಷ್ಟಮಿ, ನಕ್ಷತ್ರ: ಧನಿಷ್ಠ, ರಾಹುಕಾಲ: ಸಂಜೆ 4.30ರಿಂದ 6ರವರೆಗೆ

- **ವ್ಯವಸ್ಥಾಪಕರು** : ಬುದ್ಧ ಪ್ರಜ್ಞೆ ಮಕ್ಕಳ ಮೈತ್ರಿ ಕಾರ್ಯಕ್ರಮ, ಸ್ಥಳ: ವಿಷ್ಣುವರ್ಧನ್ ಸ್ಮಾರಕ, ಉದ್ಬೂರು ಗೇಟ್, ಬೆಳಗ್ಗೆ 7.30 ರಿಂದ.
- **ರಾಮ್‌ಸನ್ಸ್ ಕ್ರೀಡಾ ಕೌಶಲ್ಯ** : ಪಾರಂಪರಿಕ ಹಾಸು ಆಟಗಳ 11 ನೇ ದ್ವೈವಾರ್ಷಿಕ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್, ಬೆಳಗ್ಗೆ 10 ರಿಂದ.
- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ** : ಬೆಳಗ್ಗೆ 6.30 ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9 ರಿಂದ ಬೊಜ್ಜು, ಸಕ್ಕರೆ ಕಾಯಿಲೆ, ಬಿಪಿ, ಕೀಲು ನೋವು, ಅಲರ್ಜಿ, ಚರ್ಮದ ರೋಗಗಳು, ಒತ್ತಡ, ಆತಂಕ, ಬಾಲನೆರೆ, ವಯೋಸಹಜ ಗುಣಗಳು, ದೃಷ್ಟಿಮಾಂದ್ಯ, ತಲೆ ನೋವು, ಕೆಮ್ಮು, ಅಸ್ತಮಾ, ಪಿಸಿಓಡಿ, ಪುರುಷ ಹಾಗೂ ಸ್ತ್ರೀ ಬಂಜೆತನ ತಪಾಸಣಾ ಶಿಬಿರ, ಬೆಳಗ್ಗೆ 9.30 ರಿಂದ ಆರೋಗ್ಯ ತಪಾಸಣೆ ಮತ್ತು ಜಾಗೃತಿ ಶಿಬಿರ, ಚರ್ಮ ಆರೈಕೆ ಮತ್ತು ಡಿಟಾಕ್ಸಿಫಿಕೇಶನ್ ಯೋಗ ಶಿಬಿರ, ಮಧುಮೇಹದ ಗಾಯಗಳ ಚಿಕಿತ್ಸಾ ಶಿಬಿರ, ಅರ್ಥರೈಟಿಸ್ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ.
- **ಸುಸಂಘ ಬಸವ ಬಳಗ** : ಬಸವ ಜಯಂತಿ ಕಾರ್ಯಕ್ರಮ, ಸಾನ್ನಿಧ್ಯ : ಕುದೇರು ಮಠಾಧ್ಯಕ್ಷ ಶ್ರೀ ಗುರುಶಾಂತ ಸ್ವಾಮೀಜಿ, ಅಧ್ಯಕ್ಷತೆ : ಶ್ರೀ ಕುಂದೂರು ಮಠದ ಅಧ್ಯಕ್ಷ ಡಾ. ಶ್ರೀ ಶರತ್‌ಚಂದ್ರ ಸ್ವಾಮೀಜಿ, ಹಿರಿಯ ಸಾಹಿತಿ ಎಸ್. ಶಿವರಾಜಪ್ಪ ಅವರಿಂದ ಬಸವಣ್ಣನವರ ಜೀವನ ಮತ್ತು ಸಾಧನೆ ಕುರಿತು ಉಪನ್ಯಾಸ, ಸ್ಥಳ: ಎಸ್.ಎನ್.ಎಸ್. ಸ್ಕೂಲ್, ಆಲನಹಳ್ಳಿ, ಬೆಳಗ್ಗೆ 10.30ಕ್ಕೆ.
- **ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜು** : ಮುಕ್ತ ದಿನ, ಅಧ್ಯಕ್ಷತೆ : ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಮುಖ್ಯ ಅತಿಥಿಗಳು : ಇನ್‌ಫೋಸಿಸ್ ಅಸೋಸಿಯೇಟ್ ಉಪಾಧ್ಯಕ್ಷ ಕೆ.ಎಸ್. ಸುಂದರ್, ಗೌರವ ಅತಿಥಿಗಳು : ಸೀನಿಯರ್ ಡಿಸೈನ್ ಇಂಜಿನಿಯರ್ ವಿ. ರವೀಂದ್ರ, ಮಹಾರಾಜ ಸರ್ಕಾರಿ ಪಿಯು ಕಾಲೇಜು ಪ್ರಿನ್ಸಿಪಾಲ್ ಉದಯ್ ಶಂಕರ್, ವಿದ್ಯಾವರ್ಧಕ ಸಂಘದ ಗೌರವ ಕಾರ್ಯದರ್ಶಿ ಪಿ. ವಿಶ್ವನಾಥ್, ಸ್ಥಳ: ಸಾಹುಕಾರ್ ಚೆನ್ನಯ್ಯ ಸಭಾಂಗಣ, ಬೆಳಗ್ಗೆ 10.30ಕ್ಕೆ.
- **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ಅಸೋಸಿಯೇಷನ್ ಆಫ್ ಅಲೈಯನ್ಸ್ ಸರಸ್ವತಿಪುರಂ**: ತಾಯಂದಿರಿಗೆ ಗೌರವ ಸಮರ್ಪಣೆ, ಅಧ್ಯಕ್ಷತೆ: ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಉದ್ಘಾಟನೆ: ಹಿರಿಯ ಪತ್ರಕರ್ತ ಅಂಶಿಪ್ರಸನ್ನಕುಮಾರ್, ಮುಖ್ಯ ಅತಿಥಿಗಳು: ಅಸೋಸಿಯೇಷನ್ ಆಫ್ ಅಲೈಯನ್ಸ್ ಸರಸ್ವತಿಪುರಂ ಅಧ್ಯಕ್ಷ ಎಸ್.ವೆಂಕಟರಮಣಪ್ಪ, ಸುಮಾ ರಾಜ್‌ಕುಮಾರ್, ಡಾ. ಪಾಯಲ್, ಹೆಚ್.ವಿ. ಸುಬ್ಬರಾಜ್, ಸ್ಥಳ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಸಭಾಂಗಣ, ವಿಜಯನಗರ 1ನೇ ಹಂತ, ಬೆಳಗ್ಗೆ 11ಕ್ಕೆ.
- **ಸುವರ್ಣ ಬೆಳಕು ಫೌಂಡೇಷನ್** : ರಾಜ್ಯ ಮಟ್ಟದ ಮುಕ್ತ ಯೋಗಾಸನ ಸ್ಪರ್ಧೆ, ಉದ್ಘಾಟನೆ : ಮಾಜಿ ಸಚಿವ ಪ್ರಮೋದ್ ಮಧ್ವರಾಜ್, ಸ್ಪರ್ಧೆಗೆ ಚಾಲನೆ : ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಉಪಸ್ಥಿತರು : ಶ್ರೀಮತಿ ವಿಮಲ ವೀರೇಶ್, ಶ್ರೀ ಇಳೈ ಆಳ್ವಾರ್ ಸ್ವಾಮೀಜಿ, ಸಮಾಜ ಸೇವಕ ಸಿ. ಮೋಹನ್, ಶ್ರೀನಾಥ್, ಜಯಶಂಕರ್, ಡಾ. ವೈ. ಸುಮ, ಸ್ಥಳ: ಸುವರ್ಣ ಬೆಳಕು ಫೌಂಡೇಷನ್ ಆವರಣ, ಬೆಳಗ್ಗೆ 11ಕ್ಕೆ
- **ಶ್ರೀ ಸುಶಮೀಂದ್ರ ಸೇವಾ ಪ್ರತಿಷ್ಠಾನ, ಮೈಸೂರು–ನಂಜನಗೂಡು**: ಶ್ರೀ ಸುಶಮೀಂದ್ರ ಟ್ರೋಫಿ ದಶಮಾನೋತ್ಸವ ವರ್ಷ ಸಮಾರೋಪ ಸಮಾರಂಭ, ಅಧ್ಯಕ್ಷತೆ: ಶ್ರೀಕಂಠಕುಮಾರ್, ಮುಖ್ಯ ಅತಿಥಿಗಳು: ಶಾಸಕ ಶ್ರೀವತ್ಸ, ಡಾ.ರಾಘವೇಂದ್ರ ಪೈ, ಪತ್ರಕರ್ತ ರಾಜೇಶ್ ಬೋರೆ, ಸ್ಥಳ: ರೈಲ್ವೆ ಮೈದಾನ, ಸಂಜೆ 4ಕ್ಕೆ.
- **ಸುರಭಿ ಗಾನಕಲಾಮಂದಿರ ಚಾರಿಟಬಲ್ ಟ್ರಸ್ಟ್** : ವಿಷಯಾಧಾರಿತ ಸಂಗೀತ ಕಾರ್ಯಕ್ರಮ, ವಿಶೇಷ ಆಹ್ವಾನಿತರು : ವಿದುಷಿ ಕೋವಿಲಡಿ ಆರ್. ಕಲಾ (ಹಿರಿಯ ಸಂಗೀತ ವಿದುಷಿ), ವಾಸುದೇವ್ ಭಟ್, ಅಧ್ಯಕ್ಷರು, ಬಿಎಸ್‌ಎಸ್ ವಿದ್ಯಾಸಂಸ್ಥೆ, ವಿದುಷಿ ಎಂ.ಕೆ. ತೇಜಸ್ವಿನಿ ಅವರಿಂದ ಗಾಯನ, ವಿದ್ವಾನ್ ಮತ್ತೂರು ಶ್ರೀನಿಧಿ–ವಯೋಲಿನ್, ವಿದ್ವಾನ್ ಶಶಿಭೂಷಣ್ ಎನ್.ಕೆ.–ಮೃದಂಗ, ವಿದ್ವಾನ್ ಪ್ರಜ್ವಲ್ ಭಾರದ್ವಾಜ್–ಮೃದಂಗ, ಸ್ಥಳ: ಬಿಎಸ್‌ಎಸ್ ವಿದ್ಯೋದಯ ಭಗಿನಿ ಸಮಾಜ ಸೇವಾ, ಕೃಷ್ಣಮೂರ್ತಿಪುರಂ, ಸಂಜೆ 5.30ಕ್ಕೆ.
- **ಶ್ರೀರಾಮಕೃಷ್ಣ ಆಶ್ರಮ** : ಸ್ವಾಮಿ ಸರ್ವದರ್ಶನಾನಂದ ಅವರಿಂದ ಸಂತ ಶ್ರೇಷ್ಠರು ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಗೀತಾರಾಧನ, 6.30 ಚಿಂತನ– ನಿಂಗರಾಜು ತೋರಹಳ್ಳಿ, 6.35 ಮತ್ತು ಸಂಜೆ 6.10 ಸಿನಿಮಾಯಾನ–ಜನ ಮೆಚ್ಚಿದ ಕನ್ನಡ ಚಿತ್ರಗಳ ನೆನಪಿನ ಮಾಲೆ, ಪ್ರಸ್ತುತಿ : ಶ್ರೀನಿವಾಸ್ ಪ್ರಸಾದ್, 6.40 ಪದಸಂಸ್ಕೃತಿ–ಕನ್ನಡ ಪದಗಳ ಬಳಕೆ ಕಲಿಕೆಯ ವಿಶಿಷ್ಟ ಬಾನುಲಿ ಸರಣಿ, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ–ಕೃಪಾಕರ ಸೇನಾನಿ ಅವರ ಕೆನ್ನಾಯಿಯ ಜಾಡಿನಲಿ ಕೃತಿಯ ಬಾನುಲಿ ಓದು. ಪ್ರಸ್ತುತಿ: ಜಿ ಶಾಂತಕುಮಾರ್, 8.30 ಮತ್ತು ಸಂಜೆ 5.30 ಚೂಟಿ ಚೂಟಿ ಚುಟುಕ್ ಗುಳುಂ ಗುಟುಕ್ – ಶಿಶುಗೀತೆಗಳ ಕಾರ್ಯಕ್ರಮ, 8.35 ಚಿತ್ರಗೀತೆಗಳು, 9.40 ನಮ್ಮ ಆರೋಗ್ಯ–ವಿಶ್ವ ಲೂಪಸ್ ದಿನದ ಸಂದರ್ಭದಲ್ಲಿ ಲೂಪಸ್ ಲಕ್ಷಣಗಳು ಮತ್ತು ಚಿಕಿತ್ಸೆ ಈ ಕುರಿತು ಮೈಸೂರಿನ ರುಮ್ಯಟಾಲಜಿ ತಜ್ಞರಾದ ಡಾ. ಸಂಗೀತಾ.ಕೆ.ಎನ್ ಅವರೊಂದಿಗೆ ಮಾತುಕತೆ, ಇವರೊಂದಿಗೆ ಭಾಗವಹಿಸುತ್ತಾರೆ–ತೇಜಸ್ವಿನಿ ಗಿರೀಶ್, 10.00ಕೇಳಿಗಿಳಿಗಳೇ–ಕಥೆ ಕೇಳು ಪುಟ್ಟ, ಪ್ರಸ್ತುತಿ–ಬಿ.ಜಿ.ಕವಿತಾ, 10.15 ಚಿತ್ರಗೀತೆಗಳು, 10.30 ಮಕ್ಕಳ ಮಂಟಪ– ಮಾರ್ಗದರ್ಶಿ ಶಿಕ್ಷಣಕ್ಕೊಂದು ಸೋಪಾನ ಮಾಲಿಕೆಯಲ್ಲಿ ಸದ್ವಿದ್ಯಾ ಶಾಲೆಯ ಶಿಕ್ಷಕರಾದ ಮಾನಸ ಮಂಜುನಾಥ್ ಅವರೊಂದಿಗೆ ಮಾತುಕತೆ, ವಿಷಯ–ಶಾಲಾ ನಡೆವಳಿಕೆ ಹಾಗೂ ಶಿಸ್ತು ಇವರೊಂದಿಗೆ ಭಾಗವಹಿಸುತ್ತಾರೆ ದಿಗ್ವಿಜಯ್ .ಬಿ, 11.00 ಮಿಶ್ರಮಾಧುರ್ಯ

ಮಧ್ಯಾಹ್ನ: 12.05 ವನಿತಾ ವಿಹಾರ–ಮಹಿಳೆಯರ ಆರೋಗ್ಯ, ಆಹಾರ ಮತ್ತು ಆಯುರ್ವೇದ ಈ ಕುರಿತು ಆಯುರ್ವೇದ ತಜ್ಞರಾದ ಡಾ.ಅನುಶ್ರೀ ಅವರೊಂದಿಗೆ ಸಂದರ್ಶನ, ಸಂದರ್ಶಕರು– ಆಶಾ, 12.35 ಭಕ್ತಿಗೀತೆಗಳು, 12.45 ಜನಪದ ಸಂಗೀತ–ರತ್ನಮ್ಮ ಮತ್ತು ಸಂಗಡಿಗರಿಂದ ಪಡುವಲಮ್ಮನ ಹಾಡು, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ–ಪ್ರಧಾನ ಮಂತ್ರಿ ವಿಕಸಿತ್ ಭಾರತ್ ಜಿ. ರಾಮ್ ಜಿ ಅಭಿಯಾನ ಕುರಿತು ಮಾಹಿತಿ, 1.20 ಭಾವಗೀತೆಗಳು– ದೀಪಾ ಸತ್ಯನಾರಾಯಣ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ಕನ್ನಡ ಚಲನಚಿತ್ರ ಧ್ವನಿವಾಹಿನಿ– ಬಂಧನ, 3.40 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ.ರವೀಂದ್ರ ಕುಮಾರ್, 3.45 ಕರ್ನಾಟಕ ಶಾಸ್ತ್ರೀಯ ಸಂಗೀತ, ಅಮೃತಾ ವೆಂಕಟೇಶ್–ಹಾಡುಗಾರಿಕೆ, 4.45 ಚಿತ್ರಗೀತೆಗಳು, 6.50 ಕೃಷಿರಂಗ: ಹಟ್ಟಿಹರಟೆ–ವಾರದ ಗ್ರಾಮೀಣ ಚರ್ಚೆ, ಪ್ರಸ್ತುತಿ: ಎನ್.ಕೇಶವ ಮೂರ್ತಿ, ಬಿ.ಜಿ.ಕವಿತಾ, ಡಾ.ಮೈಸೂರು ಉಮೇಶ್, ಕೃಷಿಲೋಕ, ಕೃಷಿ ದರ್ಪಣ–ವಾರದ ಕೃಷಿರಂಗ, ಕಿಸಾನ್‌ವಾಣಿ ಕಾರ್ಯಕ್ರಮಗಳ ಮುನ್ನೋಟ, ಪ್ರಸ್ತುತಿ: ಆರ್.ಲೋಕೇಶ್ವರಿ, 7.45 ಕನ್ನಡದಲ್ಲಿ ಭಾಷಣ– ಜನಪದದಲ್ಲಿ ಹೆಣ್ಣು ಈ ಕುರಿತು ಮಾತನಾಡುತ್ತಾರೆ ಬಿ.ಕಾಂತಪ್ಪ, 8.00 ಪ್ರಧಾನ ಮಂತ್ರಿಗಳಾದ ನರೇಂದ್ರ ಮೋದಿ ಅವರ ಬೆಂಗಳೂರು ಭೇಟಿ ಕುರಿತ ಬಾನುಲಿ ವರದಿ, 8.30 ಹಿಂದಿ ಚಿತ್ರಗೀತೆಗಳು, 9.30 ರಾಷ್ಟ್ರೀಯ ಕಾರ್ಯಕ್ರಮದಲ್ಲಿ ರೂಪಕ, 10.00 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ, ವಿದ್ವಾನ್ ಡಿ. ಶೀನಿವಾಸ್ ಅವರ ಕರ್ನಾಟಕ ಶಾಸ್ತ್ರೀಯ ವೀಣಾ ವಾದನ

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 10 ಭಾನುವಾರ 2026

47

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 47 | ಸಂಚಿಕೆ: 24 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

50 ವರ್ಷಗಳ ರಾಜಕೀಯ ಸಾರ್ಥಕ ಸೇವೆ; ಚಿತ್ರದುರ್ಗದಲ್ಲಿ ಬಿಎಸ್‌ವೈ ಅಭಿಮಾನೋತ್ಸವ

2028ಕ್ಕೆ 175 ಸ್ಥಾನಗಳ ಗೆದ್ದು ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ

- ಮಾಜಿ ಸಿಎಂ, ಬಿಜೆಪಿ ಧುರೀಣ ಬಿ.ಎಸ್.ಯಡಿಯೂರಪ್ಪ ಘೋಷಣೆ
- ಈ ಸಂದೇಶ ನೀಡಲೆಂದೇ ಅಮಿತ್ ಶಾ ಚಿತ್ರದುರ್ಗಕ್ಕೆ ಬಂದಿದ್ದಾರೆ
- ಜನಸಾಗರ, ಗುರುವರ್ಯರ ಕಂಡು ಬಾವುಕರಾದ ಬಿಎಸ್‌ವೈ

ಚಿತ್ರದುರ್ಗ: ಕರ್ನಾಟಕದಲ್ಲಿ 2028ರ ಚುನಾವಣೆಯಲ್ಲಿ ಬಿಜೆಪಿ ಭಾರೀ ಬಹುಮತದೊಂದಿಗೆ ಸರ್ಕಾರ ರಚಿಸಲಿದೆ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರು ಇಂದಿಲ್ಲಿ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಚಿತ್ರದುರ್ಗದಲ್ಲಿ ಶನಿವಾರ 'ಬಿಎಸ್‌ವೈ ಅಭಿಮಾನೋತ್ಸವ' ಸಮಾರಂಭದಲ್ಲಿ ನೆರೆದಿದ್ದ ಜನಸಮೂಹದ ಮುಂದೆ ಬಾವುಕರಾಗಿ ಮಾತನಾಡಿದ ಅವರು, ಅಮಿತ್ ಶಾ ಅವರು ಕೇವಲ ನನ್ನನ್ನು ಅಭಿನಂದಿಸುವುದಕ್ಕಷ್ಟೇ ಬಂದಿಲ್ಲ, ಈ ವೇದಿಕೆಯ ಮೂಲಕ ಕರ್ನಾಟಕದಲ್ಲಿ 2028ರ ಚುನಾವಣೆಯಲ್ಲಿ ಪಶ್ಚಿಮ ಬಂಗಾಳದ ಫಲಿತಾಂಶ ಇಲ್ಲಿಯೂ ಮರುಕಳಿಸಿ, 224 ಕ್ಷೇತ್ರಗಳ ಪೈಕಿ 175 ಕ್ಷೇತ್ರಗಳಲ್ಲಿ ಕಮಲ ಅರಳಲಿದೆ ಎಂಬ ಸಂದೇಶವನ್ನು ನೀಡಲು ಬಂದಿದ್ದಾರೆ. ಇದು ಕೇವಲ ಯಡಿಯೂರಪ್ಪನವರ ಅಭಿಮಾನೋತ್ಸವ ಅಷ್ಟೇ ಅಲ್ಲ, ಪ್ರಧಾನಿ ಮೋದಿ ಹಾಗೂ ಅಮಿತ್ ಶಾ ಅವರು ಪಂಚ ರಾಜ್ಯಗಳ ಚುನಾವಣೆಗಳಲ್ಲಿ ದಿಗ್ವಿಜಯ ಸಾಧಿಸಿದ ಸಂತೋಷದ ಸಂಭ್ರಮೋತ್ಸವವೂ ಹೌದು ಎಂದರು.

ಜನ್ಮಾಂತರಗಳ ಸೌಭಾಗ್ಯ: ಮದಕರಿ ನಾಯಕ ಆಳಿದ ನಾಡು, ವೀರ ವನಿತೆ ಒನಕೆ ಓಬವ್ವರ ಜನ್ಮಭೂಮಿ, ಶರಣ ಶ್ರೇಷ್ಠರು ನಡೆದಾಡಿದ ತಪೋವನವಾದ ಐತಿಹಾಸಿಕ ಚಿತ್ರದುರ್ಗಕ್ಕೆ ಇಂದು ನಾಡಿನ ಮೂಲೆ ಮೂಲೆಯಿಂದ ಹರಿದು ಬಂದಿರುವ ಜನಸಾಗರದ ಮುಂದೆ ಮಾತು ಹೊರಡುತ್ತಿಲ್ಲ. ನಿಮ್ಮ ಪ್ರೀತಿ, ಅಭಿಮಾನ ಕಂಡು ನನಗೆ ಸಾರ್ಥಕ ಭಾವ ಮೂಡುತ್ತಿದೆ. ▶ 10ನೇ ಪುಟಕ್ಕೆ




ಚಿತ್ರದುರ್ಗದಲ್ಲಿ ಆಯೋಜಿಸಿದ್ದ 'ಬಿಎಸ್‌ವೈ ಅಭಿಮಾನೋತ್ಸವ' ಸಮಾರಂಭವನ್ನು ಕೇಂದ್ರದ ಗೃಹ ಸಚಿವ ಅಮಿತ್ ಶಾ ಉದ್ಘಾಟಿಸಿದರು. ಈ ವೇಳೆ ಮಾಜಿ ಸಿಎಂ ಯಡಿಯೂರಪ್ಪ ಸುತ್ತೂರು ಶ್ರೀಗಳಾದ ಶಿವರಾತ್ರಿ ದೇಶಿಕೇಂದ್ರ ಸ್ವಾಮಿ, ಮಾಜಿ ಸಿಎಂ ಜಗದೀಶ್ ಶೆಟ್ಟರ್, ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ, ಮಾಜಿ ಡಿಸಿಎಂ ಗೋವಿಂದ ಕಾರಜೋಳ, ಮಾಜಿ ಸಚಿವ ಶ್ರೀರಾಮುಲು, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಇನ್ನಿತರರು ಭಾಗವಹಿಸಿದ್ದರು.

ಯಡಿಯೂರಪ್ಪರಂತಹ ನಾಯಕ ದಕ್ಷಿಣ ಭಾರತದಲ್ಲಿ ಮತ್ತೊಬ್ಬರಿಲ್ಲ

ಇಲ್ಲಿ ಬಿಜೆಪಿ ಸರ್ಕಾರ ತಂದಿದ್ದೂ ಇವರೇ: ಅಮಿತ್ ಶಾ ಬಣ್ಣನೆ

ಚಿತ್ರದುರ್ಗ: ಬಿ.ಎಸ್.ಯಡಿಯೂರಪ್ಪ ಅವರಂತಹ ನಾಯಕ ದಕ್ಷಿಣ ಭಾರತದಲ್ಲಿ ಯಾರೂ ಇಲ್ಲ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹಾಡಿ ಹೊಗಳಿದ್ದಾರೆ.



ಅಮಿತ್ ಶಾ

ಯಡಿಯೂರಪ್ಪ ಅಭಿಮಾನೋತ್ಸವ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ದೇಶದ ರೈತರ ನಾಯಕ ಯಡಿಯೂರಪ್ಪ ಅವರು 50 ವರ್ಷಗಳ ರಾಜಕೀಯ ಸೇವೆ ಮಾಡಿದ್ದಾರೆ. ಯಡಿಯೂರಪ್ಪ ವ್ಯಕ್ತಿತ್ವದ ಕಾರಣದಿಂದಲೇ ಎಲ್ಲಾ ಧರ್ಮದ ಸ್ವಾಮೀಜಿಗಳು ವೇದಿಕೆ ಮೇಲಿದ್ದಾರೆ. ವೇದಿಕೆಯಲ್ಲಿ ಎಲ್ಲಾ ವರ್ಗದ ಸ್ವಾಮೀಜಿಗಳನ್ನು ಕಂಡು ಸಂತೋಷದ ಜೊತೆಗೆ ಆಶ್ಚರ್ಯವಾಗಿದೆ. ಈ ಕ್ಷಣ ರಾಜ್ಯ ಮತ್ತು ದೇಶಕ್ಕೆ ಒಂದು ಸಂದೇಶ ರವಾನೆ ಮಾಡಿದೆ. ಇದು ಅತ್ಯಂತ ಮಹತ್ವದ ಸಂಗತಿಯಾಗಿದೆ ಎಂದರು.

ರಾಜ್ಯದಲ್ಲಿ ಅಧಿಕಾರ ಹಿಡಿಯುತ್ತೇವೆ: ಕರ್ನಾಟಕ ಧರ್ಮಭೂಮಿ, ಇಲ್ಲಿ ಧರ್ಮದ ವಿಚಾರಗಳ ಮಾರ್ಗದರ್ಶನ ಆಗುತ್ತಿದೆ. ಶಿಕ್ಷಣ ಸೇರಿ ಹಲವು ಕ್ಷೇತ್ರದಲ್ಲಿ ಮಠ–ಮಾನ್ಯಗಳು ಕೆಲಸ ಮಾಡುತ್ತಿವೆ. ಇದು ಮದಕರಿ ನಾಯಕರ ಪುಣ್ಯಭೂಮಿ. ಇಲ್ಲಿ ಒಂದು ಪ್ರತಿಮೆ ನಿರ್ಮಾಣ ಮಾಡಿಲ್ಲ. ಚಿಂತೆ ಬೇಡ ಮೋದಿ ಇದ್ದಾರೆ, ಮದಕರಿ ನಾಯಕರ ಪ್ರತಿಮೆ ನಿರ್ಮಾಣ ಮಾಡುತ್ತೇವೆ. ▶ 10ನೇ ಪುಟಕ್ಕೆ

ಇಂದು ಮುಖ್ಯಮಂತ್ರಿಯಾಗಿ ವಿಜಯ್ ಪ್ರಮಾಣ

ಮೇ 13ಕ್ಕೆ ಬಹುಮತ ಸಾಬೀತು



ಚೆನ್ನೈ: ತಮಿಳುನಾಡಿನಲ್ಲಿ ಐದು ದಿನಗಳ ರಾಜಕೀಯ ಹೈಡ್ರಾಮಕ್ಕೆ ಶನಿವಾರ ಸಂಜೆ ಕೊನೆಗೂ ತೆರೆ ಬಿದ್ದಿದ್ದು, ಏಕೈಕ ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿರುವ ತಮಿಳಗ ವೆಟ್ರಿ ಕಳಗಂ (ಟಿವಿಕೆ) ಮುಖ್ಯಸ್ಥ ವಿಜಯ್ ಅವರು ಭಾನುವಾರ ಬೆಳಗ್ಗೆ 10ಕ್ಕೆ ನೂತನ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಲಿದ್ದಾರೆ.

ದಳಪತಿ ವಿಜಯ್ ಅವರು ಇಂದು ಸಂಜೆ ನಾಲ್ಕನೇ ಬಾರಿ ರಾಜ್ಯಪಾಲ ಆರ್.ವಿ.ಅರ್ಲೇಕರ್ ಅವರನ್ನು ಭೇಟಿ ಮಾಡಿ ಸರ್ಕಾರ ರಚನೆಗೆ ಹಕ್ಕು ಮಂಡಿಸಿದ್ದರು. ಹಿರಿಯ ಟಿವಿಕೆ ನಾಯಕರೊಂದಿಗೆ ರಾಜ್ಯಪಾಲರನ್ನು ಭೇಟಿ ಮಾಡಿದ್ದ ವಿಜಯ್, 120 ಶಾಸಕರ ಬೆಂಬಲ ಪತ್ರಗಳನ್ನು ಸಲ್ಲಿಸಿದ್ದರು.

ದಳಪತಿ ವಿಜಯ್ ನೀಡಿದ ಸಂಖ್ಯೆಯಿಂದ ತೃಪ್ತರಾದ ರಾಜ್ಯಪಾಲರು ಕೊನೆಗೂ ಸರ್ಕಾರ ರಚಿಸಲು ಆಹ್ವಾನ ನೀಡಿದ್ದಾರೆ. ಅಲ್ಲದೆ ಮೇ 13ರಂದು ವಿಧಾನ ಸಭೆಯಲ್ಲಿ ಬಹುಮತ ಸಾಬೀತುಪಡಿಸುವಂತೆ ರಾಜ್ಯಪಾಲರು, ವಿಜಯ್ ಅವರಿಗೆ ಸೂಚಿಸಿದ್ದಾರೆ ಎಂದು ತಮಿಳುನಾಡು ಲೋಕಭವನ ತಿಳಿಸಿದೆ.

ಏಪ್ರಿಲ್ 23ರಂದು ನಡೆದ ವಿಧಾನಸಭಾ ಚುನಾವಣೆಯಲ್ಲಿ 108 ಸ್ಥಾನಗಳೊಂದಿಗೆ ಏಕೈಕ ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿದ ▶ 10ನೇ ಪುಟಕ್ಕೆ

ದೇಶದ ರಕ್ಷಣಾ ಪಡೆಗಳ ನೂತನ ಮುಖ್ಯಸ್ಥರಾಗಿ ಲೆಫ್ಟಿನೆಂಟ್ ಜನರಲ್ ರಾಜಾ ಸುಬ್ರಮಣಿ ನೇಮಕ

ನವದೆಹಲಿ,ಮೇ9–ಭಾರತದ ರಕ್ಷಣಾ ಪಡೆಗಳ ನೂತನ ಮುಖ್ಯಸ್ಥರನ್ನಾಗಿ ಲೆಫ್ಟಿನೆಂಟ್ ಜನರಲ್ ಎನ್.ಎಸ್ ರಾಜಾ ಸುಬ್ರಮಣಿ (ನಿವೃತ್ತ) ಅವರನ್ನ ಕೇಂದ್ರ ಸರ್ಕಾರ ನೇಮಕ ಮಾಡಿದೆ. ಇದರೊಂದಿಗೆ ಭಾರತೀಯ ನೌಕಾಪಡೆಯ ನೂತನ ಮುಖ್ಯಸ್ಥರಾಗಿ ವೈಸ್ ಅಡ್ಮಿರಲ್ ಕೃಷ್ಣ ಸ್ವಾಮಿನಾಥನ್ ಅವರನ್ನ ನೇಮಕ ಮಾಡಲಾಗಿದೆ.



ಎನ್.ಎಸ್.ರಾಜಾ ಸುಬ್ರಮಣಿ

ಮೇ 30ರಂದು ಸಿಡಿಎಸ್ ಆಗಿ ತಮ್ಮ ಅಧಿಕಾರಾವಧಿಯನ್ನು ಪೂರ್ಣಗೊಳಿಸಲಿರುವ ಜನರಲ್ ಅನಿಲ್ ಚೌಹಾಣ್ ಅವರ ಸ್ಥಾನವನ್ನು ರಾಜಾ ಸುಬ್ರಮಣಿ ವಹಿಸಿಕೊಳ್ಳಲಿದ್ದಾರೆ. ಲೆಫ್ಟಿನೆಂಟ್ ಜನರಲ್ ಸುಬ್ರಮಣಿ ಪ್ರಸ್ತುತ ರಾಷ್ಟ್ರೀಯ ಭದ್ರತಾ ಮಂಡಳಿ ಸಚಿವಾಲಯದಲ್ಲಿ ಮಿಲಿಟರಿ ಸಲಹೆಗಾರರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಕಳೆದ ವರ್ಷ ಜುಲೈ 31ರಂದು ಅವರು ಸೇನಾ ಸಿಬ್ಬಂದಿಯ ಉಪ ಮುಖ್ಯಸ್ಥರಾಗಿ (VSOAS) ಸೇನೆಯಿಂದ ನಿವೃತ್ತರಾಗಿದ್ದರು.

ಲೆಫ್ಟಿನೆಂಟ್ ಜನರಲ್ ಎನ್.ಎಸ್.ರಾಜಾ ಸುಬ್ರಮಣಿ ಪ್ರಸ್ತುತ ರಾಷ್ಟ್ರೀಯ ಭದ್ರತಾ ಮಂಡಳಿಯಲ್ಲಿ ಮಿಲಿಟರಿ ಸಲಹೆಗಾರರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಕಳೆದ ವರ್ಷ ಸೆಪ್ಟೆಂಬರ್ 1ರಂದು ಈ ಜವಾಬ್ದಾರಿ ವಹಿಸಿಕೊಂಡಿದ್ದರು. ಅದಕ್ಕೂ ಮೊದಲು, ಜುಲೈ 2024ರಿಂದ ಜುಲೈ 2025ರ ವರೆಗೆ ಭೂಸೇನೆ ಉಪ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸಿದ್ದರು. ಅಷ್ಟೇ ಅಲ್ಲದೆ,

ಮಾರ್ಚ್ 2023ರಿಂದ ಜೂನ್ 2024ರವರೆಗೆ ▶ 10ನೇ ಪುಟಕ್ಕೆ

98 ವರ್ಷದ ಬಿಜೆಪಿ ಕಾರ್ಯಕರ್ತನಿಂದ ಮೋದಿಗೆ ಆಶೀರ್ವಾದ!



98 ವರ್ಷದ ಬಿಜೆಪಿ ಕಾರ್ಯಕರ್ತ ಮಖನ್ ಲಾಲ್ ಸರ್ಕಾರ್ ಅವರಿಂದ ಪ್ರಧಾನಿ ಮೋದಿ ಆಶೀರ್ವಾದ ಪಡೆದರು.

ಕೋಲ್ಕತ್ತ: ಬಂಗಾಳದಲ್ಲಿ ಮೊದಲ ಬಿಜೆಪಿ ಮುಖ್ಯಮಂತ್ರಿಯಾಗಿ ಸುವೇಂದು ಅಧಿಕಾರಿ ಪ್ರಮಾಣ ವಚನ ಸ್ವೀಕರಿಸಿದ ಬೃಹತ್ ವೇದಿಕೆಯಲ್ಲಿ ಪ್ರಧಾನಿ ನರೇಂದ್ರ ಮೋದಿಯಾದಿಯಾಗಿ ಬಿಜೆಪಿಯ ಹಿರಿಯ ಮುಖಂಡರು, ಕಾರ್ಯಕರ್ತರು ಉಪಸ್ಥಿತರಿದ್ದರು. ಅವರಲ್ಲಿ 98 ವರ್ಷದ ಬಿಜೆಪಿ ಕಾರ್ಯಕರ್ತ ಮಖನ್ ಲಾಲ್ ಸರ್ಕಾರ್ ಕೂಡ ಒಬ್ಬರಾಗಿದ್ದರು. ವೇದಿಕೆ ಮೇಲೆ ಸರ್ಕಾರ್ ಅವರನ್ನು ಕಂಡ ಮೋದಿ, ಅವರ ಪಾದಗಳನ್ನು ಮುಟ್ಟಿ ಅಪ್ಪಿಕೊಂಡರು, ಪ್ರಧಾನಿ ಸರ್ಕಾರ್ ಅವರ ಆಶೀರ್ವಾದ ಪಡೆಯುತ್ತಿರುವುದನ್ನು ಕಂಡು ▶ 10ನೇ ಪುಟಕ್ಕೆ


ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಮೊದಲ ಮುಖ್ಯಮಂತ್ರಿಯಾಗಿ ಸುವೇಂದು ಅಧಿಕಾರಿ ಪ್ರಮಾಣ

ಐತಿಹಾಸಿಕ ಕ್ಷಣಕ್ಕೆ ಮೋದಿ, ಶಾ, ಎನ್‌ಡಿಎ ಆಡಳಿತವಿರುವ ರಾಜ್ಯಗಳ 20 ಸಿಎಂಗಳು ಸಾಕ್ಷಿ

ಕೋಲ್ಕತ್ತಾ: ಪಶ್ಚಿಮ ಬಂಗಾಳದ ರಾಜಕೀಯ ಇತಿಹಾಸದಲ್ಲಿ ಹೊಸ ಪರ್ವ ಶುರುವಾಗಿದೆ. ಬಿಜೆಪಿ ನಾಯಕ ಸುವೇಂದು ಅಧಿಕಾರಿ ಬಂಗಾಳದ ನೂತನ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕಾರ ಮಾಡಿದ್ದಾರೆ.

ಕೋಲ್ಕತ್ತಾದ ಬ್ರಿಗೇಡ್ ಪರೇಡ್ ಮೈದಾನದಲ್ಲಿ ನಡೆದ ಅದ್ಧೂರಿ ಕಾರ್ಯಕ್ರಮದಲ್ಲಿ ಸುವೇಂದು ಅಧಿಕಾರಿ ಪ್ರಮಾಣ ವಚನ ಸ್ವೀಕರಿಸಿದ್ದು, ಈ ಐತಿಹಾಸಿಕ ಕ್ಷಣಕ್ಕೆ ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹಸಚಿವ ಅಮಿತ್ ಶಾ ಹಾಗೂ ಎನ್‌ಡಿಎ ಆಡಳಿತವಿರುವ 20 ರಾಜ್ಯಗಳ ಮುಖ್ಯಮಂತ್ರಿಗಳು ಸಾಕ್ಷಿಯಾದರು.

ಸುವೇಂದು ಅಧಿಕಾರಿ ಅವರೊಂದಿಗೆ ಇತರ ಶಾಸಕರಾದ ದಿಲೀಪ್ ಘೋಷ್, ಅಗ್ನಿಮಿತ್ರಾ ಪೌಲ್, ಅಶೋಕ್ ಕಿರ್ತನ್ಯ, ಕ್ಷುದಿರಂ ತಡು, ನಿಶಿತ್ ಪ್ರಾಮಾಣಿಕ್ ಸಚಿವರಾಗಿ ರಾಜ್ಯಪಾಲ ಆರ್.ಎನ್ ರವಿ ಅವರಿಂದ ಪ್ರಮಾಣ ವಚನ ಸ್ವೀಕರಿಸಿದರು. ಇನ್ನೂ ಅಧಿಕಾರ ಸ್ವೀಕಾರ ಸಮಾರಂಭಕ್ಕೆ ತೆರೆದ ವಾಹನದಲ್ಲಿ ಮೆರವಣಿಗೆ ಮೂಲಕ ವೇದಿಕೆಗೆ ಆಗಮಿಸಿದ ಪ್ರಧಾನಿ ನರೇಂದ್ರ ಮೋದಿ, ಜನ್ಮ ವಾರ್ಷಿಕೋತ್ಸವದ ಅಂಗವಾಗಿ ರವೀಂದ್ರನಾಥ ಟ್ಯಾಗೋರ್ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು



ಶನಿವಾರ ಸುವೇಂದು ಅಧಿಕಾರಿ ಪಶ್ಚಿಮ ಬಂಗಾಳದ ನೂತನ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದರು.

ಜೈಂಟ್ ಕಿಲ್ಲರ್ ಸುವೇಂದು ಅಧಿಕಾರಿ: ಮೂಲತಃ ನಂದಿಗ್ರಾಮ ಚಳವಳಿಯ ಮೂಲಕ ಜನನಾಯಕರಾಗಿ ಹೊರಹೊಮ್ಮಿದ ಸುವೇಂದು ಅಧಿಕಾರಿ, ಒಂದು ಕಾಲದಲ್ಲಿ ಮಮತಾ ಬ್ಯಾನರ್ಜಿ ಅವರ ಬಲಗೈ ಬಂಟರಾಗಿದ್ದವರು. ನಂತರ ಬಿಜೆಪಿ ಸೇರಿ ಬಂಗಾಳದಾದ್ಯಂತ ಪಕ್ಷವನ್ನು ತಳಮಟ್ಟದಿಂದ ▶ 10ನೇ ಪುಟಕ್ಕೆ

ಲಾರಿ–ಕಾರು ಡಿಕ್ಕಿ: ಮಂಡ್ಯ ಮೂಲದ ನಾಲ್ವರ ಸಾವು

ಮಂಡ್ಯ, ಮೇ 9–ವಿವಾಹ ವಾರ್ಷಿಕೋತ್ಸವದ ಅಂಗವಾಗಿ ಮನೆ ದೇವರ ದರ್ಶನ ಪಡೆದು ಬರುತ್ತಿದ್ದ ದಂಪತಿ ಸೇರಿ ಮಂಡ್ಯದ ಒಂದೇ ಕುಟುಂಬಕ್ಕೆ ಸೇರಿದ ನಾಲ್ವರು ಭೀಕರ ರಸ್ತೆ ಅಪಘಾತದಲ್ಲಿ ಅಸು ನೀಗಿದ್ದಾರೆ. ಈ ಘಟನೆ ಕುಣಿಗಲ್ ತಾಲೂಕಿನ ಹೊನ್ನೇನಹಳ್ಳಿ ಬಳಿಯ ಚಿಗಣಿಪಾಳ್ಯದಲ್ಲಿ ನಡೆದಿದೆ.



ಅಪಘಾತಕ್ಕೆ ಬಲಿಯಾದ ದಂಪತಿ

ಇಂದು ಮಧ್ಯಾಹ್ನ ಗೊಬ್ಬರ ತುಂಬಿದ್ದ ಲಾರಿ–ಆಲ್ಟೋ ಕಾರು ನಡುವೆ ಡಿಕ್ಕಿ ಸಂಭವಿಸಿ ಕಾರು ಸಂಪೂರ್ಣ ನುಚ್ಚು ನೂರಾಗಿದೆ. ಈ ಅಪಘಾತದಲ್ಲಿ ಕಾರು ಚಾಲಕ, ಮಂಡ್ಯದ ಶುಗರ್ ಟೌನ್ ನಿವಾಸಿಗಳಾದ ಕುಮಾರ್ ನರಸಿಂಹಸ್ವಾಮಿ (65) ಅವರ ಪತ್ನಿ ಕೆ.ಆರ್. ಗಾಯತ್ರಿ (60) ಮತ್ತೋರ್ವರು ಸೇರಿದಂತೆ ನಾಲ್ವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಕುಮಾರ್ ನರಸಿಂಹಸ್ವಾಮಿ ಅವರು ತಮ್ಮ 24ನೇ ವಿವಾಹ ವಾರ್ಷಿಕೋತ್ಸವದ ಅಂಗವಾಗಿ ಕುಟುಂಬದೊಂದಿಗೆ ಮನೆ ದೇವರಾದ ತುಮಕೂರು ಜಿಲ್ಲೆಯ ದೇವರಾಯನ ದುರ್ಗದ ಲಕ್ಷ್ಮೀನರ ಸಿಂಹ ಸ್ವಾಮಿ ದೇವಸ್ಥಾನಕ್ಕೆ ತೆರಳಿ ದೇವರ ದರ್ಶನ ಪಡೆದು ಮಂಡ್ಯಕ್ಕೆ ಹಿಂದಿರುಗುತ್ತಿದ್ದಾಗ ಈ ಅಪಘಾತ ಸಂಭವಿಸಿದೆ. ಲಾರಿ ಚಾಲಕನ ಪೊಲೀಸರು ವಶಕ್ಕೆ ಪಡೆದಿದ್ದಾರೆ.

ನಕ್ಕರೆ ಅದೇ ಸ್ವರ್ಗ

ಡಾಕ್ಟರ್ : ನಾನು ಇಂಜೆಕ್ಷನ್ ಬರೆದುಕೊಟ್ಟಿದ್ದೆ ಯಾಕೆ ತರಲಿಲ್ಲ?
ರೋಗಿ : ಶನಿವಾರದ ದಿನ ಸೂಜಿ ಖರೀದಿಸಬಾರದು ಅಂತಾರೆ ಡಾಕ್ಟರೆ. ಹಾಗೆ ಮಾಡಿದರೆ ಶನಿದೇವರು ಕೋಪಿಸಿಕೊಳ್ಳುತ್ತಾನಂತೆ.
ಡಾಕ್ಟರ್ : ಈಗ ನೀವು ಇಂಜೆಕ್ಷನ್ ತರದಿದ್ದರೆ ಯಮರಾಜ ಕೋಪಿಸಿಕೊಳ್ಳುತ್ತಾನೆ.

ಮೈಸೂರು ಮಿತ್ರ

ಭಾನುವಾರ, ಮೇ 10, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ವಿರೋಧ ಅನ್ನುವುದು ಇಲ್ಲದೇ ಹೋದರೆ ವ್ಯಕ್ತಿ ಪರಿಪೂರ್ಣನಾಗಲಾರ. ಗಾಳಿಪಟ ಅಂಬರಕ್ಕೇರಬೇಕಿದ್ದರೆ ಗಾಳಿಯ ವಿರುದ್ಧವೇ ಸಾಗಬೇಕು.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು } ಹಂಪಿಗೆ ಹೋಗುವುದಕ್ಕಿಂತ ಕೊಂಪೆಯಲ್ಲಿರುವುದೇ ಲೇಸು.

ನಿಮ್ಮ ಪತ್ರಗಳು

ನವಿಲುಗಳ ಸಾವಿಗೆ ಶಾಶ್ವತ ಪರಿಹಾರ ಅತ್ಯಗತ್ಯ

ಮಾನ್ಯರೆ,

ಹಕ್ಕಿಜ್ವರದಿಂದ ಕೇವಲ ಒಂದು ತಿಂಗಳಲ್ಲಿ ರಾಜ್ಯದಲ್ಲಿ 57 ನವಿಲುಗಳು ಸಾವನ್ನಪ್ಪಿರುವುದು ಕೇವಲ ಪರಿಸರ ಹಾನಿಯಲ್ಲ. ಸಾರ್ವಜನಿಕ ಆರೋಗ್ಯದ ತುರ್ತು ಪರಿಸ್ಥಿತಿಯ ಮುನ್ಸೂಚನೆಯಾಗಿದೆ. ವೈರಸ್ ಕಾಡುಪಕ್ಷಿಗಳಿಂದ ಮನುಷ್ಯರಿಗೆ ಹರಡುವ ಮೊದಲು ಸರ್ಕಾರವು ತಕ್ಷಣವೇ ಪೀಡಿತ ಪ್ರದೇಶಗಳಲ್ಲಿ ಜೈವಿಕ ಭದ್ರತಾ ವಲಯ ನಿರ್ಮಿಸಬೇಕು. ಮೃತದೇಹಗಳನ್ನು ಬೀದಿ ನಾಯಿಗಳು ಎಳೆದು ಎಲ್ಲೆಡೆ ಹರಡದಂತೆ ವೈಜ್ಞಾನಿಕವಾಗಿ ವಿಲೇವಾರಿ ಮಾಡುವುದು ಮತ್ತು ಸಾಕುಕೋಳಿಗಳಿಗೆ ವ್ಯಾಪಕ ಲಸಿಕೆ ನೀಡುವುದು ಅತಿ ಮುಖ್ಯ. ರಾಷ್ಟ್ರಪಕ್ಷಿಯ ಅಳಿವು ಪರಿಸರ ಸಮತೋಲನವನ್ನು ಏರುಪೇರು ಮಾಡುವುದರಿಂದ ತಾಂತ್ರಿಕ ಸಂಶೋಧನೆ ಹಾಗೂ ಕ್ಷಿಪ್ರ ಕಾರ್ಯಾಚರಣೆಯ ಮೂಲಕ ಈ ಸೋಂಕನ್ನು ತಡೆಗಟ್ಟುವುದು ಇಂದಿನ ತುರ್ತು ಅಗತ್ಯವಾಗಿದೆ.

–ಡಾ. ಎಚ್.ಕೆ. ವಿಜಯಕುಮಾರ, ಮೈಸೂರು.

ಟಿವಿ ಮಾಧ್ಯಮಗಳ ಎಕ್ಸಿಟ್‌ಪೋಲ್ ಸುಳ್ಳು

ಮಾನ್ಯರೆ,

ಪಂಚ ರಾಜ್ಯಗಳ ವಿಧಾನಸಭಾ ಚುನಾವಣೆಗಳ ಫಲಿತಾಂಶ ಹೊರಬಿದ್ದಿದೆ, ಬಹುತೇಕ ಟಿವಿ ಮಾಧ್ಯಮಗಳ ಎಕ್ಸಿಟ್ ಪೋಲ್ ಸುಳ್ಳಾಗಿದೆ. ತಮಿಳುನಾಡಿನಲ್ಲಿ ಮತ್ತೇ ಡಿಎಂಕೆ ಪಕ್ಷವೇ ಅಧಿಕಾರದ ಗದ್ದುಗೆ ಹಿಡಿಯುತ್ತದೆ ಎಂದು ಬಹುತೇಕ ಸಮೀಕ್ಷೆ ಹೇಳಿದ್ದವು. ಟಿವಿಕೆಗೆ ಅಧಿಕ ಸ್ಥಾನ ಲಭಿಸುವ ಬಗ್ಗೆ ಒಂದೇ ಒಂದು ಸಮೀಕ್ಷೆ ಹೇಳಿತ್ತು. ಅದೇ ರೀತಿ ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಮತ್ತು ಟಿಎಂಸಿ ನಡುವೆ ನೇರ ಹಣಾಹಣಿ ಇದ್ದು ಸಮಬಲದ ಹೋರಾಟ ಇದೆ ಎಂದು ಅಭಿಪ್ರಾಯ ಇತ್ತು. ಯಾವ ಟಿವಿ ಮಾಧ್ಯಮಗಳು ಟಿಎಂಸಿ ಈ ಮಟ್ಟಕ್ಕೆ ಹೀನಾಯವಾಗಿ ಸೋಲುತ್ತದೆ ಎಂದು ಊಹಿಸಿರಲಿಲ್ಲ. ಯಾರೇ ಆಗಲಿ ಮತದಾರರ ಮನಸ್ಸನ್ನು ಅರಿಯಲು ಸಾಧ್ಯವೇ ಇಲ್ಲ. ಎಕ್ಸಿಟ್ ಪೋಲ್‌ಗಳು ಕೇವಲ ಸಾರ್ವಜನಿಕರ ಕುತೂಹಲಕ್ಕಾಗಿ ಅಷ್ಟೆ.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು

ಗೆದ್ದೆತ್ತಿನ ಬಾಲ !

ಮಾನ್ಯರೆ,

ವಿಧಾನಸಭೆ ಚುನಾವಣೆಯ ಫಲಿತಾಂಶ ಪ್ರಕಟವಾದ ನಂತರ ಹೊಸ ಹೊಸ ರಾಜಕೀಯ ತಿರುವುಗಳನ್ನು ಪಡೆಯುತ್ತಿರುವ ತಮಿಳುನಾಡಿನ ರಾಜಕೀಯದಲ್ಲಿ ಗೆದ್ದೆತ್ತಿನ ಬಾಲ ಹಿಡಿಯುವ ಪಕ್ಷಗಳ ಸಂಖ್ಯೆ ಹೆಚ್ಚುತ್ತಿದೆ. ನಟ ವಿಜಯ್ ನೇತೃತ್ವದ ತಮಿಳಗ ವೆಟ್ರಿ ಕಳಗಂ 108 ಸ್ಥಾನಗಳನ್ನು ಗಳಿಸಿದ್ದರೂ ಮ್ಯಾಜಿಕ್ ಸಂಖ್ಯೆ 118 ತಲುಪಿಲ್ಲ. ಆ ಪಕ್ಷ ಅಧಿಕಾರದ ಗದ್ದುಗೆ ಹಿಡಿಯಲು ಇನ್ನೂ ಸೀಟುಗಳ ಕೊರತೆ ಇದೆ. ಸರ್ಕಾರ ರಚಿಸಲು ಟಿವಿಕೆ ಮುಖ್ಯಸ್ಥರಾದ ನಟ ವಿಜಯ್ ಹಲವಾರು ಕಸರತ್ತುಗಳನ್ನು ನಡೆಸುತ್ತಿದ್ದಾರೆ. ಈ ಚುನಾವಣೆಯಲ್ಲಿ ಡಿಎಂಕೆ ಮೈತ್ರಿಕೂಟದ.ಸದಸ್ಯತ್ವ ಹೊಂದಿದ ಹಾಗೂ ನೂತನ ವಿಧಾನಸಭೆಯಲ್ಲಿ 05 ಸ್ಥಾನಗಳನ್ನು ಹೊಂದಿರುವ ಕಾಂಗ್ರೆಸ್, ಡಿಎಂಕೆ ಜೊತೆ ತನ್ನ ಮೈತ್ರಿಯನ್ನು ಮುರಿದುಕೊಂಡು, ಟಿವಿಕೆ ಪಕ್ಷಕ್ಕೆ ಬೆಂಬಲ ನೀಡುವುದಾಗಿ ಅಧಿಕೃತವಾಗಿ ದೃಢಪಡಿಸುವುದರೊಂದಿಗೆ ಕಾಂಗ್ರೆಸ್–ಡಿಎಂಕೆ ಬಾಯಿ–ಬಾಯಿ ಸ್ಲೋಗನ್ ತಿರುಗು ಮುರುಗಾಗಿದೆ.

ಮತ್ತೊಂದು ಕುತೂಹಲಕಾರಿ ಬೆಳವಣಿಗೆಯೆಂದರೆ, ಟಿವಿಕೆ ಪಕ್ಷವನ್ನು ಅಧಿಕಾರ ದಿಂದ ದೂರ ಇಡಲು ಪರಸ್ಪರ ಬದ್ಧ ವೈರಿಗಳಾಗಿರುವ ಡಿಎಂಕೆ ಹಾಗೂ ಎಐಎಡಿಎಂಕೆ ಪಕ್ಷಗಳು ಮಾತುಕತೆ ನಡೆಸುತ್ತಿವೆ ಎಂದು ಹೇಳಲಾಗುತ್ತಿದೆ. ಗೆದ್ದೆತ್ತಿನ ಬಾಲ ಹಿಡಿಯುವುದು ಸರ್ವೆ ಸಾಮಾನ್ಯ. ಅಧಿಕಾರಕ್ಕೆ ಬರಲು ರಾಜಕೀಯ ಪಕ್ಷಗಳು ತಮ್ಮ ತತ್ವ ಮತ್ತು ಸಿದ್ಧಾಂತಗಳನ್ನು ಗಾಳಿಗೆ ತೂರಿ, ಮತದಾರರ ಮುಂದೆ ಬೆತ್ತಲಾಗುತ್ತಿರುವುದು ಖಂಡನೀಯ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ಮರದ ಕೊಂಬೆಗಳನ್ನು ತೆರವುಗೊಳಿಸಿ

ಮಾನ್ಯರೆ,

ಸಾಂಸ್ಕೃತಿಕ ನಗರಿ ಮೈಸೂರಿನ ಕುವೆಂಪುನಗರದ 'ಎಂ' ಬ್ಲಾಕ್‌ನ ನೃಪತುಂಗ ರಸ್ತೆಯಲ್ಲಿರುವ ಗಣಪತಿ ದೇವಸ್ಥಾನದ ಪಕ್ಕದಲ್ಲಿ ಶ್ರೀ ಚಾಮುಂಡೇಶ್ವರಿ ವಿದ್ಯುತ್ ನಿಗಮ ನಿಯಮಿತದ ವತಿಯಿಂದ ಹೊಸ ಟ್ರಾನ್ಸ್‌ಫಾರ್ಮರ್ ಅಳವಡಿಸುವ ಸಂದರ್ಭದಲ್ಲಿ ಕರ್ತವ್ಯಲೋಪದಿಂದ ಮರದ ಕೊಂಬೆಗಳನ್ನು ರಸ್ತೆ ಬದಿಯಲ್ಲಿ ಸ್ಥಾಪಿಸಿರುವ ತಮ್ಮದೆ ಇಲಾಖೆಗೆ ಸೇರಿರುವ ವಿದ್ಯುತ್ ಮೀಟರ್ ಪೆಟ್ಟಿಗೆ ಮೇಲೆಯೇ ಹಾಕಿ ಹೋಗಿದ್ದಾರೆ. ಸಾರ್ವಜನಿಕರು ಪ್ರಶ್ನಿಸಿದರೆ ಮರದ ಕೊಂಬೆಗಳನ್ನು ತೆರವುಗೊಳಿಸುವುದು ಮೈಸೂರು ಮಹಾನಗರ ಪಾಲಿಕೆಯವರ ಕರ್ತವ್ಯ ಎಂದು ಹೇಳಿ ಹೋಗುತ್ತಾರೆ. ಈ ತರಹ ಬೇಜವಾಬ್ದಾರಿತನ ಕರ್ತವ್ಯ ನಿರ್ವಹಿಸಿ ಎಲ್ಲೆಂದರಲ್ಲಿ ಮರದ ಕೊಂಬೆಗಳನ್ನು ಕತ್ತರಿಸಿ ಬಿಸಾಕುವ ಬದಲು, ವಿದ್ಯುತ್ ನಿಗಮ ನಿಯಮಿತ ಮಂಡಳಿಯ ಕೆಲಸ ಕಾರ್ಯಗಳು ನಡೆಯುವ ಸಂದರ್ಭದಲ್ಲಿ ಮೈಸೂರು ಮಹಾನಗರ ಪಾಲಿಕೆ ಮತ್ತು ಚಾಮುಂಡೇಶ್ವರಿ ವಿದ್ಯುತ್ ನಿಗಮ ನಿಯಮಿತ ಮಂಡಳಿ ಜಂಟಿಯಾಗಿ ಕರ್ತವ್ಯ ನಿರ್ವಹಿಸಿದರೆ ಮರದ ಕೊಂಬೆಗಳು ಸಹ ಎಲ್ಲೆಂದರಲ್ಲಿ ರಾಶಿ ಬೀಳುವುದು ತಪ್ಪುತ್ತದೆ ಅಲ್ಲವೆ.?

–ನಾಗೇಶ್, ಮಾನಸಗಂಗೋತ್ರಿ, ಮೈಸೂರು

ಆದಿವಾಸಿ ಗಿರಿಜನರ ಸಮಸ್ಯೆಗಳಿಗೆ ಸ್ಪಂದಿಸಲಿ

ಮಾನ್ಯರೆ,

ಎಚ್.ಡಿ.ಕೋಟೆ ತಾಲೂಕಿನ ಅರಣ್ಯ ವ್ಯಾಪ್ತಿಯಲ್ಲಿ ಬರುವ ಆದಿವಾಸಿಗಳು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿರುವುದು ಪತ್ರಿಕೆಯಲ್ಲಿ ಪ್ರಕಟವಾಗಿದೆ. ನೀರಿಗಾಗಿ ಅವರೇ ಗುಂಡಿ ತೆಗೆದು ಅದರಲ್ಲಿ ಸಿಗುವ ಕಲುಷಿತ ನೀರನ್ನು ಸೇವನೆ ಮಾಡಬೇಕಾದ ದುಸ್ಥಿತಿ ನಿರ್ಮಾಣವಾಗಿದೆ. ಸರ್ಕಾರವು ಈ ಜನರಿಗೆ ಮೂಲಸೌಕರ್ಯ ಕಲ್ಪಿಸಿದ್ದರೂ ಅವು ಏನೇನು ಅಲ್ಲ, ಇನ್ನು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಗಿರಿಜನರ ಅನುದಾನದಲ್ಲಿ ಕ್ಷೇತ್ರದಲ್ಲಿರುವ ಪ್ರತಿಯೊಂದು ಹಾಡಿಯನ್ನು ಅಭಿವೃದ್ಧಿ ಮಾಡಲಿ. ಹಲವು ಯೋಜನೆಗಳು ಇದ್ದರೂ ಕೂಡ ಈ ಪರಿಸ್ಥಿತಿ ನಿರ್ಮಾಣವಾಗಿರುವುದು ವಿಷಾದನೀಯ.


–ಪಿ.ಸಿ.ಕಂಗಾಣಿಸೋಮು, ಕ್ಯಾತಮಾರನಹಳ್ಳಿ, ಮೈಸೂರು


ನಮ್ಮೂರ ಆದರ್ಶಪ್ರಾಯರು...



ಕಳೆದ ವರ್ಷ 'ಮೈಸೂರು ಮಿತ್ರ'ದಲ್ಲಿ ನಾನು ಬರೆದ ಮೈಸೂರಿನ 50 ಗಣ್ಯಾತಿಗಣ್ಯರ ಅಂಕಣ, 'ನಮ್ಮ ಮೈಸೂರಿನ ಅಸಾಮಾನ್ಯರು' ಪ್ರಕಟವಾಗಿ, ಆ ಲೇಖನಗಳನ್ನು ಓದುಗರು ಮೆಚ್ಚಿ ನಿರೀಕ್ಷೆಗೂ ಮೀರಿ ಪ್ರತಿಕ್ರಿಯೆಗಳನ್ನು ವ್ಯಕ್ತಪಡಿಸಿದರು. ಮರೆತುಹೋಗಿದ್ದ ಈ ಐವತ್ತು ಗಣ್ಯರ ಪರಿಚಯ ಮಾಡಿ ನಾನು ನಿಲ್ಲಿಸಿದ್ದೆ. ಆದರೆ ಈ ಅಂಕಣವನ್ನು ಮುಂದುವರಿಸುವಂತೆ ಬಹಳಷ್ಟು ಓದುಗರು ಒತ್ತಾಯಿಸುತ್ತಾ ಬರುತ್ತಿದ್ದಾರೆ. ಓದುಗರ ವಿಶ್ವಾಸಕ್ಕೆ ಮಣಿದು ನಾನು ಎರಡನೇ ಕಂತಿನ ಈ ಲೇಖನ ಮಾಲೆಯನ್ನು 'ನಮ್ಮೂರ ಆದರ್ಶಪ್ರಾಯರು' ಹೆಸರಿನಲ್ಲಿ ಮುಂದುವರಿಸುತ್ತಿದ್ದೇನೆ. ಈಗ ಪ್ರಕಟವಾಗುವ ಗಣ್ಯರ ತ್ಯಾಗಮಯ ಸೇವೆಯೂ ಅದೇ ರೀತಿ ದಾಖಲೆಯಾಗಿ ಉಳಿಯಲಿ ಎಂದು ನಾನಾದರೂ ಬಯಸುತ್ತೇನೆ. ಓದುಗರ ಪ್ರತಿಕ್ರಿಯೆಯೂ ಅಷ್ಟೇ ಮುಕ್ತವಾಗಿ ದೊರೆಯಲಿ ಎಂದು ಆಶಿಸುತ್ತೇನೆ. ಈ ಲೇಖನ ಮಾಲೆಯನ್ನು ಬರೆಯುವಾಗ ಈ ಮಹಾನುಭಾವರ ಚಿತ್ರಗಳು ಸಿಗದೆ ಹೋಗಬಹುದು. ಆ ಸಾಧ್ಯತೆಗಳೇ ಹೆಚ್ಚು. ದೊರೆತವರ ಚಿತ್ರಗಳು ಲೇಖನದ ಜೊತೆಗೆ ಪ್ರಕಟವಾಗುತ್ತವೆ. ಇಲ್ಲವೇ ಸಂದರ್ಭಕ್ಕೆ ಸರಿಹೊಂದುವ ಚಿತ್ರಗಳನ್ನು ಬಳಸಿಕೊಳ್ಳಲಾಗುವುದು. ಅವೂ ಲಭ್ಯವಾಗದೆ ಹೋದಲ್ಲಿ ಚಿತ್ರವಿಲ್ಲದೆಯೂ ಪ್ರಕಟಿಸಬೇಕಾಗಿ ಬರಬಹುದು ಎಂಬ ಮಾತನ್ನು ತಿಳಿಸಬಯಸುತ್ತೇನೆ. ಈ ಮಾಲಿಕೆಯ ಮೊದಲ ಲೇಖನ 'ಮೈಸೂರು ಮಿತ್ರ' ವಾರ್ಷಿಕ ಸಂಚಿಕೆಯಲ್ಲಿ ಪ್ರಕಟವಾಗುವ ಮೂಲಕ ಪ್ರಾರಂಭವಾಗಿರುವುದು ಶುಭಾರಂಭವೇ ಹೌದು.

5. ಎಂ.ಎಲ್.ಶ್ರೀಕಂಠೇಶಗೌಡರು





ಗೌರಿ ಸತ್ಯ
ಹಿರಿಯ ಪತ್ರಕರ್ತರು
ಮೊ. 87627 88685

ಸುಮಾರು ಒಂದೂವರೆ ಶತಮಾನದ ಹಿಂದೆ ಹಳ್ಳಿಯ ವಾತಾವರಣದಲ್ಲಿ ಬೆಳೆದು ಮಾಧ್ಯಮಿಕ ಶಾಲೆಯವರೆಗೆ ಓದಿ, ಬೆಂಗಳೂರಿಗೆ ಬಂದು ಯೂರೋಪಿಯನ್ ಪ್ರೌಢಶಾಲೆಯಲ್ಲಿ ಇಂಗ್ಲಿಷ್ ಶಿಕ್ಷಣ ಪಡೆದು, ಮದರಾಸಿಗೆ ಹೋಗಿ ಬಿ.ಎಲ್. ಪದವಿ ಗಳಿಸಿ, ನ್ಯಾಯವಾದಿಗಳೂ, ನ್ಯಾಯಾಧೀಶರೂ ಆಗಿದ್ದುದರ ಜೊತೆಗೆ ಹೊಸಗನ್ನಡ ಸಾಹಿತ್ಯದ ಬರಹಗಾರರಲ್ಲಿ ಒಬ್ಬರಾಗಿದ್ದುದು ಅಂದಿಗೆ ಅಪರೂಪದ ಸಾಧನೆಯೇ ಎನ್ನಬೇಕು. ಗ್ರಾಮದ ಪರಿಸರ, ಹಿರಿಯರ ಉತ್ತೇಜನ ಹಾಗೂ ದೃಢನಿಲುವು ಹೇಗೆ ಒಬ್ಬ ಗ್ರಾಮಸ್ಥನನ್ನೂ ಉನ್ನತ ಸ್ಥಾನಕ್ಕೆ ಬೆಳೆಸಿ ಕೀರ್ತಿ ಗಳಿಸುವಂತೆ ಮಾಡಬಲ್ಲದು ಎನ್ನುವುದಕ್ಕೆ ನಿದರ್ಶನವಾಗಿ ಬಾಳಿದ ಅದರ್ಶನೀಯರು ಇವರು.

ಎಂ.ಎಲ್.ಶ್ರೀಕಂಠೇಶಗೌಡರ ವಂಶ ಹಕ್ಕಿ ಗೌಡ ಎಂಬುವರಿಂದ ಪ್ರಾರಂಭವಾಗುತ್ತದೆ. ಇವರ ಮೂಲಪುರುಷರು ನಾಗಮಂಗಲ ತಾಲೂಕಿನಲ್ಲಿ ಉಂಟಾದ ಭೀಕರ ಬರಗಾಲ ದಿಂದಾಗಿ ಅಲ್ಲಿನ ಮಲ್ಲನಾಯಕನ ಹಳ್ಳಿಯನ್ನು ಬಿಟ್ಟು ಮದ್ದೂರು ತಾಲ್ಲೂಕಿನ ದೇಶಹಳ್ಳಿಗೆ ವಲಸೆ ಬಂದರೆನ್ನಲಾಗಿದೆ. ಇವರ ವಂಶದಲ್ಲಿ ಮೂರನೇ ಪೀಳಿಗೆಯವರು ಲಿಂಗೇಗೌಡರು. ವಿದ್ಯಾವಂತರಾಗಿ ಬ್ರಿಟಿಷ್ ಸರ್ಕಾರದಲ್ಲಿ ಸುಬೇದಾರ್ ಪದವಿಯವರೆಗೆ ಉನ್ನತ ಸ್ಥಾನ ಪಡೆದುಕೊಂಡಿದ್ದರು. ರಾಮನಗರ ಪ್ರಾಂತ್ಯದ ಅರ್ಕಾವತಿ ಕಣಿವೆಯಲ್ಲಿ ದರೋಡೆ, ಸುಲಿಗೆಗಳಲ್ಲಿ ತೊಡಗಿದ್ದ ಪಂಜಿನ ಕಳ್ಳರ ಹುಟ್ಟಡಗಿಸಿ ಕಾಂಚನದೊಡ್ಡಿ ಗ್ರಾಮವನ್ನು ಸರ್ಕಾರದಿಂದ ಬಳುವಳಿಯಾಗಿ ಪಡೆದ ಸಾಹಸಿಗರು. ಇದು ಅವರನ್ನು ಜಿಲ್ಲಾಧಿಕಾರಿಯ ಮಟ್ಟದವರೆಗೆ ಬೆಳೆಸಿತು.

ಲಿಂಗೇಗೌಡರಿಗೆ ನಾಲ್ವರು ಗಂಡು ಮಕ್ಕಳು. ಇವರೂ ವಿದ್ಯಾವಂತರಾಗಿ ಸರ್ಕಾರಿ ಹುದ್ದೆಯಲ್ಲಿದ್ದರು. ಇವರಲ್ಲಿ ಎರಡನೆಯವರಾದ ಸುಬೇದಾರ್ ಭೈರೇಗೌಡರ ಎರಡನೆಯ ಪುತ್ರರೇ ಎಂ.ಎಲ್.ಶ್ರೀಕಂಠೇಶಗೌಡರು. ತಂದೆ ಭೈರೇಗೌಡರು ಗೌರೀಬಿದನೂರು ಸರ್ಜಾಪುರದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ತಾತನ ಆಶ್ರಯದಲ್ಲಿಯೇ ಬೆಳೆದು ಶಾಲೆ ಸೇರಿದರು. ತಾತನಿಗೆ ಜನಪದ ಕಲೆ ಮತ್ತು ಸಾಹಿತ್ಯದಲ್ಲಿ ಹೆಚ್ಚಿನ ಆಸಕ್ತಿ. ತಾತನ ನಂಟು, ಗ್ರಾಮದ ವಾತಾವರಣ ಶ್ರೀಕಂಠೇಶಗೌಡರಿಗೆ ಚಿಕ್ಕಂದಿನಲ್ಲೇ ಜನಪದ ಕಲೆ–ಸಾಹಿತ್ಯಗಳಲ್ಲಿ ಆಸಕ್ತಿ ಮೂಡಿಸಿತು. ಅಂದು ಗ್ರಾಮೀಣ ಬದುಕು ಸಮೃದ್ಧವಾಗಿತ್ತು. ಹಾಡು, ಕತೆ, ಗಾದೆ, ಒಗಟು, ಜನಪದ, ಕಲೆ ಅದರ ಭಾಗವಾಗಿತ್ತು. ಇದೇ ಪ್ರಭಾವದಲ್ಲಿ ಶ್ರೀಕಂಠೇಶಗೌಡರು ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲಾಭ್ಯಾಸ ಮುಗಿಸಿ, ಮುಂದಿನ ವಿದ್ಯಾಭ್ಯಾಸಕ್ಕೆ ಬೆಂಗಳೂರಿಗೆ ಬಂದರು. ಬೆಂಗಳೂರಿನ ವಾತಾವರಣ ಅವರ ಮೇಲೆ ಇನ್ನಷ್ಟು ಗಾಢವಾದ ಪರಿಣಾಮ ಬೀರಿತು. ತಾತನ ಸಹಾಯದಿಂದ ಯೂರೋಪಿಯನ್ ಪ್ರೌಢಶಾಲೆಯಲ್ಲಿ ಪ್ರವೇಶ ಸಿಕ್ಕಿತು. ಪ್ರೌಢಶಾಲೆಯಲ್ಲಿ ಓದುತ್ತಿರುವಾಗಲೇ ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳ ಪುಸ್ತಕಗಳನ್ನು ಓದಿದರು. ಹಾಗೆ ಓದುವಾಗ ಅವರ ಮೇಲೆ ಹೆಚ್ಚು ಪ್ರಭಾವ ಬೀರಿದ ಕವಿ ಎಂದರೆ ಶೇಕ್ಸ್‌ಪಿಯರ್. ಆ ಕವಿಯ ನಾಟಕಗಳು ಕಂಠಪಾಠವಾಗಿ ಹೋಯಿತು. ಚಿಕ್ಕಂದಿನಿಂದಲೂ ಮೈಗೂಡಿ ಬಂದಿದ್ದ ನಾಟಕದ ಗೀಳು ಶಾಲೆಯಲ್ಲಿ ಗರಿ ಬಿಚ್ಚಿತು. ಸಹಪಾಠಿಗಳೊಂದಿಗೆ ಸೇರಿ ಶಾಲಾ ವಾರ್ಷಿಕೋತ್ಸವ ಮತ್ತಿತರ ಸಂದರ್ಭಗಳಲ್ಲಿ ನಾಟಕಗಳನ್ನು ಆಡುತ್ತಿದ್ದರು. ನಾಟಕಗಳು ಇಂಗ್ಲಿಷ್‌ನಲ್ಲಿದ್ದು ಕನ್ನಡದಲ್ಲಿ ಇಲ್ಲದಿರುವುದರ ಕೊರತೆಯೂ ಅವರಿಗಿತ್ತು.

ಎಂಟ್ರೆನ್ಸ್ ಪರೀಕ್ಷೆಯಲ್ಲಿ ತೇರ್ಗಡೆಯಾದ ಶ್ರೀಕಂಠೇಶಗೌಡರು ಬೆಂಗಳೂರಿನ ಸೆಂಟ್ರಲ್ ಕಾಲೇಜಿಗೆ ಸೇರಿ ಬಿ. ಎ. ಶಿಕ್ಷಣ ಪ್ರಾರಂಭಿಸಿದರು. ಒಳ್ಳೆಯ ವಿದ್ಯಾರ್ಥಿ ಎನಿಸಿಕೊಂಡು, ಪಠ್ಯೇತರ ಚಟುವಟಿಕೆಗಳಲ್ಲಿ ಅಸಕ್ತಿಯಿಂದ ಭಾಗವಹಿಸುತ್ತಿದ್ದರು. ಕನ್ನಡದ ಕೊರತೆ ತುಂಬಿಕೊಳ್ಳಲು ಕನ್ನಡ ವ್ಯಾಕರಣ, ಛಂದಸ್ಸುಗಳ ಅಭ್ಯಾಸ ಮಾಡಿದರು. 24ನೆಯ ವಯಸ್ಸಿನಲ್ಲಿ ಅವರು ಬಿ.ಎ. ಪದವಿ ಗಳಿಸಿದರು. ಸಂತೋಷಪಟ್ಟ ತಾತ ಲಿಂಗೇಗೌಡರಿಗೆ ಮೊಮ್ಮಗ ನ್ಯಾಯಾಧೀಶನೋ, ಕೌನ್ಸಿಲ್ ಸದಸ್ಯನೋ ಆಗಬೇಕೆಂಬ ಆಸೆ. ಆದರೆ ನ್ಯಾಯಶಾಸ್ತ್ರ ಕಲಿಯಲು ಕರ್ನಾಟಕದಲ್ಲಿ ಅವಕಾಶಗಳಿರಲಿಲ್ಲ. ಅವರು ಮೊಮ್ಮಗನನ್ನು ಮದ್ರಾಸಿಗೆ ಕಳುಹಿಸಿದರು. ಶ್ರೀಕಂಠೇಶಗೌಡರು ಎರಡು ವರ್ಷಗಳು ಅಲ್ಲಿದ್ದು ಬಿ.ಎಲ್. ಪದವಿ ಪಡೆದರು. ಕಾಲೇಜಿನ ಪ್ರತಿಭಾವಂತ ವಿದ್ಯಾರ್ಥಿ ಎನ್ನಿಸಿಕೊಂಡರು. ಈ ಮಧ್ಯೆ ಅವರ ತಾತನವರೂ ಕಾಲವಾಗಿ ಬಿಟ್ಟಿದ್ದರು.

ಬಿ.ಎ., ಬಿ.ಎಲ್. ಮುಗಿಸಿದ ಶ್ರೀಕಂಠೇಶಗೌಡರು ಮದ್ರಾಸಿನ ಪ್ರಸಿದ್ಧ ವಕೀಲರೊಬ್ಬರಲ್ಲಿ ವಕೀಲವೃತ್ತಿ ಪ್ರಾರಂಭಿಸಿದರು. ಈ ಸಂದರ್ಭದಲ್ಲಿ ಅವರ ಮದುವೆ ಪ್ರಸ್ತಾಪವೂ ಪ್ರಾರಂಭವಾಗಿ ಅವರು ತಮ್ಮ ಅಕ್ಕನ ಮಗಳಾದ ಸುಬ್ಬಮ್ಮ ಎಂಬಾಕೆಯನ್ನು 1880ರಲ್ಲಿ ಮದುವೆಯಾದರು. ಆ ವೇಳೆಗಾಗಲೇ ಅವರು ಬೆಂಗಳೂರಿಗೆ ಬಂದು ವಕೀಲರೊಬ್ಬರ ಬಳಿ ಕಿರಿಯ ವಕೀಲರಾಗಿದ್ದರು. ನಿಷ್ಠೆಯಿಂದ ಕೆಲಸ ಮಾಡಿ ಜನಪ್ರಿಯತೆ ಗಳಿಸುತ್ತಿದ್ದರು. ಬೆಂಗಳೂರನ್ನು ಬಿಟ್ಟು ಮೈಸೂರಿಗೆ ಬಂದು ತಮ್ಮದೇ ಕಚೇರಿಯನ್ನು ಪ್ರಾರಂಭಿಸಿ ವಕೀಲಿ ವೃತ್ತಿ ಪ್ರಾರಂಭಿಸಿದರು. ಸ್ಥಿತಿವಂತ ಕುಟುಂಬದಲ್ಲಿ ಹುಟ್ಟಿ ಬೆಳೆದಿದ್ದ ಅವರು ಜಗನ್ಮೋಹನ ಅರಮನೆಯ ಕೃಷ್ಣವಿಲಾಸ ರಸ್ತೆಯಲ್ಲಿದ್ದ ಸ್ವಂತ ಮನೆಯಲ್ಲಿ ವಾಸಿಸಲಾರಂಭಿಸಿದರು.

ವಕೀಲ ವೃತ್ತಿಯಲ್ಲಿ ಪ್ರಾಮಾಣಿಕತೆಯಿಂದ ಕೆಲಸ ಮಾಡುವುದರ ಜೊತೆಗೆ ತಮಗೆ ಪ್ರಿಯವಾಗಿದ್ದ ಸಾಹಿತ್ಯ ಚಟುವಟಿಕೆಗಳಲ್ಲಿ ತೊಡಗಿದರು. ಆ ವೇಳೆಗೆ ಸಾಹಿತ್ಯ ಕ್ಷೇತ್ರವಾದ ಮೈಸೂರಿನಲ್ಲಿ ಸಾಹಿತಿಗಳ ಪರಿಚಯವೂ ಆಗಿ ಕನ್ನಡ ಗ್ರಂಥಗಳ ಮುದ್ರಣಕ್ಕೆ ಇದ್ದ ತೊಂದರೆಯೂ ಇವರ ಗಮನಕ್ಕೆ ಬಂದಿತ್ತು. ಪ್ರಕಾಶನ ಸಂಸ್ಥೆಯೊಂದನ್ನು ಪ್ರಾರಂಭಿಸಲು ನಿರ್ಧರಿಸಿ ಸ್ನೇಹಿತರೊಂದಿಗೆ **ಗ್ರಾಜುಯೇಟ್ಸ್ ಟ್ರೇಡಿಂಗ್ ಅಸೋಸಿಯೇಷನ್** ಸಂಸ್ಥೆಯನ್ನು ಹುಟ್ಟುಹಾಕಿದರು. ಅದರ ಮೊದಲ ಆದ್ಯತೆ ಇಂಗ್ಲಿಷ್ ಗ್ರಂಥಗಳನ್ನು ಕನ್ನಡಕ್ಕೆ ತರ್ಜುಮೆ ಮಾಡಿಸಿ ಪ್ರಕಟಿಸುವುದು. ಆ ಸಂಸ್ಥೆಯಿಂದಲೇ **ವಿದ್ಯಾದಾಯಿನಿ** ಎಂಬ ಪತ್ರಿಕೆಯೂ ಪ್ರಾರಂಭವಾಯಿತು. ಜನಪ್ರಿಯ ವಕೀಲರಾಗಿ ಬೇಕಾದಷ್ಟು ಹಣ ಸಂಪಾದನೆ ಮಾಡುತ್ತಿದ್ದ ಅವರು ತಮ್ಮ ಬಹುಪಾಲು ಸಂಪಾದನೆಯನ್ನು ಈ ಸಂಸ್ಥೆಗೆ ಹಾಕಿದರು. ಈ ಸಂಸ್ಥೆ ಕ್ರಮೇಣ ನೂರಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿತು. **ವಿದ್ಯಾದಾಯಿನಿ** ಪತ್ರಿಕೆಯೂ ಬಹು ಕಾಲ ಮುಂದುವರಿಯಿತು. ಇದರಿಂದಾಗಿ ಶ್ರೀಕಂಠೇಶಗೌಡರಿಗೆ ಸಾಹಿತಿಗಳ ಒಂದು ದೊಡ್ಡ ಬಳಗದ ಪರಿಚಯವಾಯಿತು. **ಅಭಿನವ ಕಾಳಿದಾಸ** ಎಂದು ಪ್ರಖ್ಯಾತರಾಗಿದ್ದ ಬಸವಪ್ಪ ಶಾಸ್ತ್ರಿಗಳು, ಕರಿಬಸವಶಾಸ್ತ್ರಿಗಳು, ವೇದೋತ್ತಮ ಜೋಯಿಸರು ಮುಂತಾದ ಹಿರಿಯರು ಮಿತ್ರರಾದರು. ಅವರೆಲ್ಲಾ ಶ್ರೀಕಂಠೇಶಗೌಡರ ಕಾರ್ಯವನ್ನು ಮೆಚ್ಚಿಕೊಂಡರು.

ಶ್ರೀಕಂಠೇಶಗೌಡರಿಗೆ ಮುಂಚಿನಿಂದಲೂ ನಾಟಕಗಳಲ್ಲಿ ಆಸಕ್ತಿ. ಈಗ ಅದಕ್ಕೂ ಅವಕಾಶ ದೊರೆತು ಮೈಸೂರಿಗೆ ಬರುತ್ತಿದ್ದ ನಾಟಕದ ಕಂಪನಿಗಳ ನಾಟಕಗಳನ್ನು ತಪ್ಪದೇ ನೋಡುತ್ತಿದ್ದರು. ಇದರಿಂದಾಗಿ ಹಲವಾರು ಪ್ರಮುಖ ನಾಟಕಕಾರರ ಪರಿಚಯವೂ ಆಯಿತು. ಜನಪ್ರಿಯರಾಗಿದ್ದ ಎ.ವಿ.ವರದಾಚಾರ್ಯ, ಮಹಮದ್ ಪೀರ್ ಮುಂತಾದವರೆಲ್ಲಾ ಅವರಲ್ಲಿಗೆ ಬಂದು ಹೋಗುತ್ತಿದ್ದರು. ತಾವು ಹುಟ್ಟಿದ್ದ ಗ್ರಾಮ ಪರಿಸರದ ಪ್ರಭಾವ ರೂಪು ತಾಳಿ ಅವರ ಬರಹಗಳು ವಿದ್ಯಾದಾಯಿನಿ ಪತ್ರಿಕೆಯಲ್ಲಿ ಅಚ್ಚಾಗುತ್ತಿದ್ದವು. ತಮಗೆ ಪ್ರಿಯವಾಗಿದ್ದ ಶೇಕ್ಸ್‌ಪಿಯರ್ ನಾಟಕಗಳನ್ನು ಕನ್ನಡಕ್ಕೆ ತರಲು ಬಯಸಿ ಅವುಗಳ ಅನುವಾದಕ್ಕೆ ಕೈಹಾಕಿದರು. 1890ರ ಸುಮಾರಿನಲ್ಲಿಯೇ **ಪ್ರತಾಪ ರುದ್ರದೇವ** ಹೆಸರಿನಿಂದ ಶೇಕ್ಸ್‌ಪಿಯರನ **ಮ್ಯಾಕ್‌ಬೆತ್** ನಾಟಕವನ್ನು ಭಾಷಾಂತರ ಮಾಡಿದರು. ಎ ಮಿಡ್ ಸಮರ್ **ನೈಟ್ಸ್ ಡ್ರೀಮ್** ನಾಟಕವನ್ನು **ಪ್ರಮೀಳಾರ್ಜುನೀಯ** ಹೆಸರಿನಲ್ಲಿ ಭಾಷಾಂತರಿಸಿ ಪ್ರಕಟಿಸಿದರು. ಭಾಷಾಂತರ ಮಾಡುವಾಗ ಕಥೆಗೆ ಭಾರತೀಯ ಕಥಾ ವಸ್ತುವನ್ನು ಆಯ್ದುಕೊಂಡು, ಇಂಗ್ಲಿಷ್ ಹೆಸರುಗಳ ಬದಲಿಗೆ ಕನ್ನಡ–ಸಂಸ್ಕೃತ ಹೆಸರುಗಳನ್ನು ಕೊಟ್ಟು, ಕಂದ, ವೃತ್ತ ಪದ್ಯಗಳನ್ನೂ ಸೇರಿಸಿ, ಅವುಗಳಲ್ಲಿ ಕನ್ನಡದ ಸೊಗಡನ್ನು ತುಂಬಿದರು. **ಪ್ರತಾಪರುದ್ರದೇವ** ನಾಟಕದಲ್ಲಿ ಅನುವಾದ ಮಾಡುವಾಗ ಪಾತ್ರಗಳ ಹೆಸರನ್ನು ಬದಲಾಯಿಸಿದರೂ, ಮೂಲದ ಭಾವದ ಬದಲಾವಣೆ ಮಾಡಲಿಲ್ಲ. ಆದರೆ ಪ್ರಮೀಳಾರ್ಜುನೀಯದಲ್ಲಿ ಮೂಲವನ್ನು ಹಾಗೆಯೇ ಇಟ್ಟುಕೊಂಡು ಹೆಸರುಗಳಲ್ಲಿ ಹಾಗೂ ಸಂಭಾಷಣೆಯಲ್ಲಿ ತಮ್ಮತನವನ್ನು ತೋರಿದರು. ಕನ್ನಡಕ್ಕೆ ತರುವಾಗ ಅವರು ನಾಟಕ ರಂಗವನ್ನು ಗಮನದಲ್ಲಿಟ್ಟುಕೊಂಡಿದ್ದಂತೆ ಕಂಡು ಬರುತ್ತದೆ. 1895ರಲ್ಲಿ ಅವರು ಪ್ರಕಟಿಸಿದ **ಪ್ರತಾಪ ರುದ್ರದೇವ** ನಾಟಕವನ್ನು ವರದಾಚಾರ್ಯರು ಅನೇಕ ಬಾರಿ ಆಡಿ ಪ್ರದರ್ಶಿಸಿದರು. ಅಂದು ಸಂಸ್ಕೃತದಿಂದ ಅನುವಾದಗೊಂಡಂತೆ ಇಂಗ್ಲಿಷ್ ಭಾಷೆಯಿಂದಲೂ ನಾಟಕಗಳು ಕನ್ನಡಕ್ಕೆ ಅನುವಾದಗೊಂಡವು.

ಶ್ರೀಕಂಠೇಶಗೌಡರು **ವಿದ್ಯಾದಾಯಿನಿ** ಪತ್ರಿಕೆಯಲ್ಲಿ ಆಳಿದ ಚಾಮರಾಜ ಒಡೆಯರು ಮತ್ತು ನಾಲ್ವಡಿ ಕೃಷ್ಣರಾಜರನ್ನು ಕುರಿತಂತೆ ಕವನಗಳಲ್ಲದೆ, ಅನೇಕ ಬಿಡಿ ಕವನಗಳನ್ನೂ ಬರೆದು ಪ್ರಕಟಿಸಿದರು. ಸ್ವಲ್ಪ ಕಾಲದ ಮೇಲೆ ತಾವೇ ಪ್ರಾರಂಭಿಸಿದ್ದ **ಗ್ರಾಜ್ಯುಯೇಟ್ ಟ್ರೇಡಿಂಗ್** ಸಂಸ್ಥೆಯೊಂದಿಗೆ ಸಂಬಂಧವನ್ನು ಕಡಿದುಕೊಂಡು, **ಸುರಭಿ** ಮಾಸಪತ್ರಿಕೆಯನ್ನು 1896ರಲ್ಲಿ ಆರಂಭಿಸಿದರು. ಶೇಕ್ಸ್‌ಪಿಯರನ ನಾಟಕಗಳ ಕನ್ನಡ ಅನುವಾದವಲ್ಲದೆ, **ಭುವನಿ ಬಾಳು** ಇನ್ನಿತರ ಎರಡು ಕಾದಂಬರಿ ರಚಿಸಿದರು. ಎರಡು ಸ್ವತಂತ್ರ ನಾಟಕಗಳು, ಜನಪದ ಕಥೆಗಳು, ಭಕ್ತಿಪೂರಿತ ಕಥೆಗಳು, ಬಿಡಿ ಬರಹಗಳು, ವ್ಯಕ್ತಿ ಚಿತ್ರಗಳನ್ನು ಬರೆದರು. ಮಕ್ಕಳಿಗೆ ಸುಲಭವಾಗಿ ಅರ್ಥವಾಗಲು ಇಂಗ್ಲಿಷ್ ಭಾಷೆಯ ಪಠ್ಯಗಳನ್ನು ಕನ್ನಡದಲ್ಲಿ ಬರೆದು ಪ್ರಕಟಿಸಿದರು. ಜೊತೆಗೆ ಜಾನಪದ ಕಥೆಗಳನ್ನು ಸಂಗ್ರಹಿಸಿದರು. ಅವರ ಬರಹಗಳಲ್ಲಿ ವಿದ್ವತ್ ಪ್ರಜ್ಞೆಯೂ, ಗಾಂಭೀರ್ಯವೂ ಅಡಗಿದ್ದು ಸತ್ವಪೂರ್ಣವಾಗಿದ್ದವು. ಈ ಮಧ್ಯೆ ಅವರ ಪತ್ನಿ ಸುಬ್ಬಮ್ಮ ಕಾಲವಾಗಿ, ಮಕ್ಕಳಿಗೆ ಆಸರೆಯಾಗಲು ನಂಜನಗೂಡು ಕರೋಹಟ್ಟಿ ಸಿದ್ದಪ್ಪನವರ ಮಗಳು ಭಾಗೀರಥಮ್ಮನನ್ನು ಮದುವೆಯಾದರು.

ಶ್ರೀಕಂಠೇಶಗೌಡರ ಜನಪ್ರಿಯತೆ ಮತ್ತು ನ್ಯಾಯಶಾಸ್ತ್ರದಲ್ಲಿ ಅವರಿಗಿದ್ದ ಪರಿಣಿತಿ ಸರ್ಕಾರದ ಗಮನಕ್ಕೆ ಬಂದು 1890ರಲ್ಲಿ ಅವರನ್ನು ನ್ಯಾಯಾಧೀಶರನ್ನಾಗಿ ಹಾಸನಕ್ಕೆ ನೇಮಿಸಿತು. ಅವರು ಶಿವಮೊಗ್ಗ, ಹೊಳೇನರಸೀಪುರ, ಕೋಲಾರ, ಮಧುಗಿರಿ, ನಂಜನಗೂಡು ಮುಂತಾದ ಊರುಗಳಲ್ಲಿ ನ್ಯಾಯಾಧೀಶರಾಗಿ ಕೆಲಸ ಮಾಡಿದರು. ನಾಟಕದ ಗೀಳು ಮುಂದುವರಿದು ಮೈಸೂರಿಗೆ ಬಂದ ಮೇಲೆ ಅವರೇ ಒಂದು ನಾಟಕ ಸಂಸ್ಥೆ ಸ್ಥಾಪಿಸಿ ಅದಕ್ಕೆ ಶ್ರೀಕಂಠೇಶ್ವರ ನಾಟಕ ಸಭಾ ಎಂದು ಹೆಸರಿಟ್ಟರು. ತಾವೇ ಬರೆದ ನಾಟಕಗಳನ್ನು ರಂಗದ ಮೇಲೆ ಪ್ರಯೋಗ ಮಾಡುತ್ತಿದ್ದುದರ ಜೊತೆಗೆ ತಾವೂ ಹಾಸ್ಯ ಪ್ರಧಾನಗಳಲ್ಲಿ ಅಭಿನಯಿಸುತ್ತಿದ್ದರು. ಸುಮಾರು 20 ವರ್ಷಗಳು ನ್ಯಾಯಾಧೀಶರಾಗಿದ್ದು 1910ರಲ್ಲಿ ನಿವೃತ್ತರಾದರು.

ನಿವೃತ್ತರಾದ ಮೇಲೆ ಬೆಂಗಳೂರು ಬಸವನಗುಡಿಯಲ್ಲಿ ಕಟ್ಟಿಸಿದ ಮನೆಗೆ ಬಂದು ವಾಸಿಸಲಾರಂಭಿಸಿದರು. ಬೆಂಗಳೂರಿನಲ್ಲಿ ಬಸವೇಶ್ವರ ಸಾ ಮಿಲ್ ಎಂಬ ಮರದ ಮಿಲ್ಲನ್ನು ಆರಂಭಿಸಿದರು. ನಂಜನಗೂಡಿನಲ್ಲಿ ಅಕ್ಕಿ ಗಿರಣಿಯೊಂದನ್ನು ಪ್ರಾರಂಭಿಸಿದರು. ಸ್ವಲ್ಪ ಸಮಯದ ನಂತರ ಈ ಎಲ್ಲ ವ್ಯವಹಾರಗಳನ್ನು ತಮ್ಮ ಇಬ್ಬರು ಮಕ್ಕಳಿಗೆ ವಹಿಸಿ ಸಾಹಿತ್ಯಾಭ್ಯಾಸ ಮುಂದುವರಿಸಿಕೊಂಡು ಹೋದರು. ನಂಜನಗೂಡಿಗೆ ತೆರಳಿದ್ದಾಗ ಅವರ ಆರೋಗ್ಯ ಕೆಟ್ಟು ಅವರನ್ನು ಕೂಡಲೇ ಮೈಸೂರಿಗೆ ಕರೆದುಕೊಂಡು ಬರಲಾಯಿತು. ಮೈಸೂರಿನಲ್ಲಿ 1926ರ ನವೆಂಬರ್ 26ರಂದು ಕೊನೆಯುಸಿರೆಳೆದರು. ಅವರ ಸಾವಿನಿಂದ ನವೋದಯ ಸಾಹಿತ್ಯ ಕ್ಷೇತ್ರದ ಓರ್ವ ವಿದ್ವಾಂಸ ಮರೆಯಾದಂತಾಗಿತ್ತು.

ಪೂಜ್ಯರಾದ ಡಿ.ವಿ.ಜಿ. ಅವರು ಶ್ರೀಕಂಠೇಶಗೌಡರ ಬಗ್ಗೆ ಬರೆಯುತ್ತಾ, ಅವರು ಕನ್ನಡಕ್ಕಾಗಿ ಶ್ರದ್ಧೆ ಸಾಮರ್ಥ್ಯಗಳಿಂದ ಕೆಲಸ ಮಾಡಿದ್ದವರು. ನನಗೆ ತಿಳಿದಮಟ್ಟಿಗೆ ಒಕ್ಕಲಿಗ ಜನಾಂಗದಲ್ಲಿ ಪ್ರಸಿದ್ಧರಾದ ಶ್ರೀಕಂಠೇಶಗೌಡರು ಪ್ರಪ್ರಥಮರು ಎಂದು ಪ್ರಶಂಸಿಸಿದ್ದಾರೆ.

ಸಿಂಧು ದರ್ಶನ ಯಾತ್ರಾ...



ನಾದಲಹರಿ
ಡಾ.ರಮಾ ವಿ. ಬೆಣ್ಣೂರ್
ಸಂಗೀತ ವಿಮರ್ಶಕರು
ಮೊ: 99452 82346


ಭಾರತದಲ್ಲಿ ಇಲ್ಲ ಎಂದು ಭಾವಿಸಿದ್ದ ಸಿಂಧೂ ನದಿಯ ಹರಿವನ್ನು ಸುಮಾರು ಮೂವತ್ತು ವರುಷಗಳ ಹಿಂದೆ ಪತ್ತೆಹಚ್ಚಿದ ಕೀರ್ತಿ ಶ್ರೀ ಎಲ್.ಕೆ.ಅದ್ವಾನಿಯವರದು. ಅಂದಿನಿಂದ ಭಾರತ ಸರ್ಕಾರವು ಸಿಂಧೂ ದರ್ಶನ ಯಾತ್ರಾವನ್ನು ನಡೆಸುತ್ತಾ ಬಂದಿದೆ. ಜೊತೆಗೆ, ಜಮ್ಮು, ಕಾಶ್ಮೀರ, ಕಾರ್ಗಿಲ್, ಕುಲು ಮನಾಲಿ ಮುಂತಾದವೂ ಸೇರಿರುತ್ತವೆ. 1922ರಲ್ಲಿ ನಾವು ಅದಕ್ಕೆ ಹೋದಾಗಿನ ಪಯಣದ ತುಣುಕುಗಳಿವು. ಅಧಿಕಾರಿಗಳ ನಿರ್ಲಕ್ಷ್ಯ, ಅವ್ಯವಸ್ಥೆ ಎಲ್ಲವೂ ನೆನಪಾಯಿತು.

ಇಂದೋರ್ ಮೂಲಕ ಜಮ್ಮುಗೆ ಹಾರಿದ ವಿಮಾನದಿಂದ ಮಧ್ಯಾಹ್ನ ಹನ್ನೆರಡಕ್ಕೆ ಇಳಿದು ಟ್ಯಾಕ್ಸಿ ಮಾಡಿಕೊಂಡು ನಮ್ಮ ಹೋಟೆಲ್‌ಗೆ ಹೋದೆವು. ಸಂಜೆ 6.45ಕ್ಕೆ ನಮ್ಮನ್ನು ಅಗರ್ವಾಲ್ ಧರ್ಮಶಾಲಾಗೆ ಬರಹೇಳಿದ್ದರು. ಜಮ್ಮು–ಕಾಶ್ಮೀರ ಎಂದೊಡನೆ ಅವ್ಯಕ್ತ ಭಯ ಮನದಲ್ಲಿ. ಸ್ವಾಗತ ಸಮಾರಂಭ ರದ್ದಾಗಿ ತಡವಾಗಿಯೇ ಬನ್ನಿ, ಊಟದ ವೇಳೆಗೆ ಎಲ್ಲರಿಗೂ ನಾಳಿನ ಕಾರ್ಯಕ್ರಮದ ಸೂಚನೆ ಕೊಡುತ್ತಾರೆ, ಲೇಟಾಗಿ ಬನ್ನಿ ಎಂದು ಹೇಳಿದ್ದರಿಂದ ನಾವು, ಸಮೀಪದಲ್ಲಿದ್ದ ಶ್ರೀ ರಘುನಾಥಜೀ ಮಂದಿರಕ್ಕೆ ನಡೆದೇ ಹೊರಟೆವು. ಜೋರಾಗಿ ಕೇಳುತ್ತಿದ್ದ ಅಝಾನ್ ಮನದಲ್ಲಿ ಹೇಳಲಾಗದ ಭಾವನೆಗಳನ್ನು ಉಕ್ಕಿಸುತ್ತಿತ್ತು.

ರಾತ್ರಿ ಒಂದು ಸಾಧಾರಣ ಸೌಲಭ್ಯಗಳಿದ್ದ ರೂಮಿಗಾಗಿ ಪರದಾಡಿ ಗುದ್ದಾಡಿ, ಕಡೆಗೂ ರೂಮಿಗೆ ಬದಲಾಯಿಸಿ ಊಟಕ್ಕೆ ತೆರಳಿದಾಗ ರಾತ್ರಿ 11.30 ದಾಟಿತ್ತು. ಮತ್ತೆ ರೂಮಿಗೆ ಬಂದು ಮಲಗಿದಾಗ ಮತ್ತೊಂದು ಗಂಟೆ ದಾಟಿತ್ತು. ದಣಿದ ದೇಹಕ್ಕೆ ತೀರಾ ತೆಳುವಾದ ಹಾಸಿಗೆಯ ಅರಿವೂ ಬರಲಿಲ್ಲ. ಬೆಳಿಗ್ಗೆ 6.30ಕ್ಕೆ ಎಚ್ಚರವಾಗಿ ಶೌಚಕ್ಕೆ ಹೋದಾಗಲೇ ಗೊತ್ತಾಗಿದ್ದು ಯಾವ ನಲ್ಲಿಯಲ್ಲೂ ನೀರು ಬರುತ್ತಿಲ್ಲವೆಂದು!

ಇನ್ನು ನೀರಿಗಾಗಿ ಪರದಾಟ, ಹಾಹಾಕಾರ. ಇಷ್ಟು ಕೆಟ್ಟ ಅನುಭವ ಇದೇ ಮೊದಲಬಾರಿ ನಮಗೆ. ಸರಿ ಅಂತೂ ನಲ್ಲಿಯಲ್ಲಿ ನೀರು ಬರಿಸಿದೆವು. ಆದರೆ ಎಂಥ ಬಣ್ಣ–ಅಕ್ಷರಶ: ಕಾಲಾಪಾನಿ 1 ಗಂಟೆ ಆದರೂ ಬಣ್ಣ ಬದಲಾಗದೊಲ್ಲದು.

ಅಂತು–ಇಂತು ಸ್ನಾನ ಮುಗಿಸಿ ಮತ್ತೊಂದು ಹೋಟೆಲ್‌ನಲ್ಲಿ ಏರ್ಪಾಡಾಗಿದ್ದ ತಿಂಡಿ ತಿಂದು ನಮ್ಮವರಿಗೆ ತಟ್ಟೆಯಲ್ಲಿ ಹಾಕಿ ಮುಚ್ಚಿಕೊಂಡು ಬರುತಿದ್ದಾಗ, ನಮ್ಮ ಬಸ್ಸಿನಲ್ಲಿ ಎಲ್ಲರೂ ರೆಡಿಯಾಗಿ ಕುಳಿತು ನಮ್ಮ ಹಾದಿ ಕಾಯುತ್ತಿದ್ದುದು ಕಂಡಿತು, ಕೂಡಲೇ ರೂಮಿಗೆ ಓಡಿ ನಮ್ಮವರನ್ನು ಸ್ನಾನವಿಲ್ಲದೇ ಹಾಗೇ ಎಳೆದು ತಂದು ಬಸ್ಸಿನಲ್ಲಿ ಕುಳಿತಾಗಲೇ ತಿಳಿದಿದ್ದು? 8 ಗಂಟೆಯ ನಂತರ ಬಸ್ಸುಗಳನ್ನು ಸಿಟಿಯ ಹೊರಗೆ ಬಿಡುವದಿಲ್ಲವೆಂದು. ಆಗ ಸಮಯ 8.45. ಪೆನಾಲ್ಟಿ ಕಟ್ಟಬೇಕೆಂದು ಡ್ರೈವರ್ ಹೇಳಿದಾಗ ಪೊಲೀಸರೊಡನೆ ಆ ಮಾತುಕತೆ ಮುಗಿಸಿ ಬಂದು, ಇಂದು ಲೋಕಲ್ ಸ್ಥಳಗಳನ್ನು ನೋಡುವುದು ಎಂದಾಯಿತು. ನಮಗೆ ಎಂಟರ ಒಳಗೆ ಹೊರಡಬೇಕೆಂದು ತಿಳಿದಿದ್ದರೆ, ಈ ಅವ್ಯವಸ್ಥೆಗೆ ಅವಕಾಶವೇ ಇರುತ್ತಿರಲಿಲ್ಲ. ಸರಿ, ಅಲ್ಲಿಂದ ಸ್ಥಳೀಯ ಲೇಕ್ ಒಂದಕ್ಕೆ ಕರೆದೊಯ್ದ ಡ್ರೈವರ್. ಎಲ್ಲರೂ ಇಳಿದು, 12ರ ಒಳಗೆ ಬರಬೇಕೆಂಬ ತೀರ್ಮಾನಕ್ಕೆ ಬದ್ಧರಾಗಿ ಹೊರಟರು. ನಾವು ಐದಾರು ಮಂದಿ ಅಲ್ಲಿಯೇ ಉಳಿದೆವು. ಸರಿ, ಗೋಲ್ಡನ್ ಲೇಕಿಗೆ



ಹೋಗಿ, ಅಲ್ಲಿ ಎಲ್ಲರನ್ನೂ ಬೋಟಿನಲ್ಲಿ ತಿರುಗಾಡಿಕೊಂಡು ಬರಲು ಕಳುಹಿಸಿ, ನಾವು ಏಳೆಂಟು ಮಂದಿ ಸ್ವಲ್ಪ ತಡವಾಗಿ ಹೊರಟೆವು. ಈ ಸರೋವರದ ಉದ್ದಕ್ಕೂ ಗಿರಾಕಿಗಳಿಗಾಗಿ ಸಿಂಗರಿಸಿಕೊಂಡು ನಿಂತ ಬೋಟ್‌ಹೌಸ್‌ಗಳ ಸಾಲು ಒಂದೆಡೆ. ಒಂದು ದಿನಕ್ಕೆ 4–10 ಸಾವಿರ ದವರೆಗೆ ವಸೂಲಿ ಮಾಡುವ ಈ ಬೋಟ್‌ಹೌಸ್‌ಗಳಲ್ಲಿ ಒಂದು ದಿನವಿದ್ದು ಅದರ ಅನುಭವ ಪಡೆಯಬಹುದು. ಪ್ರವಾಸಿಗಳನ್ನು ಕರೆದೊಯ್ಯಲು ದುಂಬಾಲು ಬೀಳುವ ಚಿಗಾರಿ ಎಂಬ ಚಿಕ್ಕ ದೋಣಿಗಳ ನಾವಿಕರು ಮತ್ತೊಂದೆಡೆ. ಬರೀ ದೋಣಿ ವಿಹಾರ ಎಂದಂದುಕೊಂಡು ಹೊರಟರೆ, ದೋಣಿಯಲ್ಲಿ ಕುಳಿತಾಗಲೇ ಪುಟ್ಟ ಪುಟ್ಟ ದೋಣಿಗಳಲ್ಲಿ ಬಂದು ವ್ಯಾಪಾರ ಮಾಡುವ ಕಶ್ಮೀರಿಗಳ ಗುಂಪೇ ಇದೆ ಎಂಬುದು ಗೊತ್ತಾದುದು. ಸ್ಥಳೀಯರಾದ ಇವರಿಗೆ ಪ್ರವಾಸಿಗರು ಬಂದಾಗಲೇ ವ್ಯಾಪಾರ ನಡೆದು ಹೊಟ್ಟೆ ತುಂಬುವುದು. ಹೀಗಾಗಿ, ಕೋವಿಡ್ ಸಮಯದಲ್ಲಿ ಇವರ ಬದುಕು ಏನಾಗಿರಬೇಡ? ಇಲ್ಲಿ ಪುಟ್ಟ ಪುಟ್ಟ ದೋಣಿಗಳಲ್ಲಿ ಬಂದು ದಿಢೀರನೆ ನಿಮ್ಮ ಬೋಟಿನ ಪಕ್ಕದಲ್ಲಿ ಪ್ರತ್ಯಕ್ಷವಾಗುವ ಇವರ ಮಾರಾಟದ ಸರಕು ವೈವಿಧ್ಯಮಯ. ಮೂರು ರೀತಿಯ ಚಹಾಗಳು. ಅದರಲ್ಲಿ ಕಾಶ್ಮೀರದ ವಿಶೇಷವಾದ ಕೇಸರಿ, ದಾಲ್ಚಿನಿ, ಅಕ್ರೋಟ್, ಶುಂಠಿ ಇತ್ಯಾದಿಗಳನ್ನು ಬೆರಸಿರುವ ಖಾವಾ, ಸರ–ಓಲೆ, ಹಣ್ಣುಗಳಲ್ಲದೆ ಮತ್ತೊಂದು ವಿಶೇಷವೂ ಉಂಟು. ಒಂದು ಬೋಟಿನಲ್ಲಿ ಹೆಂಗಸರ, ಗಂಡಸರ ಅಪ್ಪಟ ಕಾಶ್ಮೀರಿ ಉಡುಪುಗಳನ್ನು ಹೊತ್ತು ತಂದು, ಕ್ಷಣಮಾತ್ರದಲ್ಲಿ ಅದನ್ನು ಗಿರಾಕಿಗಳಿಗೆ ತೊಡಿಸಿ, ನಾನಾ ಭಂಗಿಗಳಲ್ಲಿ ಫೋಟೋ ತೆಗೆದು, ಅದನ್ನು ಮಾರಾಟ ಮಾಡುವ ಚಾಕಚಕ್ಯತೆಗೆ ಎಂಥವರೂ ತಲೆದೂಗಲೇಬೇಕು. ತೀರಾ ನಿಮ್ಮ ಬೋಟಿನ ಪಕ್ಕದಲ್ಲೇ ನಿಲ್ಲಿಸಿ, ನಿಮ್ಮನ್ನು ಅವರ ಬೋಟಿಗೆ ಹತ್ತಿಸಿಕೊಂಡು ಕಸೂತಿ ಮಾಡಿದ ಉದ್ದನೆಯ ದಿರಸನ್ನು ನಿಮ್ಮ ತಲೆಯಿಂದ ಜಾರಿಸಿ, ತಲೆಯ ಮೇಲೆ ವಸ್ತ್ರ ಕಟ್ಟಿ, ಸಾಂಪ್ರದಾಯಿಕ ಓಲೆ, ಸರಗಳನ್ನು ಹಾಕಿಸಿ, ಕೈಯಲ್ಲಿ ಹೂಗುಚ್ಛ ಕೊಟ್ಟಾಗ ಇದು ನಾನೇ" ಎಂದು ನಿಮಗೆ ಅನುಮಾನ ಬರುವುದು ಖಂಡಿತ.

ಕೇಸರಿಯವನು ಬಂದು ತನ್ನ ಸರಕು ಅತ್ಯಂತ ಶುದ್ಧವೆಂಬುದನ್ನು ಸಾಬೀತು ಮಾಡುವ ಚಾಕಚಕ್ಯತೆ ಮೆಚ್ಚಲೇಬೇಕು. ಚೌಕಾಸಿ ಮಾಡುವ ಚಾತುರ್ಯ ಇಲ್ಲದಿದ್ದರೆ, ನಿಮಗೆ ಟೋಪಿ ಬೀಳುವುದು ಖಂಡಿತ. ಗುಲ್ ಗುಲ್ಷನ್ ಗುಲ್ಫಾಂ ಎಂಬ ಟಿ.ವಿ ಧಾರಾವಾಹಿಯ ಶೂಟಿಂಗ್ ನಡೆದ ಬೋಟ್‌ಹೌಸನ್ನೂ ಹೊರಗಿನಿಂದ ತೋರಿಸುತ್ತಾರೆ. ಅಕ್ಬರನ ಕೋಟೆ, ಆದಿಶಂಕರರ ಗುಡಿ ಇಲ್ಲಿಂದ ಕಾಣಿಸುತ್ತದೆ. ಕಣ್ಣು ಹಾಯಿಸಿದಷ್ಟು ದೂರ ಹಸಿರ ಬೆಟ್ಟಗಳ ಸಾಲು, ಅವುಗಳ ಮೇಲೆ ತೇಲುವ ಮೋಡ, ಮಂದಗತಿಯಲ್ಲಿ ಸಾಗುವ ದೋಣಿ– ರಸಿಕ ಮನಗಳಿಗೆ ಕಚಗುಳಿ ಇಡುತ್ತವೆ. ದೋಣಿವಿಹಾರ ಮುಗಿಸಿ ಅಲ್ಲಿಂದ ಊಟಕ್ಕೆ ತೆರಳಿ, ಶಾಲಿಮಾರ್ ಬಾಗ್ಗೆ ನಮ್ಮ ಪಯಣ ಮುಂದುವರೆಯಿತು. ಕಾರಂಜಿಗಳು, ವೈವಿಧ್ಯಮಯ ಹೂಗಳಿಂದ ಕೂಡಿದ ಈ ತೋಟದ ಒಳಗಿನ ಕಟ್ಟಡವು ಬೆಂಗಳೂರಿನ ಟಿಪ್ಪೂ ಅರಮನೆಯನ್ನು ನೆನಪಿಸುತ್ತವೆ. ಅಲ್ಲಿಂದ ಮತ್ತೊಂದು ಬಾಗ್ ನಿಹಾರ್ ಶಾಪಿಂಗ್ ಕಾಂಪ್ಲೆಕ್ಸ್‌ನಲ್ಲಿ ಶಾಪಿಂಗ್ ಸಂಭ್ರಮ. ಕಾಶ್ಮೀರದಲ್ಲೇ ಬೆಳೆಯುವ ಒಣಹಣ್ಣು, ಬೀಜಗಳು, ಕೇಸರಿ, ಕೇಸರಿಯ ಜೇನುತುಪ್ಪ, ಶಿಲಾಜಿತ್, ದಾಲ್ಚಿನ್ನಿ, ಜೀರಿಗೆ, ದ್ರಾಕ್ಷಿ– ಒಂದೇ ಎರಡೇ? ಇಲ್ಲಿ ಕಸೂತಿಯ ಕುಸುರಿ ಕೆಲಸ ಬಹಳ ಪ್ರಸಿದ್ಧ. ಅದರಲ್ಲಿ ಸೂಜಿಯ ಗಾತ್ರಕ್ಕೆ ತಕ್ಕಂತೆ ಕಸೂತಿ ತಯಾರಾಗುತ್ತದೆ. ಬೆಲೆಯೂ ಅದಕ್ಕೆ ತಕ್ಕಂತೆ. ಶಾಲು, ಕೋಟು, ಕೈಚೀಲ, ಪೊಂಚೋ, ಸೀರೆ ಎಲ್ಲದರ ಮೇಲೂ ಅತೀ ಸುಂದರ, ಬಣ್ಣಬಣ್ಣದ ಕಸೂತಿ ಕಂಗೊಳಿಸುತ್ತಿರುತ್ತದೆ. ಸಂಜೆ ರೂಮಿಗೆ ಬಂದು ದಣಿದ ದೇಹವನ್ನು ವಿರಾಮದಿಂದ ತೃಪ್ತಿಪಡಿಸಿ, ಮರುದಿನದ ಸಿದ್ಧತೆಗೆ ತೊಡಗಿದೆವು. ಮರುದಿನ ಬೆಳಗಿನ ಆರು ಗಂಟೆಗೆ ತಿಂಡಿತಿಂದು, ನಮ್ಮ ಸಾಮಾನುಗಳನೆಲ್ಲ ಏಳಕ್ಕೇ ಬಸ್ಸಿಗೇರಿಸಬೇಕಾಗಿತ್ತು. **(ಮುಂದುವರೆಯುತ್ತದೆ)**

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಗಿಲ್, ಸಾಯಿ ಅರ್ಧಶತಕ: ಟೈಟನ್ಸ್‌ಗೆ ಸತತ ನಾಲ್ಕನೇ ಗೆಲುವು



ವಿಕೆಟ್ ಪಡೆದ ಬಳಿಕ ಗುಜರಾತ್ ಆಟಗಾರರ ಸಂಭ್ರಮ

ಜೈಪುರ, ಮೇ 9– ಆರಂಭಿಕ ಆಟಗಾರರಾದ ಶುಭಮನ್ ಗಿಲ್ ಮತ್ತು ಸಾಯಿ ಸುದರ್ಶನ್ ಅವರ ಶತಕದ ಜೊತೆಯಾಟದಿಂದಾಗಿ ಗುಜರಾತ್ ಟೈಟನ್ಸ್ ತಂಡವು ಐಪಿಎಲ್‌ನಲ್ಲಿ ಸತತ ನಾಲ್ಕನೇ ಗೆಲುವಿನೊಂದಿಗೆ ಅಂಕಪಟ್ಟಿಯಲ್ಲಿ ಎರಡನೇ ಸ್ಥಾನಕ್ಕೇರಿದೆ.

ಸವಾಯಿ ಮಾನಸಿಂಗ್ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಪಂದ್ಯದಲ್ಲಿ ಗುಜರಾತ್ ತಂಡವು 77 ರನ್‌ಗಳಿಂದ ರಾಜಸ್ಥಾನ ರಾಯಲ್ಸ್ ತಂಡವನ್ನು ನಿರಾಯಾಸವಾಗಿ ಮಣಿಸಿತು. ಸತತ ಎರಡನೇ ಪಂದ್ಯ ಸೋತ ರಾಜಸ್ಥಾನ ತಂಡದ ಪ್ಲೇ ಆಫ್ ಹಾದಿ ಕಠಿಣವಾಗಿದೆ.

ಟಾಸ್ ಸೋತು ಬ್ಯಾಟಿಂಗ್‌ಗಿಳಿದ ಗುಜರಾತ್ ಗಿಲ್ 44 ಎಸೆತಗಳಲ್ಲಿ 84 ರನ್ ಮತ್ತು ಸುದರ್ಶನ್ 55 (36ಎ) ಅವರ ಅರ್ಧಶತಕಗಳ ನೆರವಿನಿಂದ 4 ವಿಕೆಟ್‌ಗೆ 229 ರನ್‌ಗಳ ಭಾರಿ ಮೊತ್ತ ಗಳಿಸಿತು. ಈ ಗುರಿಯನ್ನು ಬೆನ್ನತ್ತಿದ ರಾಜಸ್ಥಾನ ತಂಡವು ರಶೀದ್ (33ಕ್ಕೆ 4 ವಿಕೆಟ್), ಜೇಸನ್ ಹೋಲ್ಡರ್ (13ಕ್ಕೆ 3) ಮತ್ತು ಕಗಿಸೊ ರಬಾಡ (33ಕ್ಕೆ 2) ದಾಳಿಗೆ ತತ್ತರಿಸಿತು. ಹೀಗಾಗಿ, 16.3 ಓವರ್‌ಗಳಲ್ಲಿ 152 ರನ್ ಗಳಿಸಿ ಸರ್ವಪತನ ಕಂಡಿತು.

ನಾಯಕ ಯಶಸ್ವಿ ಜೈಸ್ವಾಲ್ ಕೂಡ ದೊಡ್ಡ ಇನ್ನಿಂಗ್ಸ್ ಆಡುವಲ್ಲಿ ವಿಫಲರಾದರು. ರಾಜಸ್ಥಾನದ ಬ್ಯಾಟಿಂಗ್ ಕುಂಟುತ್ತಾ ಸಾಗಿತು. ಧ್ರುವ್ ಜುರೆಲ್ ಕೆಲವು ಅದ್ಭುತ ಹೊಡೆತಗಳನ್ನು ಹೊಡೆದರೂ ರವೀಂದ್ರ ಜಡೇಜಾ 38 ರನ್ ಗಳಿಸಲು ಹೆಣಗಾಡಿದರು. ಕೊನೆಯಲ್ಲಿ, ಜೇಸನ್ ಹೋಲ್ಡರ್ ಕೂಡ ಎರಡು ವಿಕೆಟ್ ಪಡೆದು ರಾಜಸ್ಥಾನದ ಇನ್ನಿಂಗ್ಸ್ ಅನ್ನು 152ಕ್ಕೆ ಕಟ್ಟಿಹಾಕಿದರು.

ನಿರ್ಮಾಣ ಹಂತದ ಬಡಾವಣೆಯಲ್ಲಿ ವೈರ್ ಕಳವು: ಐವರು ಖದೀಮರ ಬಂಧನ

ಮೈಸೂರು, ಮೇ 9(ಎಸ್‌ಪಿಎನ್)– ನಿರ್ಮಾಣ ಹಂತದ ಬಡಾವಣೆಯಲ್ಲಿ 5 ಕಿಮೀ ಉದ್ದದ ಎಸಿಎಸ್‌ಆರ್ ವೈರನ್ನು ಕಳ್ಳತನ ಮಾಡಿದ್ದ ಐವರು ಆರೋಪಿಗಳನ್ನು ಮೈಸೂರು ಜಿಲ್ಲಾ ಅಪರಾಧ ಪತ್ತೆದಳದ ಪೊಲೀಸರು ಬಂಧಿಸಿದ್ದಾರೆ. ಇವರಿಂದ 281 ಕೆಜಿ ತೂಕದ 4 ಬಂಡಲ್ ಎಸಿಎಸ್‌ಆರ್ ವೈರು, ಈಚರ್ ಲಾರಿ, 2.47 ಲಕ್ಷ ನಗದು ವಶಕ್ಕೆ ಪಡೆದಿದ್ದಾರೆ.

ಮೈಸೂರು ಜಿಲ್ಲೆಯ ಸರಗೂರು ಟೌನ್ ಕಾಳಿಕಾಂಭ ರಸ್ತೆ ನಿವಾಸಿ ಎಸ್.ಸಿ.ಚಿಕ್ಕಣ್ಣಚಾರಿ (58), ಕೊಡಗು ಜಿಲ್ಲೆ ವಿರಾಜಪೇಟೆ ತಾಲೂಕಿನ ಚನ್ನಯ್ಯನಕೋಟೆ ಗ್ರಾಮದ ನಿವಾಸಿ ಚಂದ್ರ (48), ಆರೀಫ್ (38), ಶಿವಯ್ಯ (63), ಎಚ್.ಆರ್.ರವಿ (32) ಸೇರಿದಂತೆ ಐವರನ್ನು ಪೊಲೀಸರು ಬಂಧಿಸಿದ್ದಾರೆ.

ಘಟನೆಯ ವಿವರ: ಮೈಸೂರು ತಾಲೂಕು, ಇಲವಾಲ ಹೋಬಳಿ ಶೆಟ್ಟನಾಯಕನಹಳ್ಳಿ ಗ್ರಾಮದ ವೃಷಬೇಂದ್ರ ಸ್ವಾಮಿ ಅವರು ಬೀರಿಹುಂಡಿ ಗ್ರಾಮದ ಬಳಿ 2 ಎಕರೆ ಬಡಾವಣೆ ನಿರ್ಮಾಣ ಮಾಡುತ್ತಿದ್ದು, 5 ಕಿ.ಮೀ ಉದ್ದದ ಎಸಿಎಸ್‌ಆರ್ ವೈರುಗಳು ಕಳ್ಳತನ ವಾಗಿತ್ತು. ಈ ಬಗ್ಗೆ ಜಯಪುರ ಠಾಣೆಯಲ್ಲಿ ದೂರು ದಾಖಲಾಗಿತ್ತು.

ಇದರ ಅನ್ವಯ ಪ್ರಕರಣದ ಪತ್ತೆಗಿಳಿದ ಪೊಲೀಸರಿಗೆ ಸಾರ್ವಜನಿಕರು ನೀಡಿದ ಖಚಿತ ಮಾಹಿತಿ ಮೇರೆಗೆ ಮೈಸೂರು ಜಿಲ್ಲಾ ಅಪರಾಧ ಪತ್ತೆದಳದ ಅಧಿಕಾರಿ ಎಎಸ್‌ಐ ಸತೀಶ್ ಹಾಗೂ ಸಿಬ್ಬಂದಿ ತನಿಖೆ ಆರಂಭಿಸಿದ್ದರು. ಮೇ 8 ರಂದು ಪೊಲೀಸರು ಹಾರೋಹಳ್ಳಿ ಗೇಟ್ ಹತ್ತಿರ ವಾಹನಗಳನ್ನು ತಪಾಸಣೆ ಮಾಡುವಾಗ ಸರಗೂರು ಕಡೆಯಿಂದ ಬರುತ್ತಿದ್ದ ಈಚರ್ ವಾಹನವನ್ನು ನಿಲ್ಲಿಸಿ, ತಪಾಸಣೆ ಮಾಡಿದಾಗ ವಾಹನದಲ್ಲಿದ್ದ 4 ಬಂಡಲ್ ಎಸಿಎಸ್‌ಆರ್ ವೈರುಗಳು ಪತ್ತೆಯಾಗಿವೆ. ಇವುಗಳನ್ನು ಕಳ್ಳತನ ಮಾಡಿರುವುದಾಗಿ ವಿಚಾರಣೆ ವೇಳೆ ಆರೋಪಿಗಳು ತಿಳಿಸಿದ್ದಾರೆ.

ಈ ಪ್ರಕರಣ ಪತ್ತೆಯಿಂದಾಗಿ ಜಯಪುರ ಠಾಣೆ, ವರುಣ ಪೊಲೀಸ್ ಠಾಣೆಯ ತಲಾ ಒಂದೊಂದು ಪ್ರಕರಣ ಪತ್ತೆಯಾಗಿವೆ. ಈ ಆರೋಪಿಗಳ ವಿಚಾರಣೆ ಮುಗಿದ ಬಳಿಕ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ಮಾರ್ಗದರ್ಶನ, ಎಎಸ್‌ಪಿಗಳಾದ ಸಿ.ಮಲ್ಲಿಕ್, ಎಲ್.ನಾಗೇಶ್ ಅವರ ನಿರ್ದೇಶನದಲ್ಲಿ ನಡೆದ ಪತ್ತೆ ಕಾರ್ಯಾಚರಣೆಯಲ್ಲಿ ಮೈಸೂರು ಗ್ರಾಮಾಂತರ ಉಪವಿಭಾಗದ ಡಿವೈಎಸ್ಪಿ ರಾಜಣ್ಣ, ಜಯಪುರ ಠಾಣೆಯ ಎಸ್‌ಐ ಪ್ರಕಾಶ್ ಎತ್ತಿನಮನಿ, ಸಿಬ್ಬಂದಿ ಅಬ್ದುಲ್ ಲತೀಫ್, ಎನ್.ಎ.ಅಶೋಕ, ಭಾಸ್ಕರ್, ಪಚ್ಚೇಗೌಡ, ನಿಂಗಣ್ಣ, ದಿಲೀಪ್ ಪಾಲ್ಗೊಂಡಿದ್ದರು.

ನೀರಿಲ್ಲದ ಜಿಲ್ಲೆಗೆ ನೀರು ನೀಡಿದ ಭಗೀರಥ ಬಿಎಸ್‌ವೈ

ಮಾಜಿ ಸಿಎಂ ಬಸವರಾಜ ಬೊಮ್ಮಾಯಿ ಬಣ್ಣನೆ

ಚಿತ್ರದುರ್ಗ, ಮೇ 9– ರೈತ ನಾಯಕ ಬಿ.ಎಸ್. ಯಡಿಯೂರಪ್ಪ ಅವರು ನೀರಿಲ್ಲದ ಜಿಲ್ಲೆಗಳಿಗೆ ನೀರು ನೀಡಿದ ಭಗೀರಥ ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಸಂಸದರಾದ ಬಸವರಾಜ ಬೊಮ್ಮಾಯಿ ಬಣ್ಣಿಸಿದ್ದಾರೆ.

ಬಿಎಸ್‌ವೈ ಅಭಿಮಾನೋತ್ಸವದಲ್ಲಿ ಇಂದು ಮಾತನಾಡಿದ ಅವರು, ಯಡಿಯೂರಪ್ಪ ಅವರ ಹೆಸರಲ್ಲೇ ಶಕ್ತಿ ಇದೆ. ಇಡೀ ಕರ್ನಾಟಕದಲ್ಲಿ ಬಡವರ ಮನೆಯಲ್ಲಿ, ಮನದಲ್ಲಿ, ದೀನ ದಲಿತರ ಹೃದಯದಲ್ಲಿ ಯಾವುದಾದರೂ ಹೆಸರು ಮಿಡಿಯುತ್ತಾ ಇದ್ದರೆ ಅದು ಯಡಿಯೂರಪ್ಪ ಅವರದು ಎಂದರು.



ಕೋಟೆ ನಾಡು, ಮದಕರಿ ನಾಯಕನ ಬೀಡು, ಬಿಸಿಲು ಮತ್ತು ಬರಗಾಲ ಪೀಡಿತ ಚಿತ್ರದುರ್ಗಕ್ಕೆ ಶಾಶ್ವತವಾಗಿ ನೀರು ಉಣಿಸಲು ಭದ್ರತಾ ಮೇಲ್ದಂಡೆ ಯೋಜನೆ ಜಾರಿ ಮಾಡಿದವರು. ಮುಖ್ಯಮಂತ್ರಿಗಳಾದ ತಕ್ಷಣ ಮೊದಲ ನಿರ್ಧಾರವೇ ಬಿಸಿಲಿನ ನಾಡಿಗೆ ತಂಪು ನೀಡುವುದಾಗಿತ್ತು. ಅದಕ್ಕಾಗಿ ನಿರ್ಣಯ ಮಾಡಿದವರು. ವಾಣಿವಿಲಾಸ ಸಾಗರಕ್ಕೆ ಐದು ಟಿಎಂಸಿ ನೀರು ಕೊಟ್ಟವರು, ಚಿತ್ರದುರ್ಗ ಜಿಲ್ಲೆಯಲ್ಲಿ ಕುಡಿಯಲು ನೀರು ನೀಡಿದರು, ನೀರಾವರಿ ನೀರು ಒದಗಿಸಿದರು ಎಂದರು.

ವಿರೋಧ ಪಕ್ಷದಲ್ಲಿ ಇದ್ದಾಗ ಹೋರಾಟ ಮಾಡಿದ ಬಿಎಸ್‌ವೈ ಅವರು ಅಧಿಕಾರಕ್ಕೆ ಬಂದಾಗ ಆ ಹೋರಾಟದ ಬೇಡಿಕೆಗಳಿಗೆ ಕಾಯಕಲ್ಪ ನೀಡಲು ಪ್ರಾಮಾಣಿಕ ಪ್ರಯತ್ನ ಮಾಡಿದವರು ಎಂದರು. ಬಿಜಾಪುರದಲ್ಲಿ, ಶಿಗ್ಗಾಂವಿಯಲ್ಲಿ, ಚಾಮರಾಜನಗರದಲ್ಲಿ ಕೆರೆ ತುಂಬಿಸುವ ಯೋಜನೆಗಳಿಗೆ ಚಾಲನೆ ನೀಡಿದರು. ಗಂಗೆ ಮಾತೆಯನ್ನು ಭೂತಾಯಿಗೆ ಉಣಿಸಿ ರೈತರ ಬೆವರು ಸೇರಿದರೆ ಬಂಗಾರದ ಬೆಳೆ ಬೆಳೆಯಲು ಅವಕಾಶ ನೀಡಿದವರು ಯಡಿಯೂರಪ್ಪ ಎಂದರು.

ಸುಳ್ಳು ಹೇಳಿ ಜನರನ್ನು, ಜನಾಂಗವನ್ನು ದಾರಿ ತಪ್ಪಿಸಿ ಅಧಿಕಾರಕ್ಕಾಗಿ ರಾಜಕಾರಣದ ಮಾಡುವವರ ನಡುವೆ ಪ್ರಾಮಾಣಿಕವಾದ ಜನಪರವಾದ ಜನನಾಯಕ ತಾವು ಎಂಬುದನ್ನು ರಾಜ್ಯಕ್ಕೆ ತೋರಿಸಿದವರು ಯಡಿಯೂರಪ್ಪ ಎಂದರು.

ಹುಟ್ಟು ಹೋರಾಟಗಾರ ಬಿಎಸ್‌ವೈ: ಕಾಗಿನೆಲೆ ಕನಕಗುರುಪೀಠದ ಶ್ರೀ ನಿರಂಜನಾನಂದಪುರಿ ಸ್ವಾಮೀಜಿ ಮಾತನಾಡಿ, ಕರ್ನಾಟಕದ ಇತಿಹಾಸದಲ್ಲಿ ಸೇರುವ ಕಾರ್ಯಕ್ರಮ ಇದಾಗಿದೆ. ಯಡಿಯೂರಪ್ಪ ಅವರು ಹುಟ್ಟು ಹೋರಾಟಗಾರ. ಕರ್ನಾಟಕದಲ್ಲಿ ಬಿಜೆಪಿ ಕಟ್ಟಲು ಸೈಕಲ್ ಮೇಲೆ ಹೋದವರು. ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬರಲು ಸಾಕಷ್ಟು ಶ್ರಮಿಸಿದವರು ಎಂದರು.


ಕನಕದಾಸ ಜಯಂತಿಯನ್ನು ಸರ್ಕಾರದ ವತಿಯಿಂದ ಆಚರಿಸಲು ಬಿಎಸ್‌ವೈ ಅವರ ಕೊಡುಗೆ ದೊಡ್ಡದಿದೆ. ಅವರ ಅಧಿಕಾರದ ಅವಧಿಯಲ್ಲಿ ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರಕ್ಕೆ ಹೆಚ್ಚು ಅನುದಾನ ನೀಡಿದರು ಎಂದರು

ಬಿಎಸ್‌ವೈ ಅವರು ಬದ್ಧತೆಯ ವ್ಯಕ್ತಿ. ಒಂದು ಬಾರಿ ಮಾತು ನೀಡಿದರೆ ಹಿಂಜರಿಯುವುದಿಲ್ಲ. ಅಭಿವೃದ್ಧಿ ಕಾರ್ಯಕ್ಕೆ ಸಾಕಷ್ಟು ಅನುದಾನ ನೀಡಿದವರು. ಬಿಎಸ್‌ವೈ ಅವರ ಬಗ್ಗೆ, ಸಾಧನೆಗಳ ಬಗ್ಗೆ ಮಾತನಾಡಲು ಹೆಚ್ಚು ಹೊತ್ತು ಬೇಕು. ಅವರಿಗೆ ದೇವರು ಆಯಸ್ಸು ನೀಡಿ ಜನರ ಸೇವೆ ಮಾಡುವ ಶಕ್ತಿ ನೀಡಲಿ ಎಂದು ಹಾರೈಸಿದರು. ವಿವಿಧ ಮಠಗಳ ಸ್ವಾಮೀಜಿಗಳು ಬಿಎಸ್‌ವೈ ಅವರ ಸಾಧನೆಯ ಮತ್ತು ಜನಸೇವೆ ಕುರಿತು ಮಾತನಾಡಿ ಶುಭ ಹಾರೈಸಿದರು.









ಸ್ಟಾಕ್ ಮಾರ್ಕೆಟ್‌ನಲ್ಲಿ ಹೆಚ್ಚು ಹಣ ಗಳಿಸುವ ಆಸೆ; ಕ್ರೆಡಿಟ್ ಕಾರ್ಡ್ ಪಡೆಯುವ ಆತುರ; ಮೊಬೈಲ್ ಹ್ಯಾಕ್ ಮೂಲಕ

ಮೈಸೂರಿನ ಮೂವರಿಗೆ 1.20 ಕೋಟಿ ಆನ್‌ಲೈನ್ ದೋಖಾ

- ಮೋಸ ಹೋದ ನಿವೃತ್ತ ಅಧಿಕಾರಿ
- ಸೈಬರ್ ಅಪರಾಧಿಗಳಿಗೆ ನಿವೃತ್ತಿದಾರರೇ ಟಾರ್ಗೆಟ್
- ಹಣ ಕಳೆದುಕೊಳ್ಳುತ್ತಿರುವ ಜ್ಞಾನವಂತರು!
- ಅರಿವಿನ ಮದ್ದು ನೀಡಿದರೂ ಪಾಠ ಕಲಿಯದ ಜನ

ಮೈಸೂರು, ಮೇ9(ಬಿಎಲ್‌ಯು)– ಸ್ಟಾಕ್ ಮಾರ್ಕೆಟ್‌ನಲ್ಲಿ ಹೂಡಿಕೆ, ಕ್ರೆಡಿಟ್ ಕಾರ್ಡ್ ಪಡೆಯುವುದು ಹಾಗೂ ಮೊಬೈಲ್ ಹ್ಯಾಕ್ ನಂತಹ ಮೂರು ಪ್ರತ್ಯೇಕ ಸೈಬರ್ ಅಪರಾಧ ಪ್ರಕರಣಗಳಲ್ಲಿ ನಿವೃತ್ತ ಅಧಿಕಾರಿ ಸೇರಿದಂತೆ ಮೈಸೂರು ನಗರದ ಮೂವರು ಅಮಾಯಕರು ಸುಮಾರು 1.20 ಕೋಟಿ ರೂಪಾಯಿಗಳನ್ನು ಕಳೆದುಕೊಂಡಿದ್ದಾರೆ. ಈ ಸಂಬಂಧ ನಗರದ ಸೆನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರು ನಗರದ ವಿದ್ಯಾರಣ್ಯಪುರಂ ವಾಸಿ, ನಿವೃತ್ತ ಅಧಿಕಾರಿಯೊಬ್ಬರ ಮೊಬೈಲ್‌ಗೆ ಸ್ಟಾಕ್ ಮಾರ್ಕೆಟ್ ಥಿಂಕ್ ಟ್ಯಾಂಕ್ ಎಂಬ ವಾಟ್ಸಾಪ್ ಗ್ರೂಪ್‌ನಿಂದ ಸ್ಟಾಕ್ ಮಾರ್ಕೆಟ್‌ನಲ್ಲಿ ಹೂಡಿಕೆ ಮಾಡಿ ಹೆಚ್ಚು ಹಣ ಗಳಿಸುವ ಬಗ್ಗೆ ಮೆಸೇಜ್ ಬಂದಿತ್ತು. ಈ ಬಗ್ಗೆ ಅವರು ಐಐಎಫ್‌ಎಲ್ ಇನ್ವೆಸ್ಕೊ ಸ್ಟಾಕ್ ಮಾರ್ಕೆಟ್ ಕಂಪನಿ ಬಗ್ಗೆ ಗೂಗಲ್‌ನಲ್ಲಿ ಸರ್ಚ್ ಮಾಡಿ ಕಂಪನಿ ಅಸ್ತಿತ್ವದ ಬಗ್ಗೆ ಖಚಿತಪಡಿಸಿಕೊಂಡರು.

ತರುವಾಯ ಸ್ಟಾಕ್ ಮಾರ್ಕೆಟ್‌ನಲ್ಲಿ ಹೂಡಿಕೆ ಮಾಡುವ ಬಗ್ಗೆ ಮೆಸೇಜ್‌ಗಳು ಬರಲಾರಂಭಿಸಿತು. ಟೀನಾ ಮಲ್ಹೋತ್ರಾ ಎಂಬಾಕೆ ಹೂಡಿಕೆ ಮಾಡುವ ಬಗ್ಗೆ ಉತ್ತೇಜಿಸಿದರು. ತರುವಾಯ ಅವರ ವೈಯಕ್ತಿಕ ಮಾಹಿತಿ ಕೂಡ ಪಡೆದಳು. ನಂತರ ವಾಟ್ಸಾಪ್ ಗ್ರೂಪ್‌ನಲ್ಲಿ ಉಲ್ಲೇಖಿಸಿದ್ದ ಬ್ಯಾಂಕ್ ಖಾತೆಗೆ ವಿವಿಧ ಟ್ರಾನ್ಸಾಕ್ಷನ್‌ಗಳಲ್ಲಿ 1,10.04,600 ರೂಪಾಯಿಗಳನ್ನು ನಿವೃತ್ತ ಅಧಿಕಾರಿ ವರ್ಗಾಯಿಸಿದರು. ಬಳಿಕ ತಾವು ಹೂಡಿಕೆ ಮಾಡಿರುವ ಪೂರ್ತಿ ಹಣ ವಿತ್‌ಡ್ರಾ ಮಾಡಿಕೊಳ್ಳಲು ಯತ್ನಿಸಿದಾಗ ಬ್ರೋಕರೇಜ್ ಹಣ ಪಾವತಿ ಮಾಡುವಂತೆ ಸೂಚಿಸಿದರು.

ಇದರಿಂದ ತಾವು ಮೋಸ ಹೋಗಿರುವುದು ಖಚಿತವಾಗಿ ನಿವೃತ್ತ ಅಧಿಕಾರಿ ಮೊದಲು ಸೈಬರ್ ಹೆಲ್ಪ್‌ಲೈನ್ 1930ಗೆ ಕರೆ ಮಾಡಿ ದೂರು



ದಾಖಲಿಸಿದರು. ನಂತರ ಸೆನ್ ಪೊಲೀಸ್ ಠಾಣೆಗೆ ಲಿಖಿತ ದೂರು ಕೂಡ ನೀಡಿದ್ದಾರೆ.

ಮೊಬೈಲ್ ಹ್ಯಾಕ್: ಮೈಸೂರಿನ ಗೋಕುಲಂ 2ನೇ ಹಂತದ ವಾಸಿಯೊಬ್ಬರ ಮೊಬೈಲ್ ಹ್ಯಾಕ್ ಮಾಡಿರುವ ಸೈಬರ್ ಅಪರಾಧಿಗಳು ಏಳು ಟ್ರಾನ್ಸಾಕ್ಷನ್‌ಗಳ ಮೂಲಕ ಒಟ್ಟು 5,37,736 ರೂಪಾಯಿಗಳನ್ನು ತಮ್ಮ ಖಾತೆಗೆ ವರ್ಗಾಯಿಸಿಕೊಂಡಿದ್ದಾರೆ.

ಫೋನ್‌ಪೇ ಮೂಲಕ ಬ್ಯಾಲೆನ್ಸ್ ಚೆಕ್ ಮಾಡಿದಾಗ ಹಣ ವರ್ಗಾವಣೆ ಮಾಡಿಕೊಂಡು ಆನ್‌ಲೈನ್ ಫ್ರಾಡ್ ಮಾಡಿರುವುದು ಬೆಳಕಿಗೆ ಬಂದಿತು. ತರುವಾಯ ಅವರು ಮೈಸೂರು ನಗರದ ಸೆನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

ಕ್ರೆಡಿಟ್ ಕಾರ್ಡ್ ನೆಪದಲ್ಲಿ ವಂಚನೆ: ಮೈಸೂರಿನ ಶ್ರೀರಾಂಪುರದ ಎಲ್‌ಐಸಿ ಕಾಲೋನಿಯ ವಾಸಿಯೊಬ್ಬರ ವಾಟ್ಸಾಪ್‌ಗೆ ಐಐ ಕಾರ್ಡ್ ಎಂಬ ಡಿಪಿಯಿಂದ ಕರೆ ಬಂದಿದೆ. ಪಿಂಚಣಿದಾರರಿಗೆ ಕ್ರೆಡಿಟ್ ಕಾರ್ಡ್ ನೀಡುವುದಾಗಿ ವಾಟ್ಸಾಪ್‌ನಲ್ಲಿ ಕಳುಹಿಸಿರುವ ಎಪಿಕೆ (ಯೋನೋ ಆಪ್) ಮೇಲೆ ಕ್ಲಿಕ್ ಮಾಡುವಂತೆ ತಿಳಿಸಿದ್ದಾರೆ.

ಕ್ರೆಡಿಟ್ ಕಾರ್ಡ್ ಪಡೆಯುವ ಆಸೆಗೆ ಒಳಗಾದ ಅವರು ಎಪಿಕೆ ಮೇಲೆ ಕ್ಲಿಕ್ ಮಾಡಿದ್ದಾರೆ. ತರುವಾಯ ಅವರ ಮೊಬೈಲ್ ನಂಬರ್‌ಗೆ ಹಲವು ಓಟಿಪಿಗಳು ಬರಲಾರಂಭಿಸಿವೆ. ನಂತರ ಇವರ ಖಾತೆಯಿಂದ 5 ಲಕ್ಷ ರೂಪಾಯಿಗಳು ಅನಧಿಕೃತವಾದ ಬೇರೆ ಖಾತೆಗಳಿಗೆ ವರ್ಗಾವಣೆಯಾಗಿದೆ. ಈ ಸಂಬಂಧ ಇವರು ಮೈಸೂರು ನಗರದ ಸೆನ್ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಎರಡು ಸೈಬರ್ ಅಪರಾಧ ಪ್ರಕರಣಗಳಲ್ಲಿ ಚಾಲಾಕಿಗಳು ನಿವೃತ್ತಿ ಹೊಂದಿದವರನ್ನೆ ಟಾರ್ಗೆಟ್ ಮಾಡಿದ್ದಾರೆ. ಒಬ್ಬರು ಸ್ಟಾಕ್ ಮಾರ್ಕೆಟ್‌ನಿಂದ ಹೆಚ್ಚು ಹಣ ಗಳಿಸುವ ಆಸೆಗೆ ಮರುಳಾಗಿ 1.10 ಕೋಟಿ ಕಳೆದುಕೊಂಡರೆ, ಮತ್ತೊಬ್ಬರು ಕ್ರೆಡಿಟ್ ಕಾರ್ಡ್ ಪಡೆಯಲು 5 ಲಕ್ಷ ಕಳೆದುಕೊಂಡಿದ್ದಾರೆ. ಮತ್ತೊಬ್ಬರ ಮೊಬೈಲ್ ಹ್ಯಾಕ್‌ನಿಂದ 5.37 ಲಕ್ಷ ಬೇರೆ ಖಾತೆಗೆ ವರ್ಗಾವಣೆಯಾಗಿದೆ.

ಸೈಬರ್ ಅಪರಾಧ ಪ್ರಕರಣಗಳ ಬಗ್ಗೆ ಆಗಾಗ್ಗೆ ಪರಿಣಾಮಕಾರಿ ಅರಿವು ಮೂಡಿಸುತ್ತಿದ್ದರೂ ಕೆಲವರು ಇನ್ನೂ ಕೂಡ ವಂಚನೆಗೊಳಗಾಗುತ್ತಿದ್ದಾರೆ. ಅನಕ್ಷರಸ್ಥರಿಗಿಂತ ಓದಿನ ಜ್ಞಾನ ಹೊಂದಿರುವವರೇ ಸೈಬರ್ ವಂಚನೆಯಲ್ಲಿ ಹಣ ಕಳೆದುಕೊಳ್ಳುತ್ತಿದ್ದಾರೆ.

ನಾಳೆ ಜೀವನೋತ್ಸಾಹ ಶಿಬಿರ ಸಮಾರೋಪ

ಮೈಸೂರು: ಸುತ್ತೂರು ಶ್ರೀಮಠ, ಜೆಎಸ್‌ಎಸ್ ಮಹಾವಿದ್ಯಾಪೀಠ ಹಾಗೂ ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿಗಳ ಸಂಯುಕ್ತಾಶ್ರಯದಲ್ಲಿ ಊಟಿಯಲ್ಲಿ ತೀಟ ಕಲ್‌ನ ಜೆಎಸ್‌ಎಸ್ ಪಬ್ಲಿಕ್ ಶಾಲೆಯ ಸಭಾಂಗಣದಲ್ಲಿ ಮೇ 5ರಿಂದ ನಡೆಯುತ್ತಿರುವ ಜೀವನೋತ್ಸಾಹ ಶಿಬಿರದ ಸಮಾರೋಪವನ್ನು ಮೇ 11ರಂದು ಬೆಳಗ್ಗೆ 10 ಗಂಟೆಗೆ ಏರ್ಪಡಿಸಲಾಗಿದೆ. ಇದೇ ಸಂದರ್ಭದಲ್ಲಿ ಕೃತಿ ಬಿಡುಗಡೆ ಹಾಗೂ ಅಭಿನಂದನಾ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಕಾರ್ಯಕ್ರಮವು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ನಡೆಯಲಿದೆ.

ಬೆಂಗಳೂರು ಸರ್ಕಾರಿ ವೈಮಾನಿಕ ತರಬೇತಿ ಶಾಲೆಯ ನಿರ್ದೇಶಕ ಹೆಚ್. ಬಸವರಾಜೇಂದ್ರ ಅಧ್ಯಕ್ಷತೆ ವಹಿಸಲಿದ್ದು, ಹಿರಿಯ ಪತ್ರಕರ್ತ ರವೀಂದ್ರ ಭಟ್ ಸಮಾರೋಪ ಭಾಷಣ. ಇದೇ ಸಂದರ್ಭದಲ್ಲಿ ಶಾಸಕ ಎಂ.ಭೋಜರಾಜನ್ ಅವರನ್ನು ಅಭಿನಂದಿಸಲಾಗುವುದು. ಚೆನ್ನೈನ ಶ್ರೀ ಬಸವೇಶ್ವರ ಸೋಶಿಯಲ್ ಟ್ರಸ್ಟ್‌ನ ಅಧ್ಯಕ್ಷ ಎಸ್. ಪ್ರಕಾಶಂ, ಶರಣರಿನ್ ನ್ಯೂಟ್ರಿಯೊರು ವಸನಂಗಳ್ ಕೃತಿಯನ್ನು ಬಿಡುಗಡೆಗೊಳಿಸಲಿದ್ದಾರೆ. ಮಧುರೈ ಕಾಮರಾಜ್ ವಿವಿ ಕನ್ನಡ ವಿಭಾಗದ ಮುಖ್ಯಸ್ಥ ಡಾ. ಎಂ.ಎನ್. ಮಹೇಶ್ ಕೃತಿಯನ್ನು ಪರಿಚಯಿಸಲಿದ್ದಾರೆ.

ಬುದ್ಧ ಪ್ರಜ್ಞೆ ಅಭಿಯಾನ ಜಾಗೃತಿಗೆ ಚಾಲನೆ...



ಮೈಸೂರು ತಾಲೂಕು ಜಯಪುರ ಹೋಬಳಿಯ ದಕ್ಷಿಣ ಬುದ್ಧಗಯ ಹಾರೋಹಳ್ಳಿ ಗ್ರಾಮದಲ್ಲಿ ಬುದ್ಧ ಪ್ರಜ್ಞೆ ಅಭಿಯಾನ ಜಾಗೃತಿ ಜಾಥಾ ಕಾರ್ಯಕ್ರಮಕ್ಕೆ ಅರಳಿಗಿಡ ನೆಟ್ಟು ನೀರೆರೆಯುವ ಮೂಲಕ ಬಂತೆಗಳಾದ 'ಸುಗತಪಾಲ ಬಂತೇಜಿ ಮತ್ತು ಮಾತೆ ಗೌತಮಿ' ಚಾಲನೆ ನೀಡಿದರು. ಈ ವೇಳೆ ಬೆಟ್ಟಯ್ಯ ಕೋಟೆ, ಹರಿಹರ ಆನಂದಸ್ವಾಮಿ, ಮಲ್ಲುಂಡಿ ಮಹದೇವಸ್ವಾಮಿ, ದಕ್ಷಿಣ ಬುದ್ಧಗಯ ಸಂಸ್ಥಾಪಕರಾದ ಹೆಚ್.ಆರ್. ಸುರೇಶ್‌ಕುಮಾರ್, ನಟರಾಜ್, ಚೆಲುವರಾಜ್, ಪ್ರಕಾಶ್, ಬೀರಪ್ಪ ಹಾಜರಿದ್ದರು.

ಸಮಾಜಮುಖಿ ವೈದ್ಯ ಡಾ.ಯೋಗಣ್ಣರ ವಿಧಾನಪರಿಷತ್ತಿಗೆ ನಾಮಕರಣ ಮಾಡಲಿ

ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್ ಆಗ್ರಹ

ಮೈಸೂರು, ಮೇ 9– ಬಹುಮುಖ ಪ್ರತಿಭೆಯುಳ್ಳ, ಪ್ರತಿಷ್ಠಿತ ಹೃದ್ರೋಗ ತಜ್ಞರಾಗಿ, ವೈದ್ಯ ಸಾಹಿತಿಯಾಗಿ, ಪತ್ರಕರ್ತರಾಗಿ, ಕೃಷಿಕರಾಗಿ, ಸಮಾಜಸೇವಕರಾಗಿ, ನ್ಯಾಯವಾದಿಗಳಾಗಿ, ಅಲ್ಪಾವಧಿಯ ರಾಜಕಾರಣಿಯಾಗಿರುವ ಡಾ. ಎಸ್.ಪಿ. ಯೋಗಣ್ಣ ಅವರನ್ನು ವಿಧಾನಪರಿಷತ್ತಿಗೆ ನಾಮಕರಣ ಮಾಡಬೇಕೆಂದು ಮೈಸೂರಿನ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಸರ್ಕಾರವನ್ನು ಆಗ್ರಹಿಸಿದರು.

ಅವರು ಸುಯೋಗ್ ಆಸ್ಪತ್ರೆ ಮತ್ತು ಸುಯೋಗ್ ವೈದ್ಯಕೀಯ ಶಿಕ್ಷಣ ಸಂಸ್ಥೆಗಳ ಕುಟುಂಬದ ಸಿಬ್ಬಂದಿ ಮೇ 8ರ ಶುಕ್ರವಾರ ಬೆಳಗ್ಗೆ ಏರ್ಪಡಿಸಿದ್ದ ಡಾ. ಯೋಗಣ್ಣ ಅವರ 72ನೇ ವರ್ಷದ ಜನ್ಮದಿನೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದರು.

ವೈದ್ಯ ಸಾಹಿತಿಯಾಗಿ ಇವರು ಆಧ್ಯಾತ್ಮಿಕ ಆರೋಗ್ಯ ದರ್ಶನ ಎಂಬ ಕೃತಿ ರಚಿಸಿ ಅದಕ್ಕೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರಕಿರುವುದು ಇವರ ಸೃಜನಶೀಲ ಬರವಣಿಗೆಗೆ ಸಾಕ್ಷಿಯಾಗಿದೆ ಎಂದರು.

ಸ್ವಗ್ರಾಮ ಸಾಲಿಗ್ರಾಮದ ಒಡನಾಡಿಗಳಾದ ಸುರೇಶ್ ಕುಮಾರ್ ಜೈನ್ ಹಾಗೂ ನಿವೃತ್ತ ಇಂಜಿನಿಯರ್ ತಮ್ಮಯ್ಯ ಭಾಗವಹಿಸಿ ಮಾತನಾಡಿ, ಡಾ.ಯೋಗಣ್ಣನವರ ಪ್ರೌಢ ಮತ್ತು ಪ್ರಾಥಮಿಕ ಶಿಕ್ಷಣದ ಒಡನಾಟವನ್ನು ಸ್ಮರಿಸಿ ಬಾಲ್ಯದಿಂದಲೂ ಪ್ರತಿಭಾನ್ವಿತ ವಿದ್ಯಾರ್ಥಿಯಾಗಿದ್ದರು ಎಂದು ಸ್ಮರಿಸಿದರು. ಈ ಸಂದರ್ಭ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ಡಾ. ಯೋಗಣ್ಣ ಅವರನ್ನು ಸನ್ಮಾನಿಸಿ, ಗೌರವಿಸಲಾಯಿತು.

ಸನ್ಮಾನ ಸ್ವೀಕರಿಸಿ ಮಾತನಾಡಿದ ವೈದ್ಯ ಸಾಹಿತಿ ಡಾ. ಯೋಗಣ್ಣ, ನಿಸ್ವಾರ್ಥ ಸೇವೆಯೇ ಮನುಷ್ಯನಿಗೆ ನಿಜವಾದ ಆತ್ಮತೃಪ್ತಿ. ಸೇವೆ ಮಾಡಬೇಕಾದರೆ ಯಾವುದೇ ರೀತಿಯ ಮುಜುಗರ ಇಟ್ಟುಕೊಳ್ಳದೆ ಮನಸಾರೆ ಮಾಡಿದಾಗ ಸಂತೋಷದೊಂದಿಗೆ ನೆಮ್ಮದಿಯೂ ಪ್ರಾಪ್ತವಾಗುತ್ತದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಪತ್ರಕರ್ತ ನಾಗರಾಜು, ಕಾಂಗ್ರೆಸ್ ಮುಖಂಡರಾದ ವೆಂಕಟಸುಬ್ಬಯ್ಯ, ಕನ್ನಡ ಚಳವಳಿಗಾರ ಶಿವಶಂಕರ್, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷ ಎನ್. ಅನಂತ, ಆಸ್ಪತ್ರೆಯ ಸಿಬ್ಬಂದಿ ವರ್ಗ ಮತ್ತು ವೈದ್ಯರು ಭಾಗವಹಿಸಿದ್ದರು.



ಜನ್ಮದಿನೋತ್ಸವ ಅಂಗವಾಗಿ ಡಾ. ಯೋಗಣ್ಣ ದಂಪತಿಯನ್ನು ಅಭಿನಂದಿಸಲಾಯಿತು.

ವರ್ಷಾಂತ್ಯಕ್ಕೆ ಗ್ರಾಪಂ ಚುನಾವಣೆ

ಪಂಚಾಯತ್‌ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಘೋಷಣೆ

ಕಲಬುರಗಿ: ಈ ವರ್ಷದ ಡಿಸೆಂಬರ್ ಅಂತ್ಯದೊಳಗೆ ರಾಜ್ಯದಲ್ಲಿ ಗ್ರಾಮ ಪಂಚಾಯಿತಿ ಚುನಾವಣೆ ನಡೆಸಲಾಗುವುದು ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಪ್ರಿಯಾಂಕ್ ಖರ್ಗೆ, ಗ್ರಾಮ ಪಂಚಾಯಿತಿ ಗಡಿ ಗುರುತಿಸುವಿಕೆಗೆ ಆಕ್ಷೇಪಣೆ ಸಲ್ಲಿಸಲು ಕೊನೆಯ ದಿನ (ಮೇ 8) ಮುಗಿದಿದ್ದು, ಶೀಘ್ರದಲ್ಲೇ ಚುನಾವಣೆ ನಡೆಯಲಿದೆ. ಬಳಿಕ ತಾಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿ ಚುನಾವಣೆಗಳು ಸಹ ನಡೆಯಲಿವೆ ಎಂದರು.





ಪ್ರಿಯಾಂಕ್ ಖರ್ಗೆ

ಹೈಕಮಾಂಡ್ ನಿರ್ಧಾರ: ಸಚಿವ ಸಂಪುಟ ವಿಸ್ತರಣೆ ಕುರಿತು ಮಾತನಾಡಿದ ಪ್ರಿಯಾಂಕ್ ಖರ್ಗೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಪಕ್ಷದ ಹೈಕಮಾಂಡ್ ಸೂಕ್ತ ಸಮಯದಲ್ಲಿ ನಿರ್ಧರಿಸುತ್ತಾರೆ ಎಂದು ಹೇಳಿದರು.

ಟಿಎನ್‌ಎನ್ ಆದರ್ಶ ವಿದ್ಯಾರ್ಥಿನಿಲಯಕ್ಕೆ ಅರ್ಜಿ ಆಹ್ವಾನ

ಮೈಸೂರು, ಮೇ 9–ಮೈಸೂರಿನ ನರಸಿಂಹರಾಜ ಮೊಹಲ್ಲಾದಲ್ಲಿರುವ ಟಿಎನ್‌ಎನ್ ಆದರ್ಶ ವಿದ್ಯಾರ್ಥಿನಿಲಯಕ್ಕೆ 2026–27ನೇ ಸಾಲಿಗೆ 5ನೇ ತರಗತಿಯಿಂದ 10ನೇ ತರಗತಿವರೆಗೆ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಊಟ, ತಿಂಡಿ ಮತ್ತು ವಸತಿ ಮೂಲ ಸೌಕರ್ಯಗಳು ಉಚಿತವಾಗಿವೆ.

ಎಲ್ಲಾ ಜಾತಿಯ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಮೊದಲ ಆದ್ಯತೆ ನೀಡಲಾಗುವುದು. ನಿಗದಿತ ಅರ್ಜಿ ಫಾರಂಗಳನ್ನು ಮೇ 11ರಿಂದ ನಿಲಯದ ಆಡಳಿತ ಕಚೇರಿಯಲ್ಲಿ ವಿತರಿಸಲಾಗುವುದು. ಆಸಕ್ತಿಯುಳ್ಳ ವಿದ್ಯಾರ್ಥಿಗಳು ಜಾತಿ ಆದಾಯ ಪ್ರಮಾಣ ಪತ್ರ, ವರ್ಗಾವಣೆ ಪತ್ರ, 4 ಭಾವಚಿತ್ರ, ಆಧಾರ್ ಕಾರ್ಡ್, ರೇಷನ್ ಕಾರ್ಡ್, ತಂದೆ ಮತ್ತು ತಾಯಿ ಆಧಾರ್ ಕಾರ್ಡ್, ಬ್ಯಾಂಕ್ ಪಾಸ್ ಪುಸ್ತಕ ಮುಂತಾದ ಸೂಕ್ತ ದಾಖಲಾತಿಗಳೊಡನೆ ಅರ್ಜಿ ಸಲ್ಲಿಸುವಂತೆ ನಿಲಯದ ಕಾರ್ಯದರ್ಶಿ ಎಂ.ಪಾಟೀಲ್ ತಿಳಿಸಿದ್ದಾರೆ.

ಗಾಂಜಾ ಸೇವನೆ ಪ್ರಕರಣದಲ್ಲಿ ಸಿಲುಕಿದ್ದ ಯುವಕ ಆತ್ಮಹತ್ಯೆ

ಮೈಸೂರು, ಮೇ 9(ಪಿಎಂ)– ಗಾಂಜಾ ಸೇವನೆ ಪ್ರಕರಣದಲ್ಲಿ ಸಿಲುಕಿದ್ದ ಯುವಕನೊಬ್ಬ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ರಾಮಕೃಷ್ಣನಗರದಲ್ಲಿ ಶನಿವಾರ ಸಂಜೆ ಬೆಳಕಿಗೆ ಬಂದಿದೆ.

ಇಲ್ಲಿನ 4ನೇ ಮೇನ್‌ನ ನಿವಾಸಿ ಎಂ.ಮಧು (22) ಆತ್ಮಹತ್ಯೆಗೆ ಶರಣಾದ ಯುವಕ. ಈತ ವೃತ್ತಿಯಲ್ಲಿ ಕಾರ್ಪೆಂಟರ್ ಆಗಿದ್ದು, ಈತನ ವಿರುದ್ಧ ಕುವೆಂಪುನಗರ ಪೊಲೀಸ್ ಠಾಣೆಯಲ್ಲಿ ಮೇ 6ರಂದು ಗಾಂಜಾ ಸೇವನೆ ಪ್ರಕರಣ ದಾಖಲಾಗಿತ್ತು. ಈತ ಶನಿವಾರ ಸಂಜೆ ಮನೆಯ ಕೊಠಡಿಯಲ್ಲಿ ನೇಣು ಹಾಕಿಕೊಂಡಿರುವುದು ಕಂಡುಬಂದಿದ್ದು, ಕೂಡಲೇ ಆಸ್ಪತ್ರೆಗೆ ಕರೆದೊಯ್ದರು ಆತ ಮೃತಪಟ್ಟಿದ್ದಾನೆ.

ಗಾಂಜಾ ಸೇವನೆ ಹಿನ್ನೆಲೆಯಲ್ಲಿ ಆತನ ವಿರುದ್ಧ ಪ್ರಕರಣ ದಾಖಲಿಸಿದ್ದೆವು. ಯಾವ ಕಾರಣಕ್ಕೆ ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂದು ತಿಳಿದುಬಂದಿಲ್ಲ. ಅವರ ಮನೆಯವರು ದೂರು ನೀಡಿದ್ದು, ಅಸಹಜ ಸಾವು ಪ್ರಕರಣ ದಾಖಲಿಸಿಕೊಂಡಿದ್ದೇವೆ ಎಂದು ಕುವೆಂಪುನಗರ ಪೊಲೀಸರು ತಿಳಿಸಿದ್ದಾರೆ.

ನೇಣು ಹಾಕಿಕೊಂಡಿದ್ದನ್ನು ಕಂಡು ಕೆಳಗಿಳಿಸಿ ಆಸ್ಪತ್ರೆಗೆ ಕರೆದುಕೊಂಡು ಹೋದೆವು. ಆಸ್ಪತ್ರೆಯಲ್ಲಿ ಆತ ಮೃತಪಟ್ಟಿರುವುದಾಗಿ ವೈದ್ಯರು ದೃಢಪಡಿಸಿದರು. ವೈದ್ಯಕೀಯ ಪರೀಕ್ಷೆ ನಡೆಸಿ ಮುಂದಿನ ಕ್ರಮ ಕೈಗೊಳ್ಳಬೇಕೆಂದು ಮೃತನ ಕುಟುಂಬಸ್ಥರ ದೂರಿನನ್ವಯ ಅಸಹಜ ಸಾವು ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಆತ್ಮಹತ್ಯೆಗೆ ಸದ್ಯ ಕಾರಣ ತಿಳಿದುಬಂದಿಲ್ಲ. ಯಾವುದೇ ಡೆತ್ ನೋಟ್ ಸಹ ಸದ್ಯ ಸಿಕ್ಕಿಲ್ಲ. ಮೈಸೂರು ವೈದ್ಯಕೀಯ ಕಾಲೇಜು ಶವಾಗಾರದಲ್ಲಿ ಮೃತದೇಹ ಇರಿಸಿದ್ದು, ನಾಳೆ ಮರಣೋತ್ತರ ಪರೀಕ್ಷೆ ಬಳಿಕ ಮೃತದೇಹವನ್ನು ಕುಟುಂಬಸ್ಥರಿಗೆ ಒಪ್ಪಿಸಲಾಗುವುದು ಎಂದು ಕುವೆಂಪುನಗರ ಪೊಲೀಸರು ತಿಳಿಸಿದ್ದಾರೆ.

ಗಾಂಜಾ ಸೇವನೆ ಪ್ರಕರಣ: ಮೇ 6ರ ರಾತ್ರಿ 9 ಗಂಟೆಯಲ್ಲಿ ರಾಮಕೃಷ್ಣನಗರ ಕೆ ಬ್ಲಾಕ್‌ನ ಆಲದಮರದ ಬಳಿ ಎಂ.ಮಧು ಗಾಂಜಾ ಸೇವನೆ ಮಾಡಿ ಪೊಲೀಸರಿಗೆ ಸಿಕ್ಕಿ ಬಿದ್ದಿದ್ದ ಸಂಬಂಧ ಕುವೆಂಪುನಗರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು. ಗಾಂಜಾವನ್ನು ಸಿಗರೇಟಿನಲ್ಲಿ ಹಾಕಿ ಸೇವನೆ ಮಾಡಿರುವುದಾಗಿ ಆತನೇ ಒಪ್ಪಿಕೊಂಡಿದ್ದ. ವೈದ್ಯಕೀಯ ತಪಾಸಣೆಗೆ ಒಳಪಡಿಸಿದಾಗ ಗಾಂಜಾ ಸೇವನೆ ಮಾಡಿರುವುದು ದೃಢಪಟ್ಟಿತ್ತು ಎಂದು ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

ಸಂಗೀತ ವಿದ್ವಾನ್ ಡಾ.ರಾ.ಸತ್ಯನಾರಾಯಣರಿಂದ ಭಾರತೀಯ ಸಂಗೀತ ಶಾಸ್ತ್ರಕ್ಕೆ ಅಪೂರ್ವ ಕೊಡುಗೆ

ವಾರಣಾಸಿ ಐಜಿಎನ್‌ಸಿಎ ನಿವೃತ್ತ ನಿರ್ದೇಶಕ ಪ್ರೊ.ವಿಜಯ್ ಶಂಕರ್ ಶುಕ್ಲಾ

ಮೈಸೂರು,ಮೇ 9(ಪಿಎಂ)– ಭಾರತೀಯ ಸಂಗೀತ ಸಂಸ್ಕೃತಿ ಅನನ್ಯ. ಅಂತಹ ಸಂಗೀತ ಶಾಸ್ತ್ರಕ್ಕೆ ಪದ್ಮಶ್ರೀ ಪುರಸ್ಕೃತ ಡಾ.ರಾ. ಸತ್ಯನಾರಾಯಣ ಅಪೂರ್ವ ಕೊಡುಗೆ ನೀಡಿದ್ದಾರೆ ಎಂದು ವಾರಣಾಸಿ ಇಂದಿರಾ ಗಾಂಧಿ ರಾಷ್ಟ್ರೀಯ ಕಲಾಕೇಂದ್ರದ (ಐಜಿಎನ್‌ಸಿಎ) ನಿವೃತ್ತ ನಿರ್ದೇಶಕ ಪ್ರೊ.ವಿಜಯ್ ಶಂಕರ್ ಶುಕ್ಲಾ ಹೇಳಿದರು.

ಮೈಸೂರಿನ ಮಾನಸ ಗಂಗೋತ್ರಿಯ ನಾಲ್ವಡಿ ಕೃಷ್ಣರಾಜ ಒಡೆಯರ್ (ಸೆನೆಟ್) ಭವನದಲ್ಲಿ ಬ್ರಹ್ಮವಿದ್ಯಾ ಸಂಸ್ಥೆ ವತಿಯಿಂದ ಶನಿವಾರ ಹಮ್ಮಿಕೊಂಡಿದ್ದ ಮಹಾಮಹೋಪಾಧ್ಯಾಯ, ಪದ್ಮಶ್ರೀ ಪುರಸ್ಕೃತ ಡಾ.ರಾ. ಸತ್ಯನಾರಾಯಣರ ಜನ್ಮಶತಮಾನೋತ್ಸವ, ಭಾರತೀಯ ಸಂಗೀತಶಾಸ್ತ್ರ ದಿನಾಚರಣೆ, ಶತಮಾನ ರಾಸ ಅಬ್ದಿಪೂರ್ವದ ಉದ್ಘಾಟನೆ ಹಾಗೂ ಗ್ರಂಥ ಬಿಡುಗಡೆ ಸಮಾರಂಭದಲ್ಲಿ ಅವರು ಮಾತನಾಡಿದರು.

18 ಪುರಾಣಗಳ ತುಲನಾತ್ಮಕ ಅಧ್ಯಯನ ಪ್ರಸ್ತುತಪಡಿಸಿದ ದೇಶದ ಏಕೈಕ ವಿದ್ವಾಂಸ ಡಾ.ರಾ.ಸತ್ಯನಾರಾಯಣ. ವಿಜಯನಗರ ಸಾಮ್ರಾಜ್ಯದ ನಂತರ ಶ್ರೀವಿದ್ಯಾ ಸಂಗೀತ ಪರಂಪರೆ ಉಳಿವಿನ ಕೊಂಡಿ ಗುರುವರ್ಯ ರಾ.ಸತ್ಯನಾರಾಯಣ ಆಗಿದ್ದಾರೆ. ಅದನ್ನು ಉಳಿಸಿ, ಮುಂದಿನ ಪೀಳಿಗೆಗೆ ರವಾನಿಸುವುದು ಅವರ ಶಿಷ್ಯವೃಂದವಾದ ನಮ್ಮೆಲ್ಲರ ಜವಾಬ್ದಾರಿಯಾಗಿದೆ ಎಂದು ಹೇಳಿದರು.

ಸಂಸ್ಕೃತ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಅಹಲ್ಯಾ ಶರ್ಮಾ ಸಮಾರಂಭ ಉದ್ಘಾಟಿಸಿದರು. ಅಲ್ಲದೆ, ವಿದ್ವಾನ್ ರಾ.ಸತ್ಯನಾರಾಯಣ ಅವರ ಹಾಗೂ ಡಾ.ರಾ.ಸ. ನಂದಕುಮಾರ್ ಸಂಗ್ರಹದ 'ಶ್ರೀವಿದ್ಯಾ ಷೋಡಶಿಕಾ ; ತ್ರಯೀ ಚಿತ್ಕಲಾ', ಪಿ.ವಿ.ಕಾಣೆ ಅವರ 'ಹಿಸ್ಟರಿ ಆಫ್ ಧರ್ಮಶಾಸ್ತ್ರ' ಕೃತಿ ಅನುವಾದಗಳಾದ 'ಹಿಂದೂ ಧರ್ಮಶಾಸ್ತ್ರಗಳಲ್ಲಿ ವಿವಾಹ', 'ಹಿಂದೂ ಧರ್ಮ ಶಾಸ್ತ್ರಗಳಲ್ಲಿ ಶ್ರಾದ್ಧ', ರಾ.ಸ.ನಂದಕುಮಾರ ಅವರ 'ಕರ್ನಾಟಕ ಸಂಗೀತದ ಇತಿಹಾಸದಲ್ಲಿ ಶ್ರೀಪಾದರಾಜರು' ಕೃತಿಗಳನ್ನು ಬಿಡುಗಡೆ ಮಾಡಿದರು.

ಧಾರವಾಡದ ವಿದ್ವಾನ್ ರಾಜೇಶ್ವರಶಾಸ್ತ್ರಿ ಜೋಶಿ ಅವರಿಗೆ 'ಶ್ರೀವಿದ್ಯಾಶಾಸ್ತ್ರ ಸೂರಿ' ಪ್ರಶಸ್ತಿ, ಡಾ.ವಸುಂಧರಾ ದೊರೆಸ್ವಾಮಿ, ವಿದ್ವಾನ್ ಆನೂರು ಅನಂತಕೃಷ್ಣ ಶರ್ಮ ಹಾಗೂ ವರ್ಚುವಲ್ ಮೂಲಕ ಇಟಲಿಯ ಗ್ವಿಡೊ ಝೂಂಡರಿಗೂ ಅವರಿಗೆ 'ರಾಸ ಸಂಸ್ಮರಣ ಪ್ರಶಸ್ತಿಗಳನ್ನು ವೀಣಾ ವಿದ್ವಾನ್ ರಾ.ವಿಶ್ವೇಶ್ವರನ್ ಪ್ರದಾನ ಮಾಡಿದರು.

ಇದಕ್ಕೂ ಮುನ್ನ ರಾಸ ಸಂಗೀತ ಗೋಷ್ಠಿ ಗಾಯನವನ್ನು ವಿದ್ವಾನ್ ಸುಮುಖ ಶ್ರೀವತ್ಸ, ಅಂಬಿಕಾ ಶಾಸ್ತ್ರಿ ನಡೆಸಿಕೊಟ್ಟರು. ವಿದ್ವಾನ್ ಮಧುಕರಂ ಶ್ರೀರಾಮ ಅಯ್ಯಂಗಾರ್ (ವೀಣೆ), ವಿದುಷಿ ಪೃಥ್ವಿ ಭಾಸ್ಕರ್ (ವಯಲಿನ್), ವಿದ್ವಾನ್ ಜಿ.ಎಸ್.ನಾಗರಾಜ್ (ಮೃದಂಗ), ವಿದ್ವಾನ್ ಶರತ್ ಕೌಶಿಕ್ (ಘಟ), ವಿದ್ವಾನ್ ವಿ.ಎಸ್. ರಮೇಶ್ (ಮೋರ್ಚಿಂಗ್) ಪಕ್ಕವಾದ್ಯದಲ್ಲಿ ಸಹಕಾರ ನೀಡಿದರು.

'ಗಮಕ ಕಲೆಯಲ್ಲಿ ಜೀವನಕಲೆ' ಕುರಿತು ಜ್ಯೋತಿಶಂಕರ್, 'ಆರೋಗ್ಯ ದಿನಚರಿ' ಕುರಿತು ಪ್ರಶಾಂತ್ ಭಟ್ ಮಾತನಾಡಿದರು. ಈ ವೇಳೆ ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್‌ನ ಸಿಇಓ ಸವಿತಾ ಸುಲುಗೋಡು, ಮಾಜಿ ಎಂಎಲ್‌ಸಿ ಗೋ.ಮಧುಸೂದನ, ಅರಮನೆ ಮಂಡಳಿ ಉಪನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ ಮತ್ತಿತರರು ಹಾಜರಿದ್ದರು.



ಮೈಸೂರಿನ ಮಾನಸ ಗಂಗೋತ್ರಿಯ ಸೆನೆಟ್ ಭವನದಲ್ಲಿ ಶನಿವಾರ ಕಲಾ ಸಾಧಕರಿಗೆ ವಿವಿಧ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಯಿತು.

ನಾಳೆಯಿಂದ ಹೊಸ ಅಬಕಾರಿ ನೀತಿ ಜಾರಿ

ಕಡಿಮೆ ದರದ ಮದ್ಯ ಸೇವಿಸುವ ಜನಸಾಮಾನ್ಯರಿಗೆ ಸಖತ್ ಬರೆ!

ಬೆಂಗಳೂರು, ಮೇ 9– ರಾಜ್ಯ ಸರ್ಕಾರವು ಮದ್ಯದ ಮೇಲಿನ ತೆರಿಗೆ ವ್ಯವಸ್ಥೆಯಲ್ಲಿ ಮಹತ್ವದ ಬದಲಾವಣೆ ತಂದು, ಆಲ್ಕೋ ಹಾಲ್ ಇನ್ ಬೇವರೇಜ್ (AIB) ಆಧಾರಿತ ಹೊಸ ಅಬಕಾರಿ ನೀತಿಯನ್ನು ಜಾರಿಗೆ ತರಲು ಅಧಿಸೂಚನೆ ಹೊರಡಿಸಿದೆ. ಈ ಹೊಸ ನೀತಿ ಮೇ 11ರಿಂದ ರಾಜ್ಯಾದ್ಯಂತ ಜಾರಿಗೆ ಬರಲಿದೆ.



ಈ ಮೂಲಕ ಕಳೆದ 6 ದಶಕಗಳಿಂದ ಜಾರಿಯಲ್ಲಿದ್ದ ಬಲ್ಕ್ ಲೀಟರ್ ಆಧಾರಿತ ತೆರಿಗೆ ವ್ಯವಸ್ಥೆಗೆ ತೆರೆ ಬೀಳಲಿದೆ. ಕರ್ನಾಟಕವು ದೇಶದಲ್ಲೇ ಮೊದಲ ಬಾರಿಗೆ AIB ಆಧಾರಿತ ತೆರಿಗೆ ನೀತಿಯನ್ನು ಅನುಷ್ಠಾನಗೊಳಿಸುತ್ತಿರುವ ರಾಜ್ಯವಾಗಿದೆ. ಸರ್ಕಾರವು ಏಪ್ರಿಲ್ 18ರಂದು ಕರಡು ಅಧಿಸೂಚನೆ ಹೊರಡಿಸಿ ಸಾರ್ವಜನಿಕರಿಂದ ಆಕ್ಷೇಪಣೆ ಹಾಗೂ ಸಲಹೆಗಳನ್ನು ಆಹ್ವಾನಿಸಿತ್ತು. ಬಂದ ಅಭಿಪ್ರಾಯಗಳನ್ನು ಪರಿಗಣಿಸಿದ ಬಳಿಕ ಕರ್ನಾಟಕ ಅಬಕಾರಿ (ಅಬಕಾರಿ ಸುಂಕ ಮತ್ತು ಶುಲ್ಕ) (2ನೇ ತಿದ್ದುಪಡಿ) ನಿಯಮಗಳು, 2026 ಅನ್ನು ಅಂತಿಮಗೊಳಿಸಲಾಗಿದೆ. ಹೊಸ ನೀತಿಯ ಪ್ರಕಾರ, ಬ್ರಾಂಡಿ, ವಿಸ್ಕಿ, ರಮ್, ಜಿನ್, ಬಿಯರ್, ವೈನ್ ಸೇರಿದಂತೆ ವಿವಿಧ ಮದ್ಯಗಳಲ್ಲಿ ಇರುವ ಆಲ್ಕೋಹಾಲ್ ಪ್ರಮಾಣ ಆಧರಿಸಿ ತೆರಿಗೆ ವಿಧಿಸಲಾಗುತ್ತದೆ. ಇದರಿಂದ ಈಗಿರುವ 16 ಅಬಕಾರಿ ಸ್ಲ್ಯಾಬ್‌ಗಳನ್ನು ಕಡಿತಗೊಳಿಸಿ ಕೇವಲ 8 ಸ್ಲ್ಯಾಬ್‌ಗಳಿಗೆ ಸೀಮಿತಗೊಳಿಸಲಾಗಿದೆ.

ಅಬಕಾರಿ ಇಲಾಖೆಯ ಆದಾಯದಲ್ಲಿ ಪ್ರಮುಖ ಪಾತ್ರವಹಿಸುವ ಕಡಿಮೆ ದರದ ಮದ್ಯ ವಿಭಾಗದ ಮೇಲೆ ಈ ನೀತಿಯ ಪರಿಣಾಮ ಹೆಚ್ಚು ಕಾಣಿಸಿಕೊಳ್ಳಲಿದೆ ಎಂದು ಉದ್ಯಮ ಮೂಲಗಳು ತಿಳಿಸಿವೆ. ವಿಶೇಷವಾಗಿ ಹೆಚ್ಚು ಮಾರಾಟವಾಗುವ 180 ಮಿಲಿ ಟೆಟ್ರಾ ಪ್ಯಾಕ್‌ಗಳ ವಿಸ್ಕಿ, ರಮ್, ಬ್ರಾಂಡಿ, ಜಿನ್ ಹಾಗೂ ವೋಡ್ಕಾ ಬೆಲೆ ಕನಿಷ್ಠ 20% ಹೆಚ್ಚಾಗುವ ಸಾಧ್ಯತೆ ಇದೆ ಎನ್ನಲಾಗಿದೆ.

ಇದೇ ವೇಳೆ ಪ್ರೀಮಿಯಂ ಮದ್ಯ ಬ್ರ್ಯಾಂಡ್‌ಗಳ ಬೆಲೆ ಶೇ.16ರಿಂದ ಶೇ.20ವರೆಗೆ ಇಳಿಕೆಯಾಗುವ ಸಾಧ್ಯತೆ ಇದೆ. ಇದರಿಂದ ಬಹುರಾಷ್ಟ್ರೀಯ ಪ್ರೀಮಿಯಂ ಬ್ರ್ಯಾಂಡ್‌ಗಳಿಗೆ ಲಾಭವಾಗಬಹುದು, ಆದರೆ, ಸ್ಥಳೀಯ ಡಿಸ್ಟಿಲರಿಗಳು ಮತ್ತು ಪ್ರಾದೇಶಿಕ ಉತ್ಪಾದಕರಿಗೆ ಹಿನ್ನಡೆ ಉಂಟಾಗಬಹುದು ಎಂದು ಉದ್ಯಮ ವಲಯ ಆತಂಕ ವ್ಯಕ್ತಪಡಿಸಿದೆ. ಕಡಿಮೆ ಬೆಲೆಯ ಭಾರತೀಯ ಮದ್ಯ ಉತ್ಪಾದಕರಿಗೆ ಈ ಹೊಸ ವ್ಯವಸ್ಥೆ ಹೊರೆ ಆಗಬಹುದು. ಸ್ಥಳೀಯ ಹೂಡಿಕೆ ಮತ್ತು ಉದ್ಯೋಗಾವಕಾಶಗಳ ಮೇಲೂ ಪರಿಣಾಮ ಬೀರುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ. ಇನ್ನೊಂದೆಡೆ, ಇಂಡಿಯನ್ ಸ್ಪಿರಿಟ್ಸ್ ಆ್ಯಂಡ್ ವೈನ್ಸ್ ಅಸೋಸಿಯೇಷನ್ ಆಫ್ ಇಂಡಿಯಾ ಈ ನೀತಿಯನ್ನು ಸ್ವಾಗತಿಸಿದೆ.

ಸಂಸ್ಥೆಯ ಸಿಇಒ ಸಂಜಿತ್ ಪಾಧಿ ಮಾತನಾಡಿ, ಇದು ಅಬಕಾರಿ ವ್ಯವಸ್ಥೆಯನ್ನು ಆಧುನೀಕರಿಸುವ ಹಾಗೂ ಸರಳಗೊಳಿಸುವ ಮುನ್ನೋಟದ ಹೆಜ್ಜೆಯಾಗಿದೆ. ಈ ಮೂಲಕ ಪ್ರೀಮಿಯಂ ಉತ್ಪನ್ನಗಳ ಬೆಳವಣಿಗೆಗೆ ಉತ್ತೇಜನ ಸಿಗಲಿದೆ ಎಂದು ಹೇಳಿದ್ದಾರೆ. ಡ್ರಿಂಕ್ ಬೆಟರ್. ನಾಟ್ ಮೋರ್ ಎಂಬ ತತ್ವಕ್ಕೆ ಈ ನೀತಿ ಹೊಂದಿಕೆಯಾಗಿದ್ದು, ಗುಣಮಟ್ಟದ ಮದ್ಯ ಸೇವನೆಗೆ ಉತ್ತೇಜನ ನೀಡಲಿದೆ ಎಂದು ತಿಳಿಸಿದ್ದಾರೆ.

ಇಂದು ಬೆಂಗಳೂರಿಗೆ ಪ್ರಧಾನಿ ಮೋದಿ ರಾಜ್ಯ ಬಿಜೆಪಿಯ ಬಡಿದೆಬ್ಬಿಸುವ ಕಾರ್ಯ...!

- ಹೆಚ್‌ಎಎಲ್ ವಿಮಾನ ನಿಲ್ದಾಣದಲ್ಲಿ ಪ್ರಮುಖ ಮುಖಂಡರೊಂದಿಗೆ ಚರ್ಚೆ; ಸಭೆ ಉದ್ದೇಶಿಸಿ ಭಾಷಣ
- ಪಶ್ಚಿಮ ಬಂಗಾಳದ ಗೆಲುವಿನ ಅನುಭವದೊಂದಿಗೆ ರಾಜ್ಯದಲ್ಲೂ ಪಕ್ಷ ಅಧಿಕಾರಕ್ಕೆ ತರುವ ಟಿಪ್ಸ್!


ಬೆಂಗಳೂರು, ಮೇ 9(ಕೆಎಂಶಿ)– ಪಶ್ಚಿಮ ಬಂಗಾಳದಲ್ಲಿ ಕೇಸರಿ ಪತಾಕೆ ಹಾರುತ್ತಿದ್ದಂತೆ ಪ್ರಧಾನಿ ನರೇಂದ್ರ ಮೋದಿ ಕರ್ನಾಟಕದಲ್ಲಿ ಬಿಜೆಪಿ ಬಾವುಟ ಹಾರಿಸಲು ತಯಾರಿ ಆರಂಭಿಸಿದ್ದಾರೆ.

ನಾಳೆ, ಭಾನುವಾರ ರಾಜ್ಯಕ್ಕೆ ಒಂದು ದಿನದ ಪ್ರವಾಸ ಕೈಗೊಳ್ಳುತ್ತಿರುವ ಪ್ರಧಾನಿ ಮೋದಿ, ಎಚ್‌ಎಎಲ್ ವಿಮಾನ ನಿಲ್ದಾಣದ ವಿಐಪಿ ಲಾಂಜ್‌ನಲ್ಲಿ ಪಕ್ಷದ ಆಯ್ದ 60 ಮುಖಂಡರ ಸಭೆ ಕರೆದಿದ್ದಾರೆ.

ರಾಜ್ಯ ಬಿಜೆಪಿ ಆಯೋಜಿಸಿರುವ ಕಾರ್ಯಕ್ರಮದಲ್ಲಿ ಅಭಿನಂದನೆ ಸ್ವೀಕರಿಸಿ, ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಲಿದ್ದಾರೆ.

2028ರಲ್ಲಿ ಕರ್ನಾಟಕ ವಿಧಾನಸಭೆಗೆ ನಡೆಯಲಿರುವ ಸಾರ್ವತ್ರಿಕ ಚುನಾವಣೆ ಸಂಬಂಧ ಮೋದಿ ಅವರು ಮುಖಂಡರೊಂದಿಗೆ ಸಭೆ ನಡೆಸಲಿದ್ದಾರೆ.

ಪಕ್ಷದ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ವಿಧಾನಮಂಡಲದ ಪ್ರತಿಪಕ್ಷದ ನಾಯಕರಾದ ಆರ್. ಅಶೋಕ್, ಛಲವಾದಿ ನಾರಾಯಣಸ್ವಾಮಿ, ಮಾಜಿ ಮುಖ್ಯಮಂತ್ರಿಗಳಾದ ಬಿ.ಎಸ್. ಯಡಿಯೂರಪ್ಪ, ಡಿ.ವಿ. ಸದಾನಂದಗೌಡ, ಜಗದೀಶ್ ಶೆಟ್ಟರ್, ಬಸವರಾಜ ಬೊಮ್ಮಾಯಿ, ಕೇಂದ್ರ ಸಚಿವರಾದ ಪ್ರಹ್ಲಾದ್ ಜೋಷಿ, ವಿ.ಸೋಮಣ್ಣ, ಶೋಭಾ ಕರಂದ್ಲಾಜೆ, ರಾಜ್ಯ ಪ್ರತಿನಿಧಿಸುವ ಸಂಸದರು, ಹಿರಿಯ ಶಾಸಕರು ಮತ್ತು ಮುಖಂಡರಿಗೆ ಮಾತ್ರ ಸಭೆಗೆ ಆಹ್ವಾನ ನೀಡಲಾಗಿದೆ.



ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಮೊದಲ ಬಾರಿಗೆ ಅಧಿಕಾರದ ಚುಕ್ಕಾಣಿ ಹಿಡಿಯುತ್ತಿದ್ದಂತೆ ದಕ್ಷಿಣ ಭಾರತದಲ್ಲಿ ಪಕ್ಷವನ್ನು ಮತ್ತೆ ಅಧಿಕಾರಕ್ಕೆ ತರಲು ಪ್ರಧಾನಿ ಮೋದಿ, ನಾಯಕರಿಗೆ ಕೆಲವು ಸಲಹೆ, ಸೂಚನೆ ನೀಡಲಿದ್ದಾರೆ.

ಬಂಗಾಳದಲ್ಲಿ ಕಳೆದ ಎರಡು ವರ್ಷಗಳ ಹಿಂದಿನಿಂದಲೇ ಪಕ್ಷದ ಕಾರ್ಯಕರ್ತರು ಮತ್ತು ಮುಖಂಡರು, ಟಿಎಂಸಿ ಸರ್ಕಾರದ ವಿರುದ್ಧ ಹೋರಾಟ ನಡೆಸಿ, ಮತದಾರರನ್ನು ಒಲಿಸಿಕೊಳ್ಳುವ ಮೂಲಕ ಅಧಿಕಾರಕ್ಕೆ ಬರುವಲ್ಲಿ ಶ್ರಮಿಸಿದ್ದಾರೆ.

ರಾಜ್ಯದಲ್ಲೂ ಈಗಿನಿಂದಲೇ ಕಾಂಗ್ರೆಸ್ ದುರಾಡಳಿತ ಹಾಗೂ ವೈಫಲ್ಯಗಳನ್ನು ಜನರ ಗಮನಕ್ಕೆ ತಂದು ಪ್ರತಿ ಬೂತ್‌ಗಳಲ್ಲಿ ಸಂಘಟನಾ ಕಾರ್ಯ ಚುರುಕುಗೊಳಿಸಿ, ಜೆಡಿಎಸ್ ಜೊತೆಗಿನ ಮೈತ್ರಿಗೆ ಚ್ಯುತಿ ಬರದಂತೆ ಕಾರ್ಯಕ್ರಮ ರೂಪಿಸಿ. ಬಿಹಾರ ಸೇರಿದಂತೆ ಕೆಲವು ರಾಜ್ಯಗಳಲ್ಲಿ ಸ್ಥಳೀಯ ಪಕ್ಷದೊಂದಿಗಿನ ನಮ್ಮ ಮೈತ್ರಿ ಪರಿಣಾಮ ಅಧಿಕಾರ ಗದ್ದುಗೆ ಏರಿದ್ದೇವೆ.

ಸಂಘಟನೆಗೆ ಸಂಬಂಧಿಸಿದಂತೆ ಯಾವುದೇ ಸಲಹೆ–ಸೂಚನೆ ನೀಡಲು ಮುಖಂಡರು ಸ್ವತಂತ್ರರು ಮುಂದಿನ ಎರಡು ವರ್ಷ ವಿಶ್ರಮಿಸದೆ, ಪಕ್ಷ ಸಂಘಟನೆ ಮತ್ತು ಸಣ್ಣ ಹಾಗೂ ಅತಿಸಣ್ಣ ಸಮುದಾಯ ಸೇರಿದಂತೆ ಎಲ್ಲ ವರ್ಗಗಳನ್ನು ಪಕ್ಷದ ಪರವಾಗಿ ಒಗ್ಗೂಡಿಸುವಲ್ಲಿ ಮುಂದಾಗಿ ಎಂದು ಕರೆ ನೀಡಲಿದ್ದಾರೆ.

ನಾಳೆಯಿಂದ ಉಚಿತ ಕಿವಿ, ಮೂಗು, ಗಂಟಲು ತಪಾಸಣಾ ಶಿಬಿರ

ಮೈಸೂರು: ರಾಮಕೃಷ್ಣನಗರದ ಸುಯೋಗ್ ಆಸ್ಪತ್ರೆಯಲ್ಲಿ ಮೇ 11 ರಿಂದ ಮೇ 16ರವರೆಗೆ ಉಚಿತ ಕಿವಿ, ಮೂಗು, ಗಂಟಲು ತಪಾಸಣಾ ಶಿಬಿರವನ್ನು ಆಯೋಜಿಸಿದೆ.



ನುರಿತ ತಜ್ಞವೈದ್ಯ ಡಾ. ಸತೀಶ್ ಕೆ. ನೇತೃತ್ವದಲ್ಲಿ ಈ ಶಿಬಿರ ನಡೆಯಲಿದೆ. ಪದೇ ಪದೆ ನೆಗಡಿ ಸಮಸ್ಯೆ, ಮೂಗು ಕಟ್ಟಿಕೊಳ್ಳುವಿಕೆ, ಮೂಗಿನಲ್ಲಿ ದುರ್ಮಾಂಸ, ಮೈಗ್ರೇನ್, ತಲೆನೋವು, ಸೀನುವಿಕೆ, ಮೂಗು ಸೋರುವಿಕೆ, ಕಿವಿನೋವು, ಕಿವಿ ಕೇಳದಿರುವುದು, ಗಂಟಲು ನೋವು ಮುಂತಾದ ಸಮಸ್ಯೆಗಳಿರುವವರು ಕೂಡಲೇ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳ ತಕ್ಕದ್ದು. ವೈದ್ಯರು ಸೂಚಿಸುವ ಸಿಟಿ ಪಿಎನ್‌ಎಸ್(ಸೈನಸ್ ಸ್ಕ್ಯಾನ್) ಹಾಗೂ ಮೂಗಿನ ಇಂಡೋಸ್ಕೋಪಿ ಪರೀಕ್ಷೆಗೆ ಶೇ.30 ರಿಯಾಯತಿ ಇದೆ.

ಹೆಚ್ಚಿನ ಮಾಹಿತಿಗಾಗಿ 0821–2533600, 9986399862 ಸಂಪರ್ಕಿಸಬಹುದು ಎಂದು ಸುಯೋಗ್ ಆಸ್ಪತ್ರೆಯ ಜನರಲ್ ಮ್ಯಾನೇಜರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರೈತರು ಬೆಳೆದ ಶ್ರೀಗಂಧಕ್ಕೆ ಸೂಕ್ತ ರಕ್ಷಣೆ ಬೇಕು

ನಿವೃತ್ತ ಅರಣ್ಯಾಧಿಕಾರಿ ಎ.ಸಿ.ಲಕ್ಷ್ಮಣ್ ಆಗ್ರಹ

ಶ್ರೀಗಂಧದ ಮರಗಳನ್ನು ಸ್ವೀಕರಿಸಿದ 24 ಗಂಟೆಗಳಲ್ಲಿ ನಿಗದಿತ ಮೌಲ್ಯದ ಶೇ.33ರಷ್ಟು ಹಣವನ್ನು ರೈತರಿಗೆ ಪಾವತಿಸಬೇಕು. ಉಳಿದ ಮೊತ್ತವನ್ನು 12 ತಿಂಗಳಲ್ಲಿ ರೈತರಿಗೆ ಪಾವತಿಸಬೇಕು. ಪಾವತಿ ಮಾಡಲು ವಿಳಂಬವಾದರೆ ರೈತರಿಗೆ ಶೇ.12ರಷ್ಟು ಬಡ್ಡಿ ಸಹಿತ ಹಣ ಪಾವತಿ ಮಾಡಬೇಕು. ಪ್ರತಿ ವರ್ಷ 250 ಕೋಟಿ ರೂ. ಗಂಧದ ಸಂಶೋಧನೆ, ವಿಸ್ತರಣೆ ಹಾಗೂ ವಿಮೆಗೆ ಮೀಸಲಿಡಬೇಕು. ಈ ಸುಧಾರಣೆಗಳನ್ನು ಸರ್ಕಾರ ತಕ್ಷಣವೇ ಜಾರಿಗೆ ತರಬೇಕು.
–ಎ.ಸಿ.ಲಕ್ಷ್ಮಣ್, ನಿವೃತ್ತ ಎಸಿಎಫ್


ಎ.ಸಿ.ಲಕ್ಷ್ಮಣ್

ಮೈಸೂರು, ಮೇ 9(ಎಂಟಿವೈ)– ಶ್ರೀಗಂಧದ ಬೆಳೆಗೆ ಪ್ರೋತ್ಸಾಹಿಸಲು ಸರ್ಕಾರ ಕೂಡಲೇ ಶ್ರೀಗಂಧದ ಮರಕ್ಕೆ ರಕ್ಷಣಾ ಕವಚ ಕಂಡು ಹಿಡಿಯಲು ಕ್ರಮ ಕೈಗೊಳ್ಳಬೇಕು ಎಂದು ನಿವೃತ್ತ ಎಸಿಎಫ್ ಎ.ಸಿ.ಲಕ್ಷ್ಮಣ್ ಆಗ್ರಹಿಸಿದ್ದಾರೆ.

ರೈತರು ಕಷ್ಟಪಟ್ಟು ಶ್ರೀಗಂಧದ ಮರ ಬೆಳೆದು ಲಾಭದ ನಿರೀಕ್ಷೆಯಲ್ಲಿದ್ದಾಗಲೇ ಕಳ್ಳರು ಕಳವು ಮಾಡುತ್ತಿದ್ದು, ಇದರಿಂದ ರೈತರಿಗೆ ಭಾರೀ ಹಾನಿಯಾಗುತ್ತಿದೆ. ಕಷ್ಟಪಟ್ಟು ಬೆಳೆಸಿದ ಶ್ರೀಗಂಧ ಕಳ್ಳರ ಪಾಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಸರ್ಕಾರ ಶ್ರೀಗಂಧದ ಮರಕ್ಕೆ ರಕ್ಷಣಾ ಕವಚ ಕಂಡು ಹಿಡಿಯಲು ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ ಖಾಸಗಿ ವ್ಯಕ್ತಿ ಅಥವಾ ಕಂಪನಿಗಳಿಗೆ ರಕ್ಷಣಾ ಕವಚ ಕಂಡು ಹಿಡಿಯಲು ಆಹ್ವಾನ ನೀಡಬೇಕು. ಅಲ್ಲದೆ, ರಕ್ಷಣಾ ಕವಚ ಕಂಡು ಹಿಡಿಯುವವರಿಗೆ ಸರ್ಕಾರ 50 ಲಕ್ಷ ರೂ. ನಗದು ಬಹುಮಾನ ಘೋಷಿಸಬೇಕು ಎಂದು ಒತ್ತಾಯಿಸಿದ್ದಾರೆ.

ರಕ್ಷಣಾ ಕವಚ ನಿರ್ಮಾಣ ಮಾಡುವುದಕ್ಕೆ ಶ್ರೀಗಂಧ ಬೆಳೆಯುವ ರೈತರು ಒತ್ತಡ ತರಬೇಕು. ಅರಣ್ಯ ಇಲಾಖೆಯ ಮಂತ್ರಿಗಳ ಹಾಗೂ ಅಧಿಕಾರಿಗಳ ಉತ್ಸಾಹದಿಂದ ಆರಂಭಗೊಂಡ ಅರಣ್ಯ ಪ್ರೋತ್ಸಾಹ ಯೋಜನೆಯನ್ನು ಶ್ರೀಗಂಧದ ಬೆಳೆಗೆ ಇನ್ನಷ್ಟು ಪ್ರೋತ್ಸಾಹ ಧನ ನೀಡಲು ಕ್ರಮಕೈಗೊಳ್ಳಬೇಕು. ಶ್ರೀಗಂಧ ಮರಗಳಿಗೆ ರಕ್ಷಣಾ ಕವಚ ಕೊಡುವವರೆಗೂ ರೈತರಿಗೆ ಸನ್ಮಾನ ಮಾಡುವುದನ್ನು ಮುಂದೂಡಬೇಕು. ಈಗಲೇ ಸನ್ಮಾನ ಮಾಡಿದರೆ 15 ವರ್ಷ ಕಷ್ಟಪಟ್ಟು ಬೆಳೆದ ಶ್ರೀಗಂಧದ ಮರಗಳು ಕಳ್ಳ–ಕಾಕರ ಕಣ್ಣಿಗೆ ಬಿದ್ದು ರಾತ್ರೋರಾತ್ರಿ ಕಳ್ಳತನವಾಗುವ ಸಾಧ್ಯತೆ ಇದೆ. ಶ್ರೀಗಂಧ ಬೆಳೆದ ರೈತರನ್ನ ರಕ್ಷಿಸುವುದು ಸರ್ಕಾರದ ಆದ್ಯ ಕರ್ತವ್ಯವಾಗಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ದೇವರಾಜ ಮಾರುಕಟ್ಟೆ, ಲ್ಯಾನ್ಸ್‌ಡೌನ್ ಕಟ್ಟಡ ನವೀಕರಣಕ್ಕೆ ಶೀಘ್ರ ಅನುದಾನ ನೀಡಿ

ಸಿಎಂಗೆ ಸಂಸದ ಯದುವೀರ್ ಮನವಿ

ಮೈಸೂರು, ಮೇ 9(ಜಿಎ)–ಮೈಸೂರಿನ ದೇವರಾಜ ಮಾರುಕಟ್ಟೆ ಮತ್ತು ಲ್ಯಾನ್ಸ್‌ಡೌನ್ ಕಟ್ಟಡದ ಸಂರಕ್ಷಣೆ ಹಾಗೂ ನವೀಕರಣಕ್ಕೆ ಅನುದಾನವನ್ನು ಶೀಘ್ರ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯಗೆ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಮನವಿ ಮಾಡಿದ್ದಾರೆ.

ಮೈಸೂರಿನ ಪಾರಂಪರಿಕ ಕಟ್ಟಡಗಳನ್ನು ಸಂರಕ್ಷಣೆ ಮಾಡುವುದೇ ನಮ್ಮ ಮುಖ್ಯ ಧ್ಯೇಯ ಎಂದು ಮುಖ್ಯಮಂತ್ರಿಗಳಿಗೆ ಪತ್ರ ಬರೆದಿರುವ ಸಂಸದರು, ಮೈಸೂರಿನ ಐತಿಹಾಸಿಕ ಕಟ್ಟಡಗಳಾದ ದೇವರಾಜ ಮಾರುಕಟ್ಟೆ ಮತ್ತು ಲ್ಯಾನ್ಸ್‌ಡೌನ್ ಕಟ್ಟಡದ ಸಂರಕ್ಷಣೆಗೆ ಸಂಬಂಧಿಸಿದಂತೆ ಸುಪ್ರೀಂಕೋರ್ಟ್ ಮೇ 4ರಂದು ನೀಡಿದ ತೀರ್ಪು ಅತ್ಯಂತ ಮಹತ್ವದ್ದಾಗಿದ್ದು, ಕಟ್ಟಡ ಕೆಡವಿ ಪುನರ್ ನಿರ್ಮಾಣದ ಪ್ರಸ್ತಾವನೆಯನ್ನು ತಿರಸ್ಕರಿಸಿದೆ. 19ನೇ ಶತಮಾನದ ಈ ಐತಿಹಾಸಿಕ ಕಟ್ಟಡವನ್ನು ಸಂರಕ್ಷಿಸಿ, ನವೀಕರಿಸಲು ಆದೇಶಿಸಿದೆ ಎಂದು ಅವರು ವಿವರಿಸಿದ್ದಾರೆ.

ಐಐಟಿ ರೂರ್ಕಿ ಸಲ್ಲಿಸಿದ ವಿವರವಾದ ತಾಂತ್ರಿಕ ಅಧ್ಯಯನ ವರದಿ ಆಧರಿಸಿ ಸುಪ್ರೀಂ ಕೋರ್ಟ್ ಈ ತೀರ್ಪು ನೀಡಿದ್ದು, ಸುಮಾರು ಶೇ.70ರಷ್ಟು ದುರಸ್ತಿ ಮಾಡಬಹುದಾಗಿದೆ. ಹಾಲಿ ಇರುವ ಅಡಿಪಾಯ ಸಂರಕ್ಷಣೆ ಮತ್ತು


ಫೈಲ್ ಚಿತ್ರ

ನವೀಕರಣ ಸಾಧ್ಯವಾಗಲಿದೆ. ನಾಗರಿಕ ವಾಸ್ತುಶಿಲ್ಪ ಸಮೂಹಗಳು ಮೈಸೂರಿನ ಅವಿಭಾಜ್ಯ ಅಂಗವಾಗಿದೆ. ಮೈಸೂರು–ಕೊಡಗು ಕ್ಷೇತ್ರವನ್ನು ಪ್ರತಿನಿಧಿಸುವ ಸಂಸತ್ ಸದಸ್ಯನಾಗಿ, ಮೈಸೂರಿನ ಶ್ರೀಮಂತ ಸಾಂಸ್ಕೃತಿಕ ಪರಂಪರೆ ಮತ್ತು ಪ್ರವಾಸೋದ್ಯಮ ಸಂರಕ್ಷಿಸಲು ಬದ್ಧನಾಗಿದ್ದೇನೆ. ನ್ಯಾಯಾಂಗ ಆದೇಶವನ್ನು ಪಾಲಿಸುವುದು ನಮ್ಮ ಕರ್ತವ್ಯವಾಗಿದೆ ಎಂದು ಅವರು ಹೇಳಿದ್ದಾರೆ.

ಈ ನಿಟ್ಟಿನಲ್ಲಿ ಐಐಟಿ ರೂರ್ಕಿ ಮತ್ತು ಇಂಟಾಕ್ ತಜ್ಞರ ಸಮಿತಿ ನೀಡಿರುವ ಶಿಫಾರಸಿನ ಅನ್ವಯ ದೇವರಾಜ ಮಾರುಕಟ್ಟೆ ಮತ್ತು ಲ್ಯಾನ್ಸ್‌ಡೌನ್ ನವೀಕರಣಕ್ಕೆ ಅನುದಾನ ಬಿಡುಗಡೆ ಮಾಡಬೇಕು. ಅದರಂತೆ ಮೈಸೂರು ನಗರ ಪಾಲಿಕೆ ಮತ್ತು ಮೈಸೂರು ಅಭಿವೃದ್ಧಿ ಪ್ರಾಧಿಕಾರ (ಎಂಡಿಎ) ಈ ಯೋಜನೆಯನ್ನು ತಕ್ಷಣವೇ ಪ್ರಾರಂಭಿಸಬೇಕು ಎಂದು ಸೂಚನೆ ನೀಡಬೇಕು ಎಂದು ಮುಖ್ಯಮಂತ್ರಿಗಳಿಗೆ ಮನವಿ ಮಾಡಿದ್ದಾರೆ.

ರಾಜ್ಯ ಸರ್ಕಾರದಿಂದ ಹಂಚಿಕೆಯಾದ ಹಣವನ್ನು ಪಾರಂಪರಿಕ ಕಟ್ಟಡಗಳ ಸಂರಕ್ಷಣೆಗೆ ಮಾತ್ರ ಬಳಸಲಾಗುತ್ತಿದೆಯೇ ಎಂದು ಖಚಿತಪಡಿಸಿಕೊಳ್ಳಬೇಕಾಗಿದೆ. ಈ ಹಿಂದೆ 2024–25ರ ಬಜೆಟ್‌ನಲ್ಲಿ ದೇವರಾಜ ಮಾರುಕಟ್ಟೆ ನವೀಕರಣಕ್ಕೆ 95 ಕೋಟಿ ಮತ್ತು ಲ್ಯಾನ್ಸ್‌ಡೌನ್ ಕಟ್ಟಡಕ್ಕೆ 35 ಕೋಟಿ ಅನುದಾನ ಘೋಷಿಸಲಾಗಿತ್ತು. ದೇವರಾಜ ಮಾರುಕಟ್ಟೆ ಮತ್ತು ಲ್ಯಾನ್ಸ್‌ಡೌನ್ ಕೇವಲ ಕಟ್ಟಡಗಳಲ್ಲ, ಇವು ಮೈಸೂರಿನ ಜೀವಂತ ಸಾಂಸ್ಕೃತಿಕ ಮತ್ತು ವಾಣಿಜ್ಯ ಪರಂಪರೆಯನ್ನು ಪ್ರತಿನಿಧಿಸುತ್ತವೆ. ಮೈಸೂರಿನವರೇ ಆದ ಸಿಎಂ ಸಿದ್ದರಾಮಯ್ಯ ಅವರು ಇವುಗಳ ಸಂರಕ್ಷಣೆ ಮತ್ತು ನವೀಕರಣಕ್ಕೆ ಆದ್ಯತೆ ನೀಡಿ, ಅನುದಾನ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳುವ ಭರವಸೆ ಇದೆ ಎಂದು ಪತ್ರದ ಮೂಲಕ ತಿಳಿಸಿದ್ದಾರೆ.

ಪತ್ರಕರ್ತರ ಮಕ್ಕಳಿಗೆ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಮೈಸೂರು, ಮೇ 9–ಮೈಸೂರು ಜಿಲ್ಲಾ ಪತ್ರಕರ್ತರ ಸಂಘವು 2025–26ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ತೇರ್ಗಡೆಯಾದ ಪತ್ರಕರ್ತರ ಮಕ್ಕಳನ್ನು ಪುರಸ್ಕರಿಸಲು ಅರ್ಜಿ ಆಹ್ವಾನಿಸಿದೆ.

ಅರ್ಜಿ ಸಲ್ಲಿಸುವವರು ಪತ್ರಕರ್ತರ ಸಂಘದ ಸದಸ್ಯತ್ವ ಹೊಂದಿರುವ ಪತ್ರಕರ್ತರ ಮಕ್ಕಳಾಗಿರಬೇಕು. ಲಿಖಿತ ಅರ್ಜಿಯೊಂದಿಗೆ ಪತ್ರಕರ್ತರ ಸಂಘದ ಗುರುತಿನ ಕಾರ್ಡ್ ನಕಲು, ಆಧಾರ್ ಕಾರ್ಡ್ ನಕಲು, ವಿದ್ಯಾರ್ಥಿಗಳ ಅಂಕಪಟ್ಟಿ ನಕಲು, ಇತ್ತೀಚಿನ 2 ಭಾವಚಿತ್ರ ಹಾಗೂ ಆಧಾರ್ ಕಾರ್ಡ್ ಸಲ್ಲಿಸಬೇಕು. ಅರ್ಜಿ ಸಲ್ಲಿಸಲು ಮೇ 20 ಕೊನೆ ದಿನಾಂಕವಾಗಿದ್ದು, ನಂತರ ಬರುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಹೆಚ್ಚಿನ ಮಾಹಿತಿಗೆ ಸಂಘದ ಅಧ್ಯಕ್ಷ ಕೆ.ದೀಪಕ್–9741511340, ಪ್ರಧಾನ ಕಾರ್ಯದರ್ಶಿ ಧರ್ಮಾಪುರ ನಾರಾಯಣ್ –98456 53548 ಸಂಪರ್ಕಿಸಬಹುದು.

ಲೈಂಗಿಕ ಅಲ್ಪಸಂಖ್ಯಾತರ ಮಸೂದೆ ತಿದ್ದುಪಡಿಯಿಂದ ಅನ್ಯಾಯ

ತಿದ್ದುಪಡಿ ಕೈ ಬಿಡುವಂತೆ ಅಲ್ಪಸಂಖ್ಯಾತರ ಆಗ್ರಹ

ಮೈಸೂರು, ಮೇ 9(ಜಿಎ)–ಕೇಂದ್ರ ಸರ್ಕಾರದ ಲೈಂಗಿಕ ಅಲ್ಪಸಂಖ್ಯಾತರ ಹಕ್ಕುಗಳ ರಕ್ಷಣೆ ತಿದ್ದುಪಡಿ ಮಸೂದೆ ಈ ಸಮುದಾಯದವರ ಹಕ್ಕುಗಳಿಗೆ ಗಂಭೀರ ಹಾನಿಯುಂಟು ಮಾಡುವ ಕಾರಣ ಅದನ್ನು ವಿರೋಧಿಸಲಾಗುವುದು ಎಂದು ರಾಜ್ಯ ಮಟ್ಟದ ಸಮುದಾಯದ ಸಂಘಟನೆಗಳ ಒಕ್ಕೂಟದ ಪದಾಧಿಕಾರಿ ಕ್ರಿಸ್ಟಿ ಸ್ಪಷ್ಟಪಡಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಮಸೂದೆ ಈಗಾಗಲೇ ಇರುವ ಸಮಾನತೆ, ಗೌರವ ಮತ್ತು ಸ್ವಯಂ ಗುರುತಿನ ಹಕ್ಕುಗಳನ್ನು ದುರ್ಬಲಗೊಳಿಸುವ ಯತ್ನವಾಗಿದೆ. ಲಿಂಗ ಗುರುತಿಗೆ ವೈದ್ಯಕೀಯ ಪರಿಶೀಲನೆ ಮತ್ತು ಪ್ರಮಾಣ ಪತ್ರಗಳ ಮೂಲಕ ಮಾತ್ರ ಮಾನ್ಯಗೊಳಿಸುವ ವ್ಯವಸ್ಥೆ ಬೇಕೆಂದು ತಿಳಿಸಿದೆ. ಆದರೆ ಈ ಹಿಂದಿನ ಸುಪ್ರೀಂಕೋರ್ಟ್ ತೀರ್ಪಿನ ಅಡಿಯಲ್ಲಿನ ಪ್ರತಿಯೊಬ್ಬ ವ್ಯಕ್ತಿಗೂ ತನ್ನ ಲಿಂಗ ಗುರುತನ್ನು ಸ್ವಯಂ ನಿರ್ಧರಿಸುವ ಹಕ್ಕು ಇದ್ದು, ಯಾವುದೇ ವೈದ್ಯಕೀಯ ಅಥವಾ ಆಡಳಿತಾತ್ಮಕ ಅನುಮತಿ ಅಗತ್ಯವಿಲ್ಲ ಎಂಬ ಅಂಶಕ್ಕೆ ವಿರುದ್ಧವಾದುದಾಗಿದೆ ಎಂದು ತಿಳಿಸಿದರು.

ಮಸೂದೆಯಲ್ಲಿ ಟ್ರಾನ್ಸ್‌ಜೆಂಡರ್ ಎಂಬ ಪದಕ್ಕೆ ಸೀಮಿತ ಮತ್ತು ತಪ್ಪಾದ ವ್ಯಾಖ್ಯಾನ ನೀಡಲಾಗಿದೆ. ಹಲವಾರು ಲಿಂಗ ವೈವಿಧ್ಯತೆಯ ಗುರುತುಗಳನ್ನು ಹೊರತುಪಡಿಸಲಾಗಿದೆ. ಇದೇ ರೀತಿಯ ಹಲವಾರು ಲೋಪಗಳಿರುವ ಕಾರಣ ಮಸೂದೆಯನ್ನು ವಿರೋಧಿಸುವುದಾಗಿ ವಿವರಿಸಿದರು. ಸುದ್ದಿಗೋಷ್ಠಿಯಲ್ಲಿ ಟಿ.ಶಿವರಾಮು, ಬಿ.ಹೆಚ್. ಮಂಜುನಾಥ್ ಮತ್ತಿತರರು ಉಪಸ್ಥಿತರಿದ್ದರು.

ಬಾಲಭಾರತಿ ವತಿಯಿಂದ ರಾಮಾಯಣ ಪರೀಕ್ಷೆ


ಮೈಸೂರಿನ ಶ್ರೀ ಶಂಕರ ಮಠದಲ್ಲಿ ಬಾಲಭಾರತಿ ವತಿಯಿಂದ ಮಕ್ಕಳಿಗೆ 'ರಾಮಾಯಣ ಪರೀಕ್ಷೆ' ನಡೆಸಲಾಯಿತು.

700ಕ್ಕೂ ಹೆಚ್ಚು ಮಕ್ಕಳು ಸಂಭ್ರಮದಿಂದ ಭಾಗಿ

ಮೈಸೂರು, ಮೇ 9–ಮೈಸೂರಿನ ಶ್ರೀ ಶಂಕರ ಮಠದಲ್ಲಿ ಶ್ರೀ ಸನ್ನಿಧಾನಗಳ ಆಶ್ರಯದಲ್ಲಿ ಬಾಲಭಾರತಿ ವತಿಯಿಂದ 'ರಾಮಾಯಣ ಪರೀಕ್ಷೆ'ಯು ಜರುಗಿತು.

ಮಕ್ಕಳಲ್ಲಿ ಸನಾತನ ಧರ್ಮದ ಮೌಲ್ಯಗಳು ಹಾಗೂ ಸಾಂಸ್ಕೃತಿಕ ಪ್ರಜ್ಞೆ ಬೆಳೆಸುವ ನಿಟ್ಟಿನಲ್ಲಿ ಹಮ್ಮಿಕೊಳ್ಳಲಾಗಿದ್ದ ಈ ಪರೀಕ್ಷೆಯಲ್ಲಿ 700ಕ್ಕೂ ಹೆಚ್ಚು ಮಕ್ಕಳು ಉತ್ಸಾಹದಿಂದ ಪಾಲ್ಗೊಂಡಿದ್ದರು. ಬೆಳಗ್ಗೆಯಿಂದಲೇ ಮಠದ ಆವರಣದಲ್ಲಿ ಪೋಷಕರು ಮತ್ತು ಮಕ್ಕಳ ದಂಡೇ ನೆರೆದಿತ್ತು.

ಮಠದ ಧರ್ಮಾಧಿಕಾರಿಗಳಾದ ರಾಮಚಂದ್ರ ಹಾಗೂ ವ್ಯವಸ್ಥಾಪಕ ಶೇಷಾದ್ರಿ ಭಟ್ ಅಗತ್ಯವಿರುವ ಎಲ್ಲಾ ಸೌಲಭ್ಯ ಕಲ್ಪಿಸಿ ಕೊಡುವ ಮೂಲಕ ಪರೀಕ್ಷೆ ಯಶಸ್ಸಿಗೆ ನೆರವಾದರು. ಎಸ್.ರಂಗನಾಥ, ಹರೀಶ್, ಬಾಲಕೃಷ್ಣ, ವಿಶ್ವನಾಥ್, ನಾಗಭೂಷಣ್, ಜ್ಯೋತಿ, ರಶ್ಮಿ, ಸುಲೋಚನಾ, ಸರೋಜಾ, ವಿಜಯ, ಸತ್ಯವತಿ, ಬಾಬಣ್ಣ, ಪೂಜಾ, ಸೂರ್ಯ, ವೆಂಕಟೇಶ್, ಸುಮತಿ ಸೇರಿದಂತೆ 25ಕ್ಕೂ ಹೆಚ್ಚು ಸ್ವಯಂಸೇವಕರು ಭಕ್ತಿಭಾವದಿಂದ ಪರೀಕ್ಷೆ ನಿರ್ವಹಣೆಗೆ ಸಹಕರಿಸಿದರು. ಇದೇ ವೇಳೆ ಬಾಲಭಾರತಿಯ ಈ ವಿಶಿಷ್ಟ ಪ್ರಯತ್ನವು ಇಂದಿನ ಮಕ್ಕಳಲ್ಲಿ ರಾಮಾಯಣದ ಆದರ್ಶಗಳು, ಜೀವನ ಮೌಲ್ಯಗಳನ್ನು ಬಿತ್ತಲು ಸಹಕಾರಿಯಾಗಿದೆ ಎಂದು ಸಂಘಟಕರು ಹರ್ಷ ವ್ಯಕ್ತಪಡಿಸಿದರು.

ಕರ್ನಾಟಕದಲ್ಲಿ ಮತ್ತೆ ಬಿಜೆಪಿ ಸರ್ಕಾರ ಬರುವುದು ಅಸಾಧ್ಯ


ಹೆಚ್.ಎ.ವೆಂಕಟೇಶ್


ಮೈಸೂರು,ಮೇ9–ಪಶ್ಚಿಮ ಬಂಗಾಳದ ಮಾದರಿಯಲ್ಲಿ ಕರ್ನಾಟಕದಲ್ಲೂ ಬಿಜೆಪಿ ಅಧಿಕಾರಕ್ಕೆ ಬರಲಿದೆ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರು ಸುಳ್ಳು ಭವಿಷ್ಯ ನುಡಿದಿದ್ದಾರೆ ಎಂದು ಕೆಪಿಸಿಸಿ ವಕ್ತಾರ ಹೆಚ್.ಎ.ವೆಂಕಟೇಶ್ ಹೇಳಿದ್ದಾರೆ.

ರಾಜ್ಯದಲ್ಲಿ ಮುಂದೆ ಬಿಜೆಪಿ ಅಧಿಕಾರಕ್ಕೆ ಬರಲಿದೆ, ಪಶ್ಚಿಮ ಬಂಗಾಳ ಮಾದರಿಯ ಫಲಿತಾಂಶ ಎದುರಾಗಲಿದೆ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರು ನುಡಿದಿರುವ ಭವಿಷ್ಯ ನೂರಕ್ಕೆ ನೂರು ಸುಳ್ಳಾಗಲಿದೆ. ರಾಜಕಾರಣದಲ್ಲಿ 50ನೇ ವಸಂತದ ಸಂಭ್ರಮದಲ್ಲಿರುವ ಬಿಎಸ್‌ವೈ ಅವರು, ಈ ರೀತಿಯ ಸುಳ್ಳು ವಿಶ್ಲೇಷಣೆ ಮಾಡಿರುವುದು ಸಮಂಜಸವಲ್ಲ ಎಂದು ವೆಂಕಟೇಶ್ ಹೇಳಿದ್ದಾರೆ.

ಯುದ್ಧ ಭೀತಿ ಹಾಗೂ ಕೇಂದ್ರದ ಬಿಜೆಪಿ ಸರ್ಕಾರದ ಅಸಮರ್ಪಕ ವಿದೇಶಾಂಗ ನೀತಿಯ ಫಲವಾಗಿ ದೇಶಕ್ಕೆ ಆರ್ಥಿಕ ಸಂಕಷ್ಟ ಎದುರಾಗಿದೆ. ಈ ಪರಿಸ್ಥಿತಿಯಲ್ಲಿ ರಾಜ್ಯದ ಕಾಂಗ್ರೆಸ್ ಸರ್ಕಾರ ತನ್ನ ಜನತೆಗೆ ಪಂಚ ಗ್ಯಾರಂಟಿ ಯೋಜನೆ ಜೊತೆಗೆ ಸಾಧ್ಯವಾದಷ್ಟು ನೆರವು ನೀಡುತ್ತಿವೆ. ಆದರೆ ಬಿಜೆಪಿ ನಾಯಕರು, ಬಂಗಾಳದ ಮತದಾನ ಮುಗಿದ ಮರುದಿನವೇ ಸಿಲಿಂಡರ್ ಬೆಲೆಯನ್ನು ದೊಡ್ಡ ಪ್ರಮಾಣದಲ್ಲಿ ಹೆಚ್ಚಿಸಿ, ಗಾಯದ ಮೇಲೆ ಬರೆ ಎಳೆದಿದ್ದಾರೆ. ಇಂತಹ ಜನವಿರೋಧಿ ಆಡಳಿತಗಾರರಿಗೆ ಮತದಾರ ಮನ್ನಣೆ ನೀಡುತ್ತಾನೆ ಎಂದು ಸಮರ್ಥಿಸಿಕೊಳ್ಳುವುದು ಹಿರಿಯ ರಾಜಕಾರಣಿಗೆ ಶೋಭೆ ತರುವುದಿಲ್ಲ ಎಂದು ಹೇಳಿದ್ದಾರೆ.

ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಹೇಗೆ ಜಯಗಳಿಸಿದೆ ಎನ್ನುವುದು ಎಲ್ಲರಿಗೂ ತಿಳಿದಿದೆ. ಅಭಿವೃದ್ಧಿ ಕೆಲಸಗಳು ಮತ್ತು ಜನಪರ ಆಡಳಿತಕ್ಕೆ ಜನ ಮನ್ನಣೆ ನೀಡುತ್ತಾರೆ ಎನ್ನುವುದು ದಾವಣಗೆರೆ ಮತ್ತು ಬಾಗಲಕೋಟೆ ಉಪಚುನಾವಣೆಯ ಫಲಿತಾಂಶದಲ್ಲಿ ಸಾಬೀತಾಗಿದೆ. ಈ ಹಿನ್ನೆಲೆ ಗಮನಿಸಿ ಹೇಳುವುದಾದರೆ ರಾಜ್ಯದಲ್ಲಿ 2028ರಲ್ಲಿಯೂ ಕಾಂಗ್ರೆಸ್ ಅಧಿಕಾರ ಕ್ಕೇರಲಿದೆ ಎನ್ನುವುದರಲ್ಲಿ ಅನುಮಾನವಿಲ್ಲ ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಭ್ರಷ್ಟಾಚಾರ ತೊಲಗಲಿ ಹೋರಾಟ...


ರಾಜ್ಯದಲ್ಲಿ ಭ್ರಷ್ಟಾಚಾರ ತೊಲಗಲಿ ಎಂಬ ವಾಟಾಳ್ ನಾಗರಾಜ್ ನೇತೃತ್ವದಲ್ಲಿ ನಡೆದ ಹೋರಾಟದಲ್ಲಿ ತೆಂಗಿನಕಾಯಿ ಹಿಡುಗಾಯಿ ಹೊಡೆಯಲಾಯಿತು. ಈ ವೇಳೆ ಪಾರ್ಥಸಾರಥಿ, ಗಿರೀಶ್‌ಗೌಡ, ಮೂಗೂರು ನಂಜುಂಡಸ್ವಾಮಿ, ತೇಜೇಶ್ ಲೋಕೇಶ್ ಗೌಡ, ಶಿವಶಂಕರ್, ನಾರಾಯಣ ಸ್ವಾಮಿ, ನಾಗೇಗೌಡ, ಸಿಂಧುವಳ್ಳಿ ಶಿವಕುಮಾರ್, ರಾಧಾಕೃಷ್ಣ, ದರ್ಶನ್‌ಗೌಡ, ಪ್ರದೀಪ್, ರಘು ಅರಸ್, ಬಸವರಾಜು, ಹನುಮಂತಯ್ಯ ಇನ್ನಿತರರು ಉಪಸ್ಥಿತರಿದ್ದರು.

ಪಂಜಾಬ್ ಸಚಿವ ಸಂಜೀವ್ ಅರೋರಾ ನಿವಾಸದ ಮೇಲೆ ಇಡಿ ದಾಳಿ

ಚಂಡೀಗಢ: ಪಂಜಾಬ್‌ನ ಆಪ್ ಸರ್ಕಾರದಲ್ಲಿ ಕೈಗಾರಿಕೆ ಮತ್ತು ವಿದ್ಯುತ್ ಸಚಿವರಾಗಿರುವ ಸಂಜೀವ್ ಅರೋರಾ ಮೇಲೆ ಶನಿವಾರ(ಮೇ 9) ಜಾರಿ ನಿರ್ದೇಶನಾಲಯ(ಇಡಿ) ಅಧಿಕಾರಿಗಳು ದಾಳಿ ನಡೆಸಿ, ಶೋಧ ನಡೆಸಿದ್ದಾರೆ. ಇದು, ಈ ವರ್ಷದಲ್ಲಿ ಅವರ ಮನೆ ಮೇಲೆ ನಡೆದ ಮೂರನೇ ದಾಳಿಯಾಗಿದೆ.



ಅಕ್ರಮ ಹಣ ವರ್ಗಾವಣೆ ಪ್ರಕರಣ ಸಂಬಂಧ ಫೆಮಾ ಕಾಯ್ದೆಯಡಿ ತನಿಖೆ ನಡೆಯುತ್ತಿದ್ದು, ಅದರ ಭಾಗವಾಗಿ ಮುಂಜಾನೆ 5 ಗಂಟೆಗೆ ಚಂಡೀಗಢದಲ್ಲಿರುವ ಸಚಿವರ ಮನೆ ಮೇಲೆ ಅಧಿಕಾರಿಗಳು ದಾಳಿ ಮಾಡಿ ಶೋಧ ನಡೆಸಿದ್ದಾರೆ. ಕೈಗಾರಿಕೆಗಳಿಗೆ ಹಂಚಿಕೆಯಾದ ಭೂಮಿಯನ್ನು ವಸತಿ ಯೋಜನೆಗಳಿಗೆ ಬಳಸಲಾಗುತ್ತಿದೆ ಎಂಬ ಆರೋಪಗಳಿದ್ದು, ಈ ಸಂಬಂಧ ಹಣ ವರ್ಗಾವಣೆಯ ವಿಷಯದ ಬಗ್ಗೆ ಸಂಜೀವ್ ಅರೋರಾ ಅವರನ್ನು ಅಧಿಕಾರಿಗಳು ಪ್ರಶ್ನಿಸಿದ್ದಾರೆ ಎನ್ನಲಾಗಿದೆ.

ಇನ್ನೂ ಇಡಿ ದಾಳಿ ಬಗ್ಗೆ ಪ್ರತಿಕ್ರಿಯಿಸಿರುವ ಅರೋರಾ, ತನಿಖೆಗೆ ಸಹಕರಿಸುವುದಾಗಿ ಹೇಳಿದ್ದಾರೆ. ದಾಳಿ ಹಿನ್ನೆಲೆಯಲ್ಲಿ ಆಪ್ ಮುಖ್ಯಸ್ಥ ಅರವಿಂದ್ ಕೇಜ್ರಿವಾಲ್, ಕೇಂದ್ರ ಸರ್ಕಾರ ಮತ್ತು ಪ್ರಧಾನಿ



ಮೋದಿ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ. ಬಂಗಾಳ ಚುನಾವಣೆ ಮುಗಿದ ಕೂಡಲೇ ಮೋದಿಜಿ ಪಂಜಾಬ್‌ನಲ್ಲಿ ದೈನಂದಿನ ಇಡಿ ದಾಳಿಗಳನ್ನು ಪ್ರಾರಂಭಿಸಿದ್ದಾರೆ. ಮೋದಿ ಜೀ ದೇಶದ ವಿವಿಧ ಭಾಗಗಳನ್ನು ಅಪ್ರಾಮಾಣಿಕವಾಗಿ ಆಕ್ರಮಿಸಿಕೊಂಡಿದ್ದು, ಈಗ ಪಂಜಾಬ್ ತಲುಪಿದ್ದಾರೆ ಎಂದಿದ್ದಾರೆ.

ಅಭಿನಂದನೆ


ಭಾರತೀಯ ಜೀವ ವಿಮಾ ನಿಗಮ(ಎಲ್‌ಐಸಿ) ಮೈಸೂರು ವಿಭಾಗದ ವಿಭಾಗಾಧಿಕಾರಿಯಾಗಿ ಅಧಿಕಾರ ಸ್ವೀಕರಿಸಿದ ಬಿ.ಪಿ.ರವಿ ಅವರನ್ನು ಎಲ್‌ಐಸಿ ಪಿಂಚಣಿದಾರರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಅಭಿನಂದಿಸಲಾಯಿತು. ಈ ವೇಳೆ ಸಂಘದ ವಿಭಾಗದ ಅಧ್ಯಕ್ಷ ಪಾರ್ಥಸಾರಥಿ, ಉಪಾಧ್ಯಕ್ಷ ನಾಗೇಶ್ ಮೂರ್ತಿ, ಖಜಾಂಚಿ ಸುರೇಂದ್ರ, ಪ್ರಧಾನ ಕಾರ್ಯದರ್ಶಿ ಬಿ.ಪುಟ್ಟಸ್ವಾಮಿ, ಸಹ ಕಾರ್ಯದರ್ಶಿ ಬೂಕನಕೆರೆ ವಿಜೇಂದ್ರ ಉಪಸ್ಥಿತರಿದ್ದರು.

ಟ್ರಂಪ್ ವಿಧಿಸಿದ್ದ ಶೇ.10 ಸುಂಕ ಅಸಿಂಧು; ಕೋರ್ಟ್ ರದ್ದು

ವಾಷಿಂಗ್ಟನ್: ಭಾರತ ಸೇರಿದಂತೆ ಜಗತ್ತಿನ ವಿವಿಧ ರಾಷ್ಟ್ರಗಳ ಮೇಲೆ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ವಿಧಿಸಿರುವ ಶೇ.10ರಷ್ಟು ಸುಂಕವು ಅಸಿಂಧು ಹಾಗೂ ಕಾನೂನುಬಾಹಿರ ಎಂದು ರದ್ದುಗೊಳಿಸಿ, ಅಮೆರಿಕದ ಫೆಡರಲ್ ನ್ಯಾಯಾಲಯವು ಆದೇಶ ಪ್ರಕಟಿಸಿದೆ. ಡೊನಾಲ್ಡ್ ಟ್ರಂಪ್ ವಿಧಿಸಿದ್ದ ಹೆಚ್ಚುವರಿ ಪ್ರತಿಸುಂಕವನ್ನು ಅಮೆರಿಕದ ಸುಪ್ರೀಂಕೋರ್ಟ್ ಈ ಹಿಂದೆ ರದ್ದುಗೊಳಿಸಿತ್ತು. ಇದರಿಂದ ಟ್ರಂಪ್, ಭಾರತ ಸೇರಿದಂತೆ ವಿವಿಧ ದೇಶಗಳಿಂದ ಅಮೆರಿಕಕ್ಕೆ ಪ್ರವೇಶಿಸುವ ವಸ್ತುಗಳ ಮೇಲೆ ಶೇ.10ರಷ್ಟು ಸುಂಕ ವಿಧಿಸಿ, ಇದು ಫೆ.24ರಿಂದ 150 ದಿನ ಜಾರಿಯಲ್ಲಿ ಇರಲಿದೆ ಎಂದು ತಿಳಿಸಿದ್ದರು.



ಶೇ.10ರಷ್ಟು ಸುಂಕ ವಿಧಿಸಲು 1974ರ ವ್ಯಾಪಾರ ಕಾಯ್ದೆಯ ನಿಬಂಧನೆಗಳು ಪಾವತಿ ಸಮತೋಲನ ಪ್ರಸ್ತಾಪಿಸಲಾಗಿದೆ. ಆದರೆ, ಇದು ಬಿಕ್ಕಟ್ಟಿನ ಸಂದರ್ಭದಲ್ಲಿ ಮಾತ್ರ ಪರಿಣಾಮಕಾರಿಯಾಗಬಹುದು ಎಂದು ಅಂತರರಾಷ್ಟ್ರೀಯ ವ್ಯಾಪಾರ ನ್ಯಾಯಾಲಯವು ಎರಡು ಪ್ರತ್ಯೇಕ ತೀರ್ಪಿನಲ್ಲಿ ತಿಳಿಸಿದೆ. ಈ ತೀರ್ಪಿನ ವಿರುದ್ಧ ಅಮೆರಿಕ ಆಡಳಿತವು ಮೇಲ್ಮನವಿ ಸಲ್ಲಿಸುವ ನಿರೀಕ್ಷೆ ಇದೆ.

ಲೋಕಭವನಗಳ ಬಳಸಿಕೊಂಡು ವಿವಿಧ ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ

ಬೆಂಗಳೂರು, ಮೇ 9(ಕೆಎಂಶಿ)– ಲೋಕಭವನಗಳನ್ನು ಬಳಸಿಕೊಂಡು ಹಲವು ರಾಜ್ಯಗಳಲ್ಲಿ ಬಿಜೆಪಿ ಅಧಿಕಾರ ಚುಕ್ಕಾಣಿ ಹಿಡಿಯುತ್ತಿದೆ ಎಂದು ಮಾಹಿತಿ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ಆರೋಪಿಸಿದ್ದಾರೆ.



ಚುನಾವಣೆಯಲ್ಲಿ ಅತೀ ಹೆಚ್ಚು ಸ್ಥಾನಗಳನ್ನು ಗೆದ್ದ ಪಕ್ಷವನ್ನು ಸರ್ಕಾರ ರಚನೆಗೆ ಆಹ್ವಾನಿಸುವುದು ರಾಜ್ಯಪಾಲರ ಕರ್ತವ್ಯ, ಆದರೆ, ಉದ್ದೇಶಪೂರ್ವಕವಾಗಿ ತಮಿಳುನಾಡಿನಲ್ಲಿ ಟಿವಿಕೆ ಪಕ್ಷದ ನಾಯಕ ವಿಜಯ್ ಅವರಿಗೆ ಸರ್ಕಾರ ರಚನೆಗೆ ಆಹ್ವಾನ ನೀಡುತ್ತಿಲ್ಲ ಎಂದರು. ಬಹುಮತ ಇಲ್ಲದಿದ್ದರೂ ಕರ್ನಾಟಕ, ಮಹಾರಾಷ್ಟ್ರದಲ್ಲಿ ಬಿ.ಎಸ್.ಯಡಿಯೂರಪ್ಪ ಹಾಗೂ ದೇವೇಂದ್ರ ಫಡ್ನವೀಸ್ ಅವರಿಗೆ ಅವಕಾಶ ಮಾಡಿಕೊಟ್ಟಿದ್ದು ಹೇಗೆ, ಇವರಿಗೊಂದು, ಬೇರೆಯವರಿಗೊಂದು ನ್ಯಾಯವೇ ಎಂದರು. ಐಟಿ, ಇಡಿ, ಸಿಬಿಐಗಳನ್ನು ವಿರೋಧ ಪಕ್ಷಗಳ ಮೇಲೆ ಛೂಬಿಟ್ಟು, ಆರ್‌ಎಸ್‌ಎಸ್ ಬೆಂಬಲ, ರಾಜ್ಯಪಾಲರ ಹಸ್ತಕ್ಷೇಪ ಇಲ್ಲದೆ ಯಾವುದೇ ರಾಜ್ಯದಲ್ಲಿ ಬಿಜೆಪಿ ಅಧಿಕಾರ ಹಿಡಿಯಲು ಸಾಧ್ಯವಾಗುತ್ತಿರಲಿಲ್ಲ ಎಂದರು.

ಅನಾಥಾಲಯಕ್ಕೆ ಅರ್ಜಿ ಆಹ್ವಾನ

ಮೈಸೂರು: ಚಾಮರಾಜನಗರ ಬಿ.ರಾಚಯ್ಯ ಜೋಡಿ ರಸ್ತೆಯಲ್ಲಿರುವ ಜೆಎಸ್‌ಎಸ್ ಅನಾಥಾಲಯಕ್ಕೆ ಅರ್ಜಿ ಆಹ್ವಾನಿಸಲಾಗಿದೆ. 5ರಿಂದ 10ನೇ ತರಗತಿವರೆಗೆ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶವಿರುತ್ತದೆ. ಅರ್ಜಿಯನ್ನು ನೇರವಾಗಿ ಕಚೇರಿಯಿಂದ ಪಡೆಯಬಹುದು ಅಥವಾ ಮೊಬೈಲ್‌ನಲ್ಲಿ ಸಂಪರ್ಕಿಸಿದರೆ ವಾಟ್ಸಪ್ ಮೂಲಕ ಕಳುಹಿಸಿಕೊಡಲಾಗುವುದು. ಪ್ರವೇಶಕ್ಕೆ ಸಂಬಂಧಿಸಿದಂತೆ ಮಾಹಿತಿ ಅಗತ್ಯವಿದ್ದಲ್ಲಿ ದೂ.ಸಂ. 0821–2548212, ಮೊ.9535252881 ಸಂಪರ್ಕಿಸಬಹುದು.

ಉಚಿತ ಡಿಪ್ಲೋಮಾ ಸಿಇಟಿ ತರಬೇತಿ

ಮೈಸೂರು, ಮೇ 9(ಜಿಎ)–ಎಂಜಿನಿಯರಿಂಗ್ ಪ್ರವೇಶ ಪಡೆಯಲು ಬಯಸುವ ಡಿಪ್ಲೋಮಾ ವಿದ್ಯಾರ್ಥಿಗಳಿಗಾಗಿ ಶೇಷಾದ್ರಿಪುರಂ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ವತಿಯಿಂದ ಉಚಿತ ಡಿಪ್ಲೋಮಾ ಸಿಇಟಿ ತರಬೇತಿ ನೀಡಲಾಗುತ್ತದೆ ಎಂದು ಕಾಲೇಜಿನ ಪ್ರಾಂಶುಪಾಲರಾದ ಡಾ.ಕೆ.ಪ್ರಹ್ಲಾದರಾವ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಡಿಪ್ಲೋಮಾ ಕೊನೆ ವರ್ಷದ ಅಭ್ಯರ್ಥಿಗಳು ಹಾಗೂ ಈಗಾಗಲೇ ಈ ವಿದ್ಯಾಭ್ಯಾಸ ಪೂರ್ಣಗೊಳಿಸಿ ಉದ್ಯೋಗದಲ್ಲಿರುವವರು ಎಂಜಿನಿಯರಿಂಗ್ ಮಾಡುವ ನಿಟ್ಟಿನಲ್ಲಿ ನೆರವಾಗುವ ಉದ್ದೇಶದಿಂದ ಶೇಷಾದ್ರಿಪುರಂ ತಾಂತ್ರಿಕ ಕಾಲೇಜಿನಲ್ಲಿ ಮೇ 11ರಿಂದ 15ರವರೆಗೆ ಡಿಸಿಇಟಿ ತರಬೇತಿ ತರಗತಿ ಆಯೋಜಿಸಲಾಗಿದೆ ಎಂದರು. ಡಿಪ್ಲೋಮಾ ನಂತರದ ಎಂಜಿನಿಯರಿಂಗ್ ಮಾಡುವುದರಿಂದ ವಿಶೇಷ ಉದ್ಯೋಗಾವಕಾಶ, ಹೆಚ್ಚಿನ ವೇತನ ಮತ್ತು ಎಂಜಿನಿಯರಿಂಗ್ ಕುರಿತು ಆಳವಾದ ಜ್ಞಾನ ದೊರೆಯಲಿದೆ. ಆದರೆ ಎಂಜಿನಿಯರಿಂಗ್ ಪ್ರವೇಶ ಪಡೆಯಲು ಡಿಸಿಇಟಿಗೆ ಹಾಜರಾಗುವುದು ಅತ್ಯಗತ್ಯ. ಹೀಗಾಗಿ ಇವರಿಗೆ ಈ ತರಬೇತಿ ಆಯೋಜಿಸಿದ್ದು, ಇದು ಸಂಪೂರ್ಣ ಉಚಿತವಾದುದಾಗಿದೆ. ಹೆಚ್ಚಿನ ಮಾಹಿತಿಗೆ ದೂ.9606496400 ಸಂಪರ್ಕಿಸಬಹುದು ಎಂದು ತಿಳಿಸಿದರು.

ಹಾರ್ಮುಜ್ ಬಳಿ ಹಡಗು ಬೆಂಕಿಗಾಹುತಿ; ಭಾರತೀಯ ನಾವಿಕ ಸಾವು



ಟೆಹರಾನ್: ಹಾರ್ಮುಜ್ ಜಲಸಂಧಿ ಬಳಿ ಹಡಗಿನಲ್ಲಿದ್ದ ಮರದ ದೋಣಿಗೆ ಬೆಂಕಿ ಹೊತ್ತಿಕೊಂಡ ಪರಿಣಾಮ ಓರ್ವ ಭಾರತೀಯ ನಾವಿಕ ಸಾವನ್ನಪ್ಪಿದ್ದು, ಹಲವರು ಗಾಯಗೊಂಡಿದ್ದಾರೆ.

ಸಾಮಾನ್ಯ ಸರಕುಗಳನ್ನು ಸಾಗಿಸುತ್ತಿದ್ದ ಹಡಗು 18 ಭಾರತೀಯ ಸಿಬ್ಬಂದಿಯನ್ನು ಹೊತ್ತು ಹಾರ್ಮುಜ್ ಜಲಸಂಧಿಯಲ್ಲಿ ಸಾಗುತ್ತಿದ್ದಾಗ ಅದರಲ್ಲಿದ್ದ ಮರದ ದೋಣಿ ಬಳಿ ಬೆಂಕಿ ಹೊತ್ತಿಕೊಂಡ ನಂತರ ಅದು ಮಗುಚಿಬಿದ್ದಿದೆ. ಘಟನೆಯಲ್ಲಿ ನಾವಿಕ ಸಾವನ್ನಪ್ಪಿದ್ದು, 17 ಸಿಬ್ಬಂದಿಯನ್ನು ರಕ್ಷಿಸಲಾಗಿದೆ. ಇವರಲ್ಲಿ ಕೆಲವರು ಗಾಯಗೊಂಡಿದ್ದಾರೆ. ಈ ಘಟನೆಗೆ ನಿಖರವಾದ ಕಾರಣ ತಿಳಿದುಬಂದಿಲ್ಲ. ಈ ಮಾರ್ಗದಲ್ಲಿ ಹಾದು ಹೋಗುತ್ತಿದ್ದ ಬೇರೊಂದು ಹಡಗಿನ ಸಿಬ್ಬಂದಿ, ಭಾರತೀಯ ಸಿಬ್ಬಂದಿಯನ್ನು ರಕ್ಷಿಸಿದ್ದಾರೆ.

ಪರ್ಷಿಯನ್ ಕೊಲ್ಲಿ ಮತ್ತು ಓಮನ್ ಕೊಲ್ಲಿ ನಡುವಿನ ಪ್ರಮುಖ ಕಡಲ ಸಂಪರ್ಕ ಸ್ಥಳವಾದ ಹಾರ್ಮುಜ್ ಜಲಸಂಧಿಯಲ್ಲಿ ಇರಾನ್ ಮತ್ತು ಅಮೆರಿಕ ನಡುವಿನ ಉದ್ವಿಗ್ನತೆ ನಡುವೆಯೇ ಈ ಘಟನೆ ನಡೆದಿದೆ. ದುಬೈನಲ್ಲಿ ವೈದ್ಯಕೀಯ ಚಿಕಿತ್ಸೆ ಪಡೆಯುತ್ತಿರುವ ಸಿಬ್ಬಂದಿಯನ್ನು ದುಬೈನಲ್ಲಿರುವ ಭಾರತೀಯ ರಾಯಭಾರಿ ಕಚೇರಿ ಅಧಿಕಾರಿಗಳು ಭೇಟಿಯಾಗಿದ್ದಾರೆ.

ನಿಮ್ಹಾನ್ಸ್ ಆಸ್ಪತ್ರೆ ನಿರ್ಮಾಣದ ಹೆಸರಲ್ಲಿ ಎಂಎಲ್‌ಸಿ ಯತೀಂದ್ರ, ಅವರ ಪಟಾಲಂ ರೈತರನ್ನು ಬೀದಿಪಾಲು ಮಾಡಲು ಹೊರಟಿದೆ

- ಪ್ರಗತಿಪರ ಹೋರಾಟಗಾರ ಉಗ್ರನರಸಿಂಹೇಗೌಡ ವಾಗ್ದಾಳಿ
- ಸಿದ್ದರಾಮಯ್ಯರಿಗೆ ತಪ್ಪು ಮಾಹಿತಿ
- ಯತೀಂದ್ರ ಮೊದಲು ಹೀಗಿರಲಿಲ್ಲ; ಈಗ ಬದಲಾಗಿದ್ದಾರೆ

ಮೈಸೂರು, ಮೇ 9(ಜಿಎ)–ಗುಡುಮಾದನಹಳ್ಳಿಯಲ್ಲಿ ನಿಮ್ಹಾನ್ಸ್ ಆಸ್ಪತ್ರೆ ನಿರ್ಮಾಣ ಕುರಿತಂತೆ ಸಿಎಂಗೆ ತಪ್ಪು ಮಾಹಿತಿ ನೀಡಿ ದಿಕ್ಕು ತಪ್ಪಿಸಲಾಗಿದೆ. ಈ ಜಾಗ ನಿಮ್ಹಾನ್ಸ್ ಆಸ್ಪತ್ರೆ ನಿರ್ಮಾಣಕ್ಕೆ ಸೂಕ್ತವಲ್ಲ ಎಂದು ತಿಳಿದಿದ್ದರೂ ಸಹಾ ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಹಾಗೂ ಅವರ ಪಟಾಲಂ ಹಠಕ್ಕೆ ಬಿದ್ದು, ರೈತರನ್ನು ಬೀದಿಪಾಲು ಮಾಡಲು ಹೊರಟಿದೆ ಎಂದು ಪ್ರಗತಿಪರ ಹೋರಾಟಗಾರ ಉಗ್ರನರಸಿಂಹೇಗೌಡ ಕಿಡಿಕಾರಿದರು.


ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ದಲಿತ ಮುಖಂಡ ಶಂಭುಲಿಂಗಸ್ವಾಮಿ ಮಾತನಾಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಸ್ಥಳದಲ್ಲಿ ನಿಮಾನ್ಸ್ ಘಟಕ ನಿರ್ಮಾಣಕ್ಕೆ ಪಟ್ಟು ಹಿಡಿಯವುದರ ಹಿಂದೆ ಭೂ ಮಾಫಿಯಾ ಕೈವಾಡವಿದೆ. ಹೀಗಾಗಿ ಸಿಎಂ ಸಿದ್ದರಾಮಯ್ಯ ಈ ನಿರ್ಧಾರ ಕೈಬಿಡಬೇಕು. ದೇವನಹಳ್ಳಿ ಭೂಸ್ವಾಧೀನ ಪ್ರಕ್ರಿಯೆಗೆ ಕುರಿತಂತೆ ಕೈಗೊಂಡ ನಿರ್ಧಾರ ಇಲ್ಲಿಯೂ ತೆಗೆದುಕೊಳ್ಳಬೇಕಿದೆ ಎಂದರು.

ಈ ಹಿಂದೆ ಯತೀಂದ್ರ ಅವರು ಈ ರೀತಿ ಇರಲಿಲ್ಲ. ಆದರೆ, ಈಗ ಸಾಕಷ್ಟು ಬದಲಾಗಿದ್ದಾರೆ. ಅವರ ನಿರ್ಧಾರಗಳಲ್ಲಿ ಗೊಂದಲವಿದೆ. ಅಲ್ಲಿ ನಿಮ್ಹಾನ್ಸ್ ಆಸ್ಪತ್ರೆ ನಿರ್ಮಾಣ ಮಾಡಲು ಸೂಕ್ತ ಸ್ಥಳವಲ್ಲ ಎಂಬುದರ ಬಗ್ಗೆ ಅವರಿಗೆ ಅರಿವಿದ್ದರೂ ಹಠಕ್ಕೆ ಬಿದ್ದಂತೆ ಕಾಣುತ್ತಿದೆ. ಅದಕ್ಕೆ ತಕ್ಕಂತೆ ಜಿಲ್ಲಾಧಿಕಾರಿಗಳು ದನಿಗೂಡಿಸುತ್ತಿದ್ದಾರೆ. ಈ ಯೋಜನೆ ಕಳಶ ಪ್ರಾಯವಾಗಿದೆ ಆದರೆ, ಸ್ಥಳ ಕಳಂಕಪ್ರಾಯವಾಗಿದೆ ಎಂದರು ತಿಳಿಸಿದರು.

ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ಮಾತನಾಡಿ, ಗುಡುಮಾರನಹಳ್ಳಿಯ ಜಾಗ ಸದಾ ನೀರಿನಿಂದ ಕೂಡಿದ್ದು, ಇಲ್ಲಿ ಕಟ್ಟಡ ನಿರ್ಮಾಣ ಸೂಕ್ತವಲ್ಲ. ಜೊತೆಗೆ ಹಲವಾರು ದಶಕಗಳಿಂದ ರೈತರು ಇಲ್ಲಿ ಉಳುಮೆ ಮಾಡುತ್ತಿದ್ದು, ಇವರನ್ನು ಬೀದಿಪಾಲು ಮಾಡುವ ಕೆಲಸ ಸರಿಯಲ್ಲ. ಈ ಕುರಿತು ಸಿಎಂಗೆ ಮನವಿ ಸಲ್ಲಿಸಿದ್ದು, ಬೇರೆ ಜಾಗದಲ್ಲಿ ನಿರ್ಮಾಣ ಮಾಡುವಂತೆ ಕೋರಲಾಗುವುದು. ಜೊತೆಗೆ ಸ್ವತಃ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸುವಂತೆ ಮನವಿ ಮಾಡಲಾಗುವುದು ಎಂದರು.

ದಲಿತ ಮುಖಂಡ ಶಂಭುಲಿಂಗಸ್ವಾಮಿ ಮಾತನಾಡಿ, ಗುಡುಮಾದನಹಳ್ಳಿಯ ಈ ಸ್ಥಳವು ನೀರಿನಿಂದ ಕೂಡಿದೆ. ಅದು ಗೋಮಾಳ ಸರ್ಕಾರದ ಸಾಮ್ಯತೆಯಲ್ಲಿದೆ ಎಂದು ವಾದಿಸುವುದು ಸರಿಯಲ್ಲ. ಇಡೀ ಪರಿಸರವನ್ನು ನಾಶ ಮಾಡಬೇಕಾಗುತ್ತದೆ. ಪರಿಸರಕ್ಕೆ ಹಾನಿ ಮಾಡಬಾರದು, ಜಮೀನನ್ನು ರೈತರಿಗೆ ಮಂಜೂರು ಮಾಡಿ ಅಥವಾ ಗೋಮಾಳವಾಗಿ ಬಿಡಿ ಎಂದು ಆಗ್ರಹಿಸಿದರು.

ಪರಿಸರಕ್ಕಾಗಿ ನಾವು ಬಳಗದ ಬಾನು ಪ್ರಶಾಂತ್ ಮಾತನಾಡಿ, ಅಸ್ಪತ್ರೆ ನಿಯಮದ ಪ್ರಕಾರ ಶಬ್ದಮಾಲಿನ್ಯ ರಹಿತವಾಗಿರಬೇಕು. ಆದರೆ, ಇಲ್ಲಿ ಸಮೀಪದಲ್ಲಿಯೇ ವಿಮಾನ ನಿಲ್ದಾಣವಿದೆ. ಇದರಿಂದ ಶಬ್ದ ಪ್ರಮಾಣ ಹೆಚ್ಚಳವಾಗಿರುತ್ತದೆ. ಆದ್ದರಿಂದ ಈ ಸ್ಥಳ ಆಸ್ಪತ್ರೆ ನಿರ್ಮಾಣಕ್ಕೆ ಸೂಕ್ತವಲ್ಲ. ಅದರ ಬದಲು ಇಲ್ಲಿ ನೀರು ಪುನರ್ ಶುದ್ಧೀಕರಣ ಘಟಕ ನಿರ್ಮಾಣ ಮಾಡಬಹುದು ಅದು ನಗರಕ್ಕೆ ಅಗತ್ಯವೂ ಇದೆ. ಆದರೆ ಇದಕ್ಕೆ ಈ ಜಾಗ ವ್ಯತಿರಿಕ್ತವಾಗಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಹೊಸಕೋಟೆ ಬಸವರಾಜು, ಹೊಸೂರು ಕುಮಾರ್, ಪಿ.ಮರಂಕಯ್ಯ ಮತ್ತಿತರರಿದ್ದರು.

ಕೊಡಗಿನಲ್ಲಿ ಮಳೆ; ತಂಪಾಗಿಸಿದ ವಾತಾವರಣ



ಮಡಿಕೇರಿ, ಮೇ 9–ನಗರ ಮತ್ತು ನಾಪೋಕ್ಲುವಿನ ವ್ಯಾಪ್ತಿಯಲ್ಲಿ ಶನಿವಾರ ರಾತ್ರಿ ಉತ್ತಮ ಮಳೆಯಾಗಿ ಬಿಸಿಲಿನ ತಾಪದಿಂದಿದ್ದ ವಾತಾವರಣವನ್ನು ತಂಪಾಗಿಸಿದೆ.

ಬೆಳಗಿನಿಂದಲೂ ನಗರದಾದ್ಯಂತ ಮೋಡ ಕವಿದ ವಾತಾವರಣವಿತ್ತು ರಾತ್ರಿ 8 ಗಂಟೆಗೆ ಗಾಳಿ ಸಹಿತ ಆರಂಭವಾದ ಮಳೆ ಸುಮಾರು ಹೊತ್ತು ಸುರಿದು ಭೂಮಿಗೆ ತಂಪು ಮೂಡಿಸಿತು. ಸುಡು ಬಿಸಿಲಿನಿಂದ ಬಸವಳಿದಿದ್ದ ಜನರು ಕೂಡ ಮಳೆಯಿಂದ ನೆಮ್ಮದಿ ನಿಟ್ಟುಸಿರು ಬಿಡುವಂತಾಯಿತು.

ಏಕಾಏಕಿ ಮಳೆ ಸುರಿದ ಪರಿಣಾಮ ಜನರು ಅಂಗಡಿ ಮುಂಗಟ್ಟುಗಳ ಮುಂದೆ ಆಶ್ರಯ ಪಡೆದಿದ್ದರು.

ಮೂರ್ನಾಡಲ್ಲೂ ಮಳೆ: ಪಟ್ಟಣ ಸೇರಿದಂತೆ ಸುತ್ತ ಮುತ್ತ ಬಿರುಸಿನ ಮಳೆ ಸುರಿದು ಬಿಸಿಲಿನ ಬೇಗೆಯಿಂದ ಬಳಲುತ್ತಿರುವವರಿಗೆ ತಂಪಾಯಿತು.

ಪಟ್ಟಣದಲ್ಲಿ ಗಾಳಿ ಸಹಿತ ಸುರಿದ ಮಳೆಯಿಂದ ಜನಜೀವನ ಅಸ್ತವ್ಯಸ್ತವಾಯಿತು. ಸುಮಾರು ಅರ್ಧ ಗಂಟೆಗೂ ಹೆಚ್ಚು ಕಾಲ ಸುರಿದ ಮಳೆಯಿಂದಾಗಿ ಪಟ್ಟಣದಲ್ಲಿ ನೀರು ಉಕ್ಕಿಹರಿದು ವಾಹನ ಸಂಚಾರಕ್ಕೆ ಅಡಚಣೆ ಉಂಟಾಯಿತು.

ಮುಂಗಾರು ಬಗ್ಗೆ ಅಧಿಕಾರಿಗಳೊಂದಿಗೆ ಎಸ್‌ಪಿ ಸಭೆ



ಮಡಿಕೇರಿ, ಮೇ 9–ಕೊಡಗಿನಲ್ಲಿ ಮುಂಬರುವ ಮುಂಗಾರು ಕುರಿತು ಅಧಿಕಾರಿಗಳೊಂದಿಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿಶೇಷ ಸಭೆ ನಡೆಸಿದರು.

ಜಿಲ್ಲಾ ಪೊಲೀಸ್ ಆಡಳಿತ ಭವನದಲ್ಲಿ ಎಸ್.ಪಿ. ಬಿಂದುಮಣಿ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಪೊಲೀಸ್ ಅಧಿಕಾರಿಗಳು, ಅಗ್ನಿ ಶಾಮಕ ದಳದ ಅಧಿಕಾರಿಗಳು ಉಪಸ್ಥಿತರಿದ್ದರು. ಮುಂಗಾರಿನಲ್ಲಿ ಜಿಲ್ಲೆಯಲ್ಲಿ ಉಂಟಾಗಬಹುದಾದ ಸಂಭವನೀಯ ಭೂ ಕುಸಿತ, ನದಿ ಪ್ರವಾಹದಂತಹ ವಿಕೋಪದ ವೇಳೆ ಜನರ ಪ್ರಾಣ, ಆಸ್ತಿ ರಕ್ಷಿಸುವುದು, ಕ್ಲಿಷ್ಟ ಕಾಲದಲ್ಲಿ ಕ್ಷಿಪ್ರವಾಗಿ ಸ್ಪಂದಿಸುವ ಸಲುವಾಗಿ ಮತ್ತು ಇತರ ಇಲಾಖೆಗಳೊಡನೆ ಸಮನ್ವಯ ಸಾಧಿಸುವಂತೆ ಎಸ್.ಪಿ.ಸೂಚನೆ ನೀಡಿದರು. ತುರ್ತು ಸಂದರ್ಭ ಜೀವ ರಕ್ಷಣಾ ಸಾಮಗ್ರಿಗಳು, ವಾಹನಗಳು, ಸ್ವಯಂ ಸೇವಕರ ಸಹಕಾರ ಪಡೆಯುವುದು, ಬದಲಿ ರಸ್ತೆ ಮಾರ್ಗಗಳ ಗುರುತಿಸುವಿಕೆ ಬಗ್ಗೆ ಎಸ್ ಪಿ ಸಲಹೆ ಸೂಚನೆ ನೀಡಿದರು.

ಕಲಾ ವೈಭವ ಪ್ರತಿಭಾ ಪ್ರದರ್ಶನ ಕಾರ್ಯಕ್ರಮಕ್ಕೆ ಚಾಲನೆ



ಕಲಾ ವೈಭವ ಪ್ರತಿಭಾ ಪ್ರದರ್ಶನ ಕಾರ್ಯಕ್ರಮದಲ್ಲಿ ಡಾ. ಶ್ರೀಧರ್ ಹೆಗಡೆ ಮಾತನಾಡಿದರು.

ಮಡಿಕೇರಿ, ಮೇ 9–ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಕಾಲೇಜಿನಲ್ಲಿ ಕಲಾ ವೈಭವ ಪ್ರತಿಭಾ ಪ್ರದರ್ಶನ ಕಾರ್ಯಕ್ರಮಕ್ಕೆ ವೈಭವದ ಚಾಲನೆ ದೊರೆತಿದೆ. ಕಾಲೇಜಿನ ಪ್ರಾಂಶುಪಾಲ ಪ್ರೊ. ಮೇಜರ್ ಬಿ.ರಾಘವ ದೀಪ ಮಾತನಾಡಿ, ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನಕ್ಕೆ ಕಲೆ ವೇದಿಕೆಯಾಗಿದೆ. ಶಿಕ್ಷಣದ ಜೊತೆಯಲ್ಲಿ ವಿದ್ಯಾರ್ಥಿಗಳ ಸರ್ವಾಂಗೀಣ ಅಭಿವೃದ್ಧಿಗೆ ಕಾಲೇಜು ಶ್ರಮಿಸುತ್ತಿದ್ದು, ಕಲಾ ವೈಭವ ಇದರ ಒಂದು ಭಾಗವಾಗಿದೆ. ಇಂತಹ ವೇದಿಕೆಗಳನ್ನು ವಿದ್ಯಾರ್ಥಿಗಳು ಸದುಪಯೋಗಪಡಿಸಿಕೊಳ್ಳಬೇಕು ಎಂದರು.

ವಿದ್ಯಾರ್ಥಿ ಸಂಘದ ಸಂಚಾಲಕ ಡಾ. ಶ್ರೀಧರ್ ಹೆಗಡೆ ಮಾತನಾಡಿ, ಕಲಾ ವೈಭವ ಶೀರ್ಷಿಕೆ ಅಡಿಯಲ್ಲಿ ಕಾರ್ಯಕ್ರಮ ಹಮ್ಮಿಕೊಂಡಿರುವುದು ಹೆಮ್ಮೆಯ ವಿಚಾರವಾಗಿದ್ದು, ಜಿಲ್ಲೆಗೆ ಮಾದರಿಯಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಪ್ರಾಣಿಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ.ಕೃಷ್ಣ, ಇಂಗ್ಲಿಷ್ ವಿಭಾಗದ ಮುಖ್ಯಸ್ಥೆ ಡಾ. ನಯನ ಕಶ್ಯಪ್ ಮಾತನಾಡಿದರು. ಬಳಿಕ ಸಮೂಹ ನೃತ್ಯ, ಹಾಡುಗಾರಿಕೆ, ನಾಟಕ, ಏಕಪಾತ್ರಾಭಿನಯ, ರಂಗೋಲಿ, ಫಯರ್ ಲೆಸ್ ಕುಕ್ಕಿಂಗ್, ಚರ್ಚಾ ಕೂಟ ಸಹಿತ ವಿವಿಧ ಕಲೆಗಳ ಪ್ರದರ್ಶನ ನಡೆಯಿತು. ಜಿಲ್ಲೆಯ ವಿವಿಧ ಕಾಲೇಜುಗಳನ್ನು ಪ್ರತಿನಿಧಿಸುವ ವಿದ್ಯಾರ್ಥಿ ವಿದ್ಯಾರ್ಥಿನಿಯರು ಕಲಾ ವೈಭವದಲ್ಲಿ ಪಾಲ್ಗೊಂಡಿದ್ದರು.

ವಾಣಿಜ್ಯ ವಿಭಾಗದ ಮುಖ್ಯಸ್ಥ ಪ್ರೊ. ತಿಪ್ಪೇಸ್ವಾಮಿ, ಸಂಚಾಲಕಿ ಡಾ.ಎ.ಎನ್. ಗಾಯತ್ರಿ, ವಿದ್ಯಾರ್ಥಿ ಸಂಘಟನೆ ಸಂಚಾಲಕಿ ಟಿ.ವಿ.ವರ್ಷ ಮತ್ತಿತರರಿದ್ದರು.

ಶಾಸಕರಿಂದ ಗಾಯಾಳುವಿಗೆ ಚಿಕಿತ್ಸೆ ನೀಡಿ ವೈದ್ಯ ಧರ್ಮ ಪಾಲನೆ



ಮಡಿಕೇರಿ, ಮೇ 9–ಅಪಘಾತದಲ್ಲಿ ಗಾಯಗೊಂಡ ವ್ಯಕ್ತಿಗೆ ಶಾಸಕ ಡಾ.ಮಂತರ್‌ಗೌಡ ಅವರು ಪ್ರಾಥಮಿಕ ಚಿಕಿತ್ಸೆ ನೀಡುವ ಮೂಲಕ ತಮ್ಮ ವೈದ್ಯ ಧರ್ಮ ಪಾಲಿಸಿದ್ದಾರೆ.

ಕುಶಾಲನಗರ–ಸುಂಟಿಕೊಪ್ಪ ನಡುವಿನ ಆನೆಕಾಡು ಬಳಿಯ ಕಣಿವೆ ಗ್ರಾಮದಲ್ಲಿ ಲಾರಿ–ಬೈಕ್ ನಡುವೆ ಸಂಭವಿಸಿದ್ದ ಅಪಘಾತದಲ್ಲಿ ಸವಾರ ರಸ್ತೆಗೆ ಬಿದ್ದ ಪರಿಣಾಮ ಸವಾರನ ಕೈ ಹಾಗೂ ಕಾಲುಗಳಿಗೆ ಗಾಯಗಳಾಗಿತ್ತು. ರಾಂಪುರ ಗ್ರಾಮದಲ್ಲಿ ನೂತನ ಬಸ್ ಸ್ಟಾಪ್ ಕಾಮಗಾರಿ ನಡೆಯುತ್ತಿದ್ದ ಹಿನ್ನೆಲೆಯಲ್ಲಿ ಅತ್ತ ಕಡೆಗೆ ತೆರಳುತ್ತಿದ್ದ ಶಾಸಕ ಡಾ.ಮಂತರ್ ಗೌಡ, ತಕ್ಷಣವೇ ತಮ್ಮ ವಾಹನ ನಿಲ್ಲಿಸಿ ವಾಹನದಲ್ಲಿದ್ದ ಫಸ್ಟ್ ಏಯ್ಡ್ ಕಿಟ್ ಬಳಸಿ ಗಾಯಗೊಂಡಿದ್ದ ಬೈಕ್ ಸವಾರ ಕಂಬಿಬಾಣೆ ನಿವಾಸಿ ದಿನೇಶ್(42)ರ ಗಾಯಗಳಿಗೆ ಬ್ಯಾಂಡೇಜ್ ಸುತ್ತಿ ಪ್ರಥಮ ಚಿಕಿತ್ಸೆ ಮೂಲಕ ಉಪಚರಿಸಿದರು.

ಬಳಿಕ ಬೇರೊಂದು ವಾಹನದಲ್ಲಿ ಗಾಯಾಳುವನ್ನು ಕುಶಾಲನಗರ ಸರಕಾರಿ ಆಸ್ಪತ್ರೆಗೆ ಕಳುಹಿಸಿ, ಅಲ್ಲಿ ಪ್ರಾಥಮಿಕ ಚಿಕಿತ್ಸೆ ಕೊಡಿಸಿ, ಹೆಚ್ಚಿನ ಚಿಕಿತ್ಸೆಗಾಗಿ ಜಿಲ್ಲಾಸ್ಪತ್ರೆಗೆ ಸ್ಥಳಾಂತರಿಸಲಾಗಿದೆ. ಶಾಸಕ ಡಾ. ಮಂತರ್ ಗೌಡ ಅವರ ಕಾಳಜಿಗೆ ಸಾರ್ವಜನಿಕರು ಮೆಚ್ಚುಗೆ ವ್ಯಕ್ತಪಡಿಸಿದರು. ಕುಶಾಲನಗರ ಸಂಚಾರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹೆದ್ದಾರಿ ಬದಿಯಲ್ಲಿ ಹುಲಿ ಪ್ರತ್ಯಕ್ಷ

ಮಡಿಕೇರಿ: ಗೋಣಿಕೊಪ್ಪ–ಹಾತೂರು ರಸ್ತೆಯಲ್ಲಿ ಹುಲಿ ಕಾಣಿಸಿಕೊಂಡು ಪ್ರಯಾಣಿಕರಲ್ಲಿ ಆತಂಕ ಮೂಡಿಸಿದೆ.

ಹೆದ್ದಾರಿ ಬದಿಯಲ್ಲಿಯೇ ಬೃಹತ್ ಹುಲಿ ಪ್ರತ್ಯಕ್ಷವಾಗಿದ್ದು, ವಾಹನದಲ್ಲಿ ತೆರಳುತ್ತಿದ್ದ ಪ್ರಯಾಣಿಕರು ಇದನ್ನು ವೀಡಿಯೊ ಚಿತ್ರೀಕರಣ ಮಾಡಿ ಅದನ್ನು ಅರಣ್ಯ ಇಲಾಖೆಗೆ ರವಾನಿಸಿದ್ದರು. ತಕ್ಷಣವೇ ಸ್ಥಳಕ್ಕಾಗಮಿಸಿದ ಅರಣ್ಯಾಧಿಕಾರಿಗಳು ಮತ್ತು ಸಿಬ್ಬಂದಿಗಳು ಹುಲಿ ಇರುವಿಕೆಯನ್ನು ದೃಢಪಡಿಸಿದರು. ಶನಿವಾರ ಬೆಳಗಿನಿಂದ ಅರಣ್ಯ ಇಲಾಖೆ ಅಧಿಕಾರಿಗಳು ಕೂಂಬಿಂಗ್ ಕಾರ್ಯಾಚರಣೆ ನಡೆಸಿದರಾದರೂ ಎಲ್ಲಿಯೂ ಹುಲಿ ಕಂಡು ಬರಲಿಲ್ಲ.

ರಾಷ್ಟ್ರಮಟ್ಟದ ಸೆಸ್ಟೋಬಾಲ್ ಕ್ರೀಡೆಯಲ್ಲಿ ಕರ್ನಾಟಕ ಚಾಂಪಿಯನ್



ಮಡಿಕೇರಿ, ಮೇ 9–ಕೊಡಗಿನ ಕ್ರೀಡಾಪಟುಗಳನ್ನು ಒಳಗೊಂಡ ಕರ್ನಾಟಕ ತಂಡ ರಾಷ್ಟ್ರಮಟ್ಟದ ಸೆಸ್ಟೋಬಾಲ್ ಕ್ರೀಡೆಯಲ್ಲಿ ಇದೇ ಮೊದಲ ಬಾರಿಗೆ ಚಿನ್ನದ ಪದಕ ಗೆದ್ದು ಚಾಂಪಿಯನ್ ಆಗಿ ಹೊರ ಹೊಮ್ಮಿದೆ.

ತೆಲಂಗಾಣದಲ್ಲಿ ನಡೆದ ಕ್ರೀಡಾಕೂಟದಲ್ಲಿ ಕರ್ನಾಟಕ ತಂಡ ಕ್ವಾರ್ಟರ್ ಫೈನಲ್‌ನಲ್ಲಿ ವಿದರ್ಭ ತಂಡವನ್ನು 21–18ರ ಅಂತರದಲ್ಲಿ ಮಣಿಸಿತು. ಸೆಮಿಫೈನಲ್‌ನಲ್ಲಿ 18–40 ಭಾರೀ ಅಂತರದಿಂದ ಗೆಲುವು ದಾಖಲಿಸಿತು. ನಂತರ ನಡೆದ ಅಂತಿಮ ಪಂದ್ಯದಲ್ಲಿ ಪಂಜಾಬ್ ವಿರುದ್ಧ 58–30 ಅಂತರದಲ್ಲಿ ಜಯಗಳಿಸುವ ಮೂಲಕ ಕರ್ನಾಟಕ ಬಾಲಕರ ತಂಡ 4ನೇ ಸಬ್ ಜೂನಿಯರ್ ಪಂದ್ಯಾಟದ ಚಾಂಪಿಯನ್ ಪಟ್ಟ ಮುಡಿಗೇರಿಸಿಕೊಂಡಿತು.

ಬಾಲಕಿಯರ ತಂಡ ಮೊದಲಿಗೆ ಕೇರಳದ ವಿರುದ್ಧ ಎಡವಿದರೂ ನಂತರದಲ್ಲಿ ತೆಲಂಗಾಣ ತಂಡದ ಮೇಲೆ ಸಮಬಲವನ್ನು ಸಾಧಿಸಿತು. ಅಸ್ಸಾಂ, ಚಂಡೀಗಡ್ ತಂಡದ ಮೇಲೆ ಅತೀ ಹೆಚ್ಚಿನ ಅಂಕ ಪಡೆದು ಸೆಮಿಫೈನಲ್ ಪಂದ್ಯಾಟಕ್ಕೆ ಆಯ್ಕೆಯಾಗಿ ಬಲಿಷ್ಠ ತಮಿಳುನಾಡು ತಂಡವನ್ನು ಮಣಿಸಿತು.

ಅಂತಿಮ ಪಂದ್ಯಾಟದಲ್ಲಿ ಆಂಧ್ರಪ್ರದೇಶ ತಂಡವನ್ನು ಸೋಲಿಸಿ 4ನೇ ಸಬ್ ಜೂನಿಯರ್ ಪಂದ್ಯಾಟದ ಚಾಂಪಿಯನ್ ಆಗಿ ಹೊರ ಹೊಮ್ಮಿತು.

ಚಾ.ನಗರ ಜಿಲ್ಲೆಯಲ್ಲಿ ಮಾವು, ಹಲಸು ಇಳುವರಿ ಕುಂಠಿತ, ಬೇಡಿಕೆ ಹೆಚ್ಚಳ

ಹಣ್ಣುಗಳನ್ನು ಖರೀದಿಸಲು ಮುಗಿಬಿದ್ದ ಗ್ರಾಹಕರು





ತಡವಾಗಿ ಮಾರುಕಟ್ಟೆಗೆ ಲಗ್ಗೆಯಿಟ್ಟ ಮಾವು ಹಾಗೂ ಹಲಸಿನ ಹಣ್ಣುಗಳು.

ಚಾಮರಾಜನಗರ, ಮೇ 9– ಹಣ್ಣುಗಳ ರಾಜ ಮಾವು ಹಾಗೂ ಹಲಸಿನ ಹಣ್ಣುಗಳು ಈ ಬಾರಿ ತಡವಾಗಿಯಾದರೂ ಗಡಿ ಜಿಲ್ಲೆಯ ಮಾರುಕಟ್ಟೆಗೆ ಲಗ್ಗೆ ಇಟ್ಟಿದ್ದು, ಇಳುವರಿ ಕುಂಠಿತವಾಗಿರುವುದರಿಂದ ಬೇಡಿಕೆ ಹೆಚ್ಚಾಗಿದೆ. ಆಗಿದ್ದರೂ ಈ ಹಣ್ಣುಗಳನ್ನು ಖರೀದಿಸಲು ಗ್ರಾಹಕರು ಮುಂದಾಗಿದ್ದಾರೆ.

ಜಿಲ್ಲೆಯಲ್ಲಿ ಕಳೆದ ವರ್ಷ ಸೂಕ್ತ ಸಮಯದಲ್ಲಿ ಮಳೆಯಾಗದೆ ಇದುದ್ದರಿಂದ ಈ ಭಾರಿ ಮಾವು ಹಾಗೂ ಹಲಸಿನ ಇಳುವರಿ ಕುಂಠಿತವಾಗಿದೆ. ಹೀಗಾಗಿ, ಫೆಬ್ರವರಿ, ಮಾರ್ಚ್ ಮಾಹೆಯಲ್ಲಿ ಬರಬೇಕಿದ್ದ ಈ ಹಣ್ಣುಗಳು ಏಪ್ರಿಲ್ ಕೊನೆಯ ವಾರ ಹಾಗೂ ಮೇ ತಿಂಗಳಿನಲ್ಲಿ ಮಾರುಕಟ್ಟೆಗೆ ಲಗ್ಗೆ ಇಟ್ಟಿದೆ.

ಜನರ ಆಕರ್ಷಣೆಯ ಮಾವು: ನಗರದ ಮಾರುಕಟ್ಟೆಯಲ್ಲಿ ಪ್ರಮುಖವಾಗಿ ಬಾದಾಮಿ, ರಸಪುರಿ, ತೋತಾಪುರಿ, ಸಿಂಧೂರ ಹಾಗೂ ನಾನಾ ತಳಿಯ ಮಾವಿನ ಹಣ್ಣುಗಳು ಮಾರುಕಟ್ಟೆ ಪ್ರವೇಶಿಸಿದ್ದು, ಜನರನ್ನು ಆಕರ್ಷಿಸುತ್ತಿದೆ.

ಆದರೆ ಮಾವಿನ ಋತು ಮುಗಿಯುವ ಸಮಯದಲ್ಲಿ ಹಣ್ಣುಗಳು ಮಾರುಕಟ್ಟೆಗೆ ಬಂದಿರುವುದರಿಂದ ಮತ್ತು ಇಳುವರಿ ಕುಂಠಿತವಾಗಿರುವುದರಿಂದ ಬೇಡಿಕೆಯಷ್ಟು ಹಣ್ಣುಗಳು ದೊರೆಯುತ್ತಿಲ್ಲ. ಇದರಿಂದ ಮಾವಿನ ಹಣ್ಣುಗಳ ಬೆಲೆಯಲ್ಲೂ ಭಾರಿ ಪ್ರಮಾಣದ ಏರಿಕೆ ಕಂಡಿದೆ.

ಗ್ರಾಹಕರಿಗೆ ಬೆಲೆ ಏರಿಕೆ ಬಿಸಿ ತಟ್ಟಿದರೂ ಮಾವಿನ ಹಣ್ಣುಗಳನ್ನು ಖರೀದಿಸಲು ಮುಂದಾಗುತ್ತಿದ್ದಾರೆ. ಮುಂದಿನ ವಾರಗಳಲ್ಲಿ ಮತ್ತಷ್ಟು ಮಾವಿನ ತಳಿಗಳು ಮಾರುಕಟ್ಟೆಗೆ ಲಗ್ಗೆ ಇಡಲಿದ್ದು, ಮಾವಿನ ಹಣ್ಣಿನ ಬೇಡಿಕೆ ಮತ್ತಷ್ಟು ಹೆಚ್ಚಲಿದೆ ಎಂದು ಮಾವು ಮಾರಾಟಗಾರರು ಮಾಹಿತಿ ನೀಡಿದರು.

ಮಾವಿನ ಬೆಲೆಯಲ್ಲಿ ಏರಿಕೆ: ಸೂಕ್ತ ಸಮಯಕ್ಕೆ ಮಳೆಯಾಗದ ಕಾರಣಕ್ಕೆ ಮಾವು ಮಾರುಕಟ್ಟೆಗೆ ತಡವಾಗಿ ಬಂದಿದೆ. ಹೀಗಾಗಿ ಬೆಲೆಯಲ್ಲಿ ಏರಿಕೆ ಕಂಡಿದ್ದು, ಒಂದು ಕೆ.ಜಿ ರಸಪೂರಿ ಮಾವಿನ ಹಣ್ಣಿಗೆ 160ರೂ., ಬಾದಾಮಿ 200ರೂ., ಗಿಣಿ ಮಾವು ಅಥವಾ ತೋತಾಪುರಿ 100ರೂ., ಸಿಂಧೂರ 60ರೂ.ಗೆ ಮಾರಾಟ ಮಾಡಲಾಗುತ್ತಿದೆ.

ಹಲಸಿನ ಮಾರಾಟವೂ ಜೋರು: ಜಿಲ್ಲೆಯಲ್ಲಿ ಹಲಸಿನ ಹಣ್ಣಿನ ಸೀಸನ್ ಆರಂಭವಾಗಿದ್ದು, ಕಳೆದ ವರ್ಷ ಮಳೆ ಕೊರತೆಯ ಕಾರಣದಿಂದ ಹಲಸಿನ ಋತು ಆರಂಭ ವಿಳಂಬವಾಗಿದೆ. ಕಳೆದ 20 ದಿನಗಳಿಂದ ಜಿಲ್ಲೆಯ ಹಲವೆಡೆ ಕೊಂಚ ಮಳೆ ಆಗುತ್ತಿರುವುದರಿಂದ ಮರಗಳಲ್ಲಿ ಬಿಟ್ಟಿದ್ದ ಹಲಸಿನ ಕಾಯಿಗಳು ಹಣ್ಣಾಗುವುದಕ್ಕೆ ಆರಂಭವಾಗಿದ್ದು, ವ್ಯಾಪಾರ ಜೋರಾಗಿದೆ.

ಚಾಮರಾಜನಗರದ ದೊಡ್ಡರಾಯಪೇಟೆ ಕ್ರಾಸ್, ಚಂದಕವಾಡಿ, ಬಿಳಿಗಿರಿ ರಂಗನಬೆಟ್ಟ ಸೇರಿದಂತೆ ವಿವಿಧ ಕಡೆಗಳಲ್ಲಿ ಎರಡು ವಾರಗಳ ಹಿಂದಿನಿಂದಲೇ ಹಲಸಿನ ಹಣ್ಣಿನ ಮಾರಾಟ ಆರಂಭವಾಗಿದೆ. ಆದರೆ, ಹೆಚ್ಚಿನ ಪ್ರಮಾಣದಲ್ಲಿ ಹಣ್ಣುಗಳು ಬರುತ್ತಿರಲಿಲ್ಲ. ಕೆಲವು ದಿನಗಳಿಂದ ಹೆಚ್ಚೆಚ್ಚು ಹಣ್ಣುಗಳು ಲಭ್ಯವಾಗುತ್ತಿದ್ದು, ಮಾರಾಟ ಬಿರುಸುಗೊಂಡಿದೆ.

ಎರಡು ವಾರಗಳ ಹಿಂದೆ ಕೆಲವು ಕಡೆಗಳಲ್ಲಿ ಒಂದು ತೊಳೆ ಹಲಸಿನ ಹಣ್ಣಿಗೆ 5ರೂ. ಬೆಲೆ ಇತ್ತು. ಸದ್ಯ ಹಣ್ಣಿನ ಆವಕ ಹೆಚ್ಚಳವಾಗಿರುವುದರಿಂದ ತೊಳೆಗೆ 6ರೂ. ಇದೆ. ಕೆಲವು ವ್ಯಾಪಾರಿಗಳು ಹಣ್ಣಿನಿಂದ ತೊಳೆ ಬಿಡಿಸಿ ಮಾರಾಟ ಮಾಡಿದರೆ, ಇನ್ನೂ ಕೆಲವರು, 10ರಿಂದ 12 ತೊಳೆಗಳಿರುವ ಹಣ್ಣಿನ ತುಂಡನ್ನೇ ಕೊಡುತ್ತಿದ್ದಾರೆ. ಇಂತಹ ಒಂದು ತುಂಡಿಗೆ 20ರೂ. ವರೆಗೆ ಧಾರಣೆ ಇದೆ. ಇನ್ನೂ ಇಡೀ ಹಲಸಿನ ಹಣ್ಣಿನ ಗಾತ್ರಕ್ಕೆ ಅನುಸಾರವಾಗಿ ಬೆಲೆ ನಿಗದಿ ಮಾಡಲಾಗಿದೆ.

ಒಟ್ಟಾರೆ ಗಡಿ ಜಿಲ್ಲೆಯ ಮಾರುಕಟ್ಟೆಯಲ್ಲಿ ಹಣ್ಣುಗಳ ರಾಜರಾದ ಮಾವು ಮತ್ತು ಹಲಸು ಲಗ್ಗೆ ಇಟ್ಟು ದರ್ಬಾರು ಶುರು ಮಾಡಿದ್ದು, ಹಣ್ಣುಗಳನ್ನು ಕೊಳ್ಳಲು ಗ್ರಾಹಕರು ಮುಂದಾಗಿದ್ದಾರೆ.

ಆರಕ್ಷಕರ ಮಕ್ಕಳ ಬೇಸಿಗೆ ಶಿಬಿರಕ್ಕೆ ಚಾಲನೆ



ಚಾಮರಾಜನಗರ, ಮೇ 9– ಜಿಲ್ಲಾ ಪೊಲೀಸ್ ಇಲಾಖೆಯ ವತಿಯಿಂದ ಪೊಲೀಸ್ ಕಲ್ಯಾಣ ಕಾರ್ಯಕ್ರಮದಡಿ ಆಯೋಜಿಸಲಾದ "ಆರಕ್ಷಕರ ಮಕ್ಕಳ ಬೇಸಿಗೆ ಶಿಬಿರ–2026"ಕ್ಕೆ ಡಿಎಆರ್ ಕೇಂದ್ರ ಸ್ಥಾನ ಆವರಣದ ಪೊಲೀಸ್ ಭವನದಲ್ಲಿ ಚಾಲನೆ ನೀಡಲಾಯಿತು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮುತ್ತುರಾಜ್ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಮಕ್ಕಳು ಹೆಚ್ಚು ಪ್ರೋತ್ಸಾಹದಾಯಕ ಚಟುವಟಿಕೆಗಳಲ್ಲಿ ಭಾಗವಹಿಸಿದರೆ ಅವರ ಜ್ಞಾನ ಮತ್ತು ಸಾಮರ್ಥ್ಯ ವೃದ್ಧಿಯಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಮಕ್ಕಳು ಪ್ರತಿಯೊಂದು ಕ್ಷೇತ್ರದಲ್ಲೂ ಆಸಕ್ತಿ ವಹಿಸಿ ತಮ್ಮ ಪ್ರತಿಭೆಯನ್ನು ಬೆಳಗಿಸಬೇಕು. ಶಿಬಿರಗಳು ಮಕ್ಕಳ ಆತ್ಮವಿಶ್ವಾಸ ಮತ್ತು ಕೌಶಲ್ಯ ಅಭಿವೃದ್ಧಿಗೆ ಸಹಕಾರಿಯಾಗುತ್ತವೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಪೊಲೀಸ್ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿ ಹಾಗೂ ಆರಕ್ಷಕರ ಮಕ್ಕಳು ಭಾಗವಹಿಸಿದ್ದರು.

ಡಾ.ಇಂಪು ಬೆಸ್ಟ್ ಔಟ್ ಗೋಯಿಂಗ್ ಸ್ಟೂಡೆಂಟ್



ಗುಂಡ್ಲುಪೇಟೆ, ಮೇ 9– ತಾಲೂಕಿನ ಕರಕಲ ಮಾದಹಳ್ಳಿ ಗ್ರಾಮದ ನಿವಾಸಿ ಹಾಗೂ ಜೆ ಎಸ್ ಎಸ್ ಪ್ರೌಢಶಾಲೆ ಶಿವಪುರ ಇಲ್ಲಿನ ಮುಖ್ಯ ಶಿಕ್ಷಕ ಕೆ.ಸಿ. ವಿಶ್ವೇಶ್ವರಯ್ಯ ಮತ್ತು ಆಶಾ ಅವರ ಪುತ್ರಿ ಡಾ.ಇಂಪು.ವಿ ಅವರು ಆದಿ ಚುಂಚನಗಿರಿ ಯೂನಿವರ್ಸಿಟಿಯ ಎಂಬಿಬಿಎಸ್‌ನಲ್ಲಿ ಬೆಸ್ಟ್ ಔಟ್ ಗೋಯಿಂಗ್ ಸ್ಟೂಡೆಂಟ್ ಪ್ರಶಸ್ತಿ ಪಡೆಯುವುದರೊಂದಿಗೆ ಪ್ರಥಮ ಸ್ಥಾನವನ್ನು ಪಡೆದು ಎಂಬಿ ಬಿಎಸ್ ಪದವಿಯನ್ನು ಪಡೆದಿರುತ್ತಾರೆ.

ಹೊಂಗನೂರಿನಲ್ಲಿ ವ್ಯಕ್ತಿಗೆ ಚಾಕು ಇರಿತ

ಚಾಮರಾಜನಗರ: ಹಳೆ ದ್ವೇಷದ ಹಿನ್ನೆಲೆಯಲ್ಲಿ ವ್ಯಕ್ತಿಯೊಬ್ಬರಿಗೆ ಚಾಕುವಿನಿಂದ ಇರಿದಿರುವ ಘಟನೆ ತಾಲೂಕಿನ ಹೊಂಗನೂರು ಗ್ರಾಮದಲ್ಲಿ ನಡೆದಿದೆ.

ಗ್ರಾಮದ ನಿವಾಸಿ ಮಹದೇವಯ್ಯ(54) ಹಲ್ಲೆಯಿಂದ ತೀವ್ರ ಗಾಯಗೊಂಡ ವ್ಯಕ್ತಿ. ಅದೇ ಗ್ರಾಮದ ಮಹದೇವಸ್ವಾಮಿ ಮತ್ತು ಈತನ ಸಂಬಂಧಿ ಸಿದ್ದರಾಜು ಹಲ್ಲೆ ಮಾಡಿದ್ದು, ಇವರ ವಿರುದ್ಧ ಸಂತೇಮರ ಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಬ್ ಇನ್ಸ್‌ಪೆಕ್ಟರ್ ಸಾಗರ್ ಕಾರ್ಯಾಚರಣೆ ನಡೆಸಿ, ಆರೋಪಿ ಸಿದ್ದರಾಜು ಅನ್ನು ಬಂಧಿಸಿದ್ದು, ನಾಪತ್ತೆಯಾಗಿರುವ ಮತ್ತೊಬ್ಬ ಆರೋಪಿ ಮಹದೇವಸ್ವಾಮಿಗಾಗಿ ಶೋಧ ಮುಂದುವರಿಸಿದ್ದಾರೆ.

ಹೊಂಗನೂರು ಗ್ರಾಮದ ಮಹದೇವಯ್ಯ ಅವರನ್ನು ಅದೇ ಗ್ರಾಮದ ಸಿದ್ದರಾಜು ಎಂಬಾತ ಕೊಲೆ ಮಾಡುವ ದುರುದ್ದೇಶದಿಂದಲೇ ಕುಕಲ್ಲು ವ್ಯವಹಾರ ಮಾತಾಡೋಣ ಬಾ ಎಂದು ಗ್ರಾಮದ ಹೊರವಲಯದ ನಿರ್ಜನ ಪ್ರದೇಶಕ್ಕೆ ಕರೆದುಕೊಂಡು ಹೋಗಿದ್ದಾನೆ. ಈ ವೇಳೆ ಎದುರಿಗೆ ಬೈಕ್‌ನಲ್ಲಿ ಬಂದ ಮಹದೇವಸ್ವಾಮಿ ಏಕಾಏಕಿ ಜಗಳ ತೆಗೆದು ಮಹದೇವಯ್ಯ ಅವರ ಕಣ್ಣಿಗೆ ಖಾರದ ಪುಡಿಯನ್ನು ಎರಚಿ, ಜೊತೆಯಲ್ಲಿ ತಂದಿದ್ದ ಚೂರಿಯಿಂದ ಮುಖ ಹಾಗೂ ಕುತ್ತಿಗೆ ಭಾಗಕ್ಕೆ ಇರಿದು ಪರಾರಿಯಾಗಿದ್ದಾನೆ. ಈ ಘಟನೆಯನ್ನು ಸ್ಥಳದಲ್ಲಿಯೇ ಇದ್ದ ಸಿದ್ದರಾಜು ನೋಡುತ್ತಾ ನಿಂತಿದ್ದ ಎಂದು ಹಲ್ಲೆಗೊಳಗಾದ ಮಹದೇವಯ್ಯ ದೂರಿನಲ್ಲಿ ತಿಳಿಸಿದ್ದಾರೆ.

ತಕ್ಷಣ ಗ್ರಾಮಕ್ಕೆ ಬಂದು ಅಲ್ಲಿಂದ ನೇರವಾಗಿ ಸಿಮ್ಸ್‌ಗೆ ದಾಖಲಾಗಿದ್ದಾನೆ. ನಂತರ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಹೆಚ್.ಸಿ.ಗುರುಲಿಂಗಪ್ಪ ನಿಧನ

ಚಾಮರಾಜನಗರ, ಮೇ 9– ತಾಲೂಕಿನ ಹರವೆ ಗ್ರಾಮದ ನಿವಾಸಿ, ಪ್ರಾಥಮಿಕ ಕೃಷಿಪತ್ತಿನ ಸಹಕಾರ ಸಂಘದ ಮಾಜಿ ಅಧ್ಯಕ್ಷ ಕರಿಕಲ್ಲು ಹೆಚ್.ಸಿ.ಗುರುಲಿಂಗಪ್ಪ (95) ಶುಕ್ರವಾರ ಸಂಜೆ ನಿಧನರಾದರು. ಮೃತರು ಇಬ್ಬರು ಪುತ್ರರು, ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಶನಿವಾರ ಮಧ್ಯಾಹ್ನ ಸ್ವಗ್ರಾಮದ ತೋಟದ ಜಮೀನಿನಲ್ಲಿ ನೆರವೇರಿತು.

ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ



ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಹೆಚ್.ಟಿ.ಮಂಜು ಭೂಮಿಪೂಜೆ ನೆರವೇರಿಸಿದರು.

ಕೆಆರ್.ಪೇಟೆ: ತಾಲೂಕಿನ ಕಿಕ್ಕೇರಿ ಹೋಬಳಿಯ ವಿವಿಧ ಗ್ರಾಮಗಳಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಹೆಚ್.ಟಿ.ಮಂಜು ಭೂಮಿ ಪೂಜೆ ನೆರವೇರಿಸಿದರು.

ಕಿಕ್ಕೇರಿ ಹೋಬಳಿಯ ವಡಕಹಳ್ಳಿ, ಐನೋರಹಳ್ಳಿ, ದೇವರಹಳ್ಳಿ, ಕಡೆಹೆಮ್ಮಿಗೆ, ಯಲಾದಹಳ್ಳಿ ಗ್ರಾಮಗಳಲ್ಲಿ ಕೆಆರ್‌ಐಡಿಎಲ್ ವತಿಯಿಂದ ರಸ್ತೆ ಅಭಿವೃದ್ಧಿ ಕಾಮಗಾರಿ ಹಾಗೂ ಲೋಕೋಪಯೋಗಿ ಇಲಾಖೆಯಿಂದ ಐಕನಹಳ್ಳಿ ಕೊಪ್ಪಲು ತೋಪೇಗೌಡ ವೃತ್ತದಿಂದ ಕಾಂತರಾಜಪುರ ಮಾರ್ಗದ ರಸ್ತೆ ಹಾಗೂ ಊಗಿನಹಳ್ಳಿ ಗೇಟ್‌ನಿಂದ ಮಾದಾಪುರ ಮಾರ್ಗದ ಮುಖ್ಯ ರಸ್ತೆಯ ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಗುತ್ತಿಗೆದಾರರು ಗುಣಮಟ್ಟದ ಕಾಮಗಾರಿ ನಿರ್ವಹಣೆ ಮಾಡಬೇಕು. ಅಧಿಕಾರಿಗಳು ಕಾಮಗಾರಿ ನಡೆಯುವ ವೇಳೆ ಉಪಸ್ಥಿತರಿದ್ದು ಕಾಮಗಾರಿಯ ಗುಣಮಟ್ಟ ನೋಡಿಕೊಳ್ಳಬೇಕು ಎಂದು ಸೂಚಿಸಿದರು.

ಸರ್ಕಾರ ಕೊಡುವ ಅಲ್ಪ ಸ್ವಲ್ಪ ಅನುದಾನದಲ್ಲಿ ತೀರಾ ಅಗತ್ಯ ಇರುವ ಗ್ರಾಮಗಳಿಗೆ ಅನುದಾನವನ್ನು ಹಂಚಿಕೆ ಮಾಡಿ ರಸ್ತೆ ಅಭಿವೃದ್ಧಿಗೆ ಪ್ರಥಮ ಆದ್ಯತೆ ನೀಡಿ ಕೆಲಸ ಮಾಡುತ್ತಿದ್ದೇನೆ. ಹಂತ ಹಂತವಾಗಿ ತಾಲೂಕಿನ ಎಲ್ಲಾ ಗ್ರಾಮಗಳ ರಸ್ತೆ ಅಭಿವೃದ್ಧಿಗೆ ನನ್ನ ಶಾಸಕರ ಪ್ರದೇಶಾಭಿವೃದ್ಧಿ ನಿಧಿಯಲ್ಲಿ ಅನುದಾನವನ್ನು ನೀಡುತ್ತೇನೆ. ತಾಲೂಕಿನ ಎಲ್ಲಾ ಗ್ರಾಮಗಳನ್ನು ನಾನು ಸಮಾನವಾಗಿ ಕಾಣುತ್ತೇನೆ ಯಾವುದೇ ಕಾರಣಕ್ಕೂ ಯಾವುದೇ ಗ್ರಾಮವನ್ನು ಕಡೆಗಣಿಸುವ ಪ್ರಶ್ನೆಯೇ ಇಲ್ಲ. ಸ್ವಲ್ಪ ತಡವಾಗಬಹುದು ಎಲ್ಲಾ ಗ್ರಾಮಗಳಿಗೂ ಸರ್ಕಾರ ನೀಡುವ ಅನುದಾನವನ್ನು ಹಂಚಿಕೆ ಮಾಡಿ ತಾಲೂಕಿನ ಜನತೆ ನನ್ನ ಮೇಲೆ ಇಟ್ಟಿರುವ ವಿಶ್ವಾಸ ಮತ್ತು ನಂಬಿಕೆಯನ್ನು ಉಳಿಸಿಕೊಳ್ಳಲು ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇನೆ ಎಂದು ಭರವಸೆ ನೀಡಿದರು.

ಶೈಕ್ಷಣಿಕ ಕ್ಷೇತ್ರದಲ್ಲಿಯೂ ಕೂಡ ತಾಲೂಕು ಸಾಕಷ್ಟು ಪ್ರಗತಿಯನ್ನು ಸಾಧಿಸುತ್ತಿದೆ ಈ ಬಾರಿಯ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಜಿಲ್ಲೆಯಲ್ಲಿಯೇ ಎರಡನೇ ಸ್ಥಾನ ಪಡೆದುಕೊಂಡಿದೆ. ಈ ಉತ್ತಮ ಫಲಿತಾಂಶ ಶ್ರಮಿಸಿದ ತಾಲೂಕಿನ ಎಲ್ಲಾ ಪ್ರೌಢಶಾಲಾ ಶಿಕ್ಷಕರನ್ನು ಹಾಗೂ ಶಿಕ್ಷಣ ಇಲಾಖೆಯ ಮುಖ್ಯಸ್ಥರನ್ನು ನಾನು ತುಂಬು ಹೃದಯದಿಂದ ತಾಲೂಕಿನ ಪರವಾಗಿ ಅಭಿನಂದಿಸುವುದಾಗಿ ಶಾಸಕ ಮಂಜು ತಿಳಿಸಿದರು.

ಈ ವೇಳೆ ಮಂಜೇಗೌಡ, ಐನೋರಹಳ್ಳಿ ಮಲ್ಲೇಶ್, ಕೃಷ್ಣೇಗೌಡ, ಶೇಖರ್ ಇದ್ದರು.

ಗ್ಯಾಸ್ ಸಿಲಿಂಡರ್ ಸೋರಿಕೆ

ಮನೆ ಸಂಪೂರ್ಣ ಬೆಂಕಿಗೆ ಆಹುತಿ

ಮನೆಯವರು ಅಪಾಯದಿಂದ ಪಾರು



ಅರಕೆರೆ ಗ್ರಾಮದಲ್ಲಿ ಗ್ಯಾಸ್ ಸೋರಿಕೆಯಿಂದ ಬೆಂಕಿ ಕಾಣಿಸಿಕೊಂಡು ಮನೆಗೆ ಶಾಸಕ ರಮೇಶ ಬಂಡಿಸಿದ್ದೇಗೌಡ, ತಹಶೀಲ್ದಾರ್ ಚೇತನಾ ಯಾದವ್ ಭೇಟಿ ನೀಡಿದ್ದರು.

ಶ್ರೀರಂಗಪಟ್ಟಣ, ಮೇ 9–ಮನೆಯಲ್ಲಿ ಗ್ಯಾಸ್ ಸಿಲಿಂಡರ್ ಸೋರಿಕೆಯಿಂದ ಬೆಂಕಿ ಕಾಣಿಸಿಕೊಂಡು ಮನೆ ಸಂಪೂರ್ಣ ಭಸ್ಮವಾಗಿರುವ ಘಟನೆ ಶುಕ್ರವಾರ ರಾತ್ರಿ ತಾಲೂಕಿನ ಅರಕೆರೆ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಪುಟ್ಟೇಗೌಡ ಎಂಬುವರ ಮನೆಯಲ್ಲಿ ಘಟನೆ ನಡೆದಿದ್ದು, ಮನೆಯಲ್ಲಿದ್ದವರು ಹೊರಗೆ ಬಂದ ಕಾರಣದಿಂದ ಪ್ರಾಣಾಪಾಯದಿಂದ ಪಾರಾಗಿದ್ದು, ಭಾರಿ ಅನಾಹುತ ತಪ್ಪಿದಂತಾಗಿದೆ.

ಸ್ಥಳಕ್ಕೆ ಅಗ್ನಿ ಶಾಮಕ ದಳ ಸಿಬ್ಬಂದಿಗಳು ಆಗಮಿಸಿ ಬೆಂಕಿ ನಂದಿಸುವ ಕಾರ್ಯ ನಡೆಸಿದರೂ ಮನೆ ಸಂಪೂರ್ಣವಾಗಿ ಭಸ್ಮವಾಗಿದೆ. ಈ ಕುರಿತು ಅರೆಕೆರೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಶಾಸಕರ ಪರಿಶೀಲನೆ: ಅರಕೆರೆ ಗ್ರಾಮದಲ್ಲಿ ಸಂಭವಿಸಿದ ಬೆಂಕಿ ಅವಘಡದ ಸ್ಥಳಕ್ಕೆ ಶಾಸಕ ರಮೇಶ ಬಂಡಿಸಿದ್ದೇಗೌಡ ಹಾಗೂ ತಹಶೀಲ್ದಾರ್ ಚೇತನಾ ಯಾದವ್ ಭೇಟಿ ನೀಡಿ ಸ್ಥಳ ಪರಿಶೀಲಿಸಿ, ಸಂತ್ರಸ್ತ ಕುಟುಂಬಕ್ಕೆ ಧೈರ್ಯ ತುಂಬಿದ್ದಾರೆ. ಹಾನಿಯ ಬಗ್ಗೆ ಸಮಗ್ರ ಪರಿಶೀಲನೆ ನಡೆಸಿದ ಅವರು ಬೆಂಕಿಯಿಂದ ಹಾನಿಗೊಳಗಾದ ಮನೆಯನ್ನು ಸರಿಪಡಿಸಲು ಮತ್ತು ಕುಟುಂಬಕ್ಕೆ ಅಗತ್ಯ ವಿರುವ ಎಲ್ಲಾ ಸರ್ಕಾರಿ ಸೌಲಭ್ಯಗಳನ್ನು ಒದಗಿಸಲು ಕೂಡಲೇ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಶಾಸಕರು ಸೂಚಿಸಿದರು.

ಕಷ್ಟದಲ್ಲಿರುವ ಕುಟುಂಬಕ್ಕೆ ಆಸರೆಯಾಗಲು ತಮ್ಮ ವೈಯಕ್ತಿಕ ಖಾತೆಯಿಂದ ಆರ್ಥಿಕ ಸಹಾಯವನ್ನು ಸ್ಥಳದಲ್ಲೇ ವಿತರಿಸಿದ ಅವರು, ದುರ್ಘಟನೆಯಿಂದ ಹಾನಿಗೊಳಗಾದ ಕುಟುಂಬಕ್ಕೆ ಅಗತ್ಯವಿರುವ ಎಲ್ಲಾ ರೀತಿಯ ಸಹಕಾರವನ್ನು ಇನ್ನಷ್ಟು ನೀಡಲಾಗುವುದು, ಎಂದು ಭರವಸೆ ನೀಡಿದರು. ಗ್ರಾಪಂ ಪಿಡಿಒ ಸೇರಿದಂತೆ ಕಂದಾಯ ಅಧಿಕಾರಿಗಳು ಜೊತೆಯಲ್ಲಿದ್ದರು.

ತಂತ್ರಜ್ಞಾನ ಕ್ಷೇತ್ರದ ಪ್ರಗತಿಗೆ ವಿಜ್ಞಾನಿಗಳ ಕೊಡುಗೆ ಅಪಾರ

ಮಂಡ್ಯ, ಮೇ 9–ತಂತ್ರಜ್ಞಾನ ಕ್ಷೇತ್ರದಲ್ಲಿ ಭಾರತ ಅತ್ಯಂತ ವೇಗವಾಗಿ ಪ್ರಗತಿ ಸಾಧಿಸುತ್ತಿದೆ. ಇದಕ್ಕೆ ಇಂಜಿನಿಯರ್ ಮತ್ತು ವಿಜ್ಞಾನಿಗಳ ಮೇಲೆ ಕೊಡುಗೆ ಅಪಾರ ಎಂದು ಬೆಂಗಳೂರಿನ ಅಕ್ರಡೈನ್ ಪ್ರೈ.ಲಿ.ನ ಸಂಸ್ಥಾಪಕ ಡಾ.ನೀರಜ್‌ಕುಮಾರ್ ತಿಳಿಸಿದರು.

ತಾಲೂಕಿನ ಸುಂಡಹಳ್ಳಿ ಬಳಿ ಇರುವ ಕಾವೇರಿ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಿಂದ ಕಾವೇರಿ ತಾಂತ್ರಿಕ ಮಹಾವಿದ್ಯಾಲಯದ ಆವರಣದಲ್ಲಿ ನಡೆದ 2ನೇ ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ಮಾತನಾಡಿದ ಅವರು, ಡ್ರೋನ್ ತಯಾರು ಮಾಡುವ ತಂತ್ರಜ್ಞಾನ ಅತ್ಯಾವಶ್ಯಕವಾಗಿದ್ದು, ಈ ಕಾರ್ಯಾಗಾರ ಹೆಚ್ಚಿನ ಅನುಕೂಲವಾಗಲಿದೆ ಎಂದು ಹೇಳಿದರು.

ಇಂಟೆಲ್ ಸಂಸ್ಥೆಯ ಇಂಜಿನಿಯರಿಂಗ್ ವಿಭಾಗದ ನಿರ್ದೇಶಕ ಇಸ್ಮಾಯಿಲ್ ಇಬ್ರಾಹಿಂ ಮಾತನಾಡಿ, ಗ್ರಾಮೀಣ ವಿದ್ಯಾರ್ಥಿಗಳಿಗೆ ಅನುಕೂಲಕ್ಕಾಗಿ ನಡೆಸುತ್ತಿರುವ ಕಾರ್ಯಾಗಾರ ಅತ್ಯಂತ ಮಹತ್ವದ್ದಾಗಿದೆ ಎಂದು ಹೇಳಿದರು.

ಯುವ ಪರಿಷತ್‌ಗೆ ಪದಾಧಿಕಾರಿಗಳ ಆಯ್ಕೆ

ಕೆ.ಆರ್.ಪೇಟೆ, ಮೇ 9– ಪಟ್ಟಣದ ಪ್ರವಾಸಿ ಮಂದಿರದಲ್ಲಿ ಜಿಲ್ಲಾ ಯುವ ಪರಿಷತ್ ಅಧ್ಯಕ್ಷ ಚಿಕ್ಕಗಾಡಿಗನಹಳ್ಳಿ ಎನ್.ಪರಮೇಶ್ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ತಾಲೂಕು ಯುವ ಪರಿಷತ್ ಪದಾಧಿಕಾರಿಗಳ ಆಯ್ಕೆ ನಡೆಯಿತು. ಯುವ ಪರಿಷತ್ತಿನ ಅಧ್ಯಕ್ಷರಾಗಿ ಮಾದಾಪುರ ಸೋಮಶೇಖರ್ ಅವರನ್ನು ಆಯ್ಕೆ ಮಾಡಲಾಯಿತು. ಉಳಿದಂತೆ ಉಪಾಧ್ಯಕ್ಷರಾಗಿ ಶಶಿಕಲಾ ನಾಗೇಂದ್ರ, ಕಾರ್ಯದರ್ಶಿಯಾಗಿ ರಾಯಸಮುದ್ರ ದರ್ಶನ್, ಸಂಘಟನಾ ಕಾರ್ಯದರ್ಶಿಯಾಗಿ ಪ್ರೀತಿ, ಸಹ ಕಾರ್ಯದರ್ಶಿಯಾಗಿ ಮನೋಜ್, ಖಜಾಂಚಿಯಾಗಿ ಹರಿಹರಪುರ ನಾಗೇಂದ್ರ, ನಿರ್ದೇಶಕರುಗಳಾಗಿ ಮಾದಾಪುರ ಅಭಿಷೇಕ್, ಹರಿಹರಪುರ ನರಸಿಂಹ, ಚೆಲುವರಾಜು, ಅಲೇನಹಳ್ಳಿ ಚಂದ್ರು ಅವರನ್ನು ಆಯ್ಕೆ ಮಾಡಲಾಯಿತು.

ವಾರದ ಮಿತ್ರ
ಸಾಪ್ತಾಹಿಕ ಪುರವಣಿ

ಮೈಸೂರು ಮಿತ್ರ

ಭಾನುವಾರ 10–05–2026

ಪುಟ 9

ಮೈಸೂರು ಮಿತ್ರ 47 ಅತ್ಯುತ್ತಮ ಪತ್ರಿಕೋದ್ಯಮ

'ಮೈಸೂರು ಮಿತ್ರ' ವಾರ್ಷಿಕ ಕಥಾ ಸ್ಪರ್ಧೆ–2026

ಸಮಾಧಾನಕರ ಬಹುಮಾನಿತ ಕಥೆ–I

ಆಮೆ



ಹೆಚ್.ಜಿ.ಎನ್.ಪ್ರಸಾದ್

ಇದ್ದಕ್ಕಿದ್ದಂತೇ ಮಕ್ಕಳ ಗುಂಪಿನಲ್ಲಿ ಗದ್ದಲ ಹೆಚ್ಚಾಯಿತು. "Tortoise, Tortoise" ಮಕ್ಕಳು ಕೂಗುತ್ತಿದ್ದರು. "See, its shell! It is so strong!!" ಒಂದು ಮಗು ಕೂಗಿ ಕೊಂಡಿತು. ಇನ್ನೊಂದು ಮಗು ಅದರ ಚಿಪ್ಪಿನ ಮೇಲೆ ಹತ್ತಿ ಕುಣಿದರೂ ಏನೂ ಆಗುವದಿಲ್ಲ ಎಂಬ ಜ್ಞಾನವನ್ನು ಎಲ್ಲರೊಂದಿಗೆ ಹೆಮ್ಮೆಯಿಂದ ಹಂಚಿಕೊಂಡಿತು. ಇದ್ಯಾವುದೂ ತನ್ನ ಕಿವಿಗೆ ಬೀಳಲೇ ಇಲ್ಲ ಎಂಬಂತೆ ಆಮೆ ಮುನ್ನಡೆಯುತ್ತಿತ್ತು. ಯಾರಾದರೂ ಅದನ್ನು ಮುಟ್ಟಲು ಪ್ರಯತ್ನಿಸಿದರೆ ತನ್ನ ತಲೆ, ಕಾಲುಗಳನ್ನು ಒಳಗೆ ಎಳೆದುಕೊಂಡು ಕ್ಷಣ ಕಾಲ ಅಲುಗಾಡದೇ ಕುಳಿತಿರುತ್ತಿದ್ದ ಆಮೆ ಸ್ವಲ್ಪ ಹೊತ್ತಿನ ನಂತರ ನಿರುಮ್ಮಳವಾಗಿ ತಲೆ ಹೊರ ತೆಗೆದು, ಕಾಲು ಚಾಚಿ ನಡೆಯ ತೊಡಗಿತು. ಎಷ್ಟೆಲ್ಲ ತೊಂದರೆಯ ನಡುವೆಯೂ ಕೊಳದ ಬಳಿಯ ಕಲ್ಲು ಪೊಟರೆ ಮುಟ್ಟುವ ಅದರ ಇರಾದೆ ಸ್ಪಷ್ಟವಾಗಿತ್ತು. "ನಾನೂ ಆ ಆಮೆಯ ತರಹ ಎಲ್ಲ ಭಾವನೆಗಳನ್ನೂ ಒಳಗೆಳೆದುಕೊಂಡು ಬಿಟ್ಟೆನೇ? ಆದರೆ ನಾನೇಕೆ ಆ ಆಮೆಯ ತರಹ ಮತ್ತೆ ಕಾಲು ಚಾಚಿ ತಲೆಯೆತ್ತಿ ನಡೆಯಲೆತ್ನಿಸಲಿಲ್ಲ? ಭಾವನೆಗಳನ್ನು ಹತ್ತಿಕ್ಕಿಕೊಳ್ಳದೇ ಹರಿಯಬಿಡಬಹುದಾಗಿತ್ತಲ್ಲ?! ನನ್ನನ್ನು ನಾನೇ ಹಿಂದಕ್ಕೆಳೆದೆನೇ?" ಮನದ ಮೂಲೆಯೆಲ್ಲೆಲ್ಲೋ ಹಳೆಯ ಇಂದಿರೆ ಎದ್ದು ಕುಳಿತು ಮೆಲ್ಲನೇ ಪಿಸುಗುಡುತ್ತಿದ್ದಳು.

ಎಮ್ಮ ಮನೆಯಂಗಳದಿ ಬೆಳೆದೊಂದೀ ಹೂವನ್ನು ನಿಮ್ಮ ಮಡಿಲೊಳಗಿಡಲು ತಂದಿರುವೆವು; ಕೊಳ್ಳಿರೀ ಮಗುವನ್ನು ಎಮ್ಮ ಮನೆ ಬೆಳಕನ್ನು ನಿಮ್ಮ ಮನೆಯನ್ನು ತುಂಬಲೊಪ್ಪಿಸುವೆವು?

ಇಂದಿರಮ್ಮನ ಮೊಮ್ಮಗಳ ಮದುವೆ ಅವಳಿಷ್ಟಪಟ್ಟ ಪಂಜಾಬೀ ಹುಡುಗನೊಂದಿಗೆ ನಡೆಯುತ್ತಿತ್ತು. ಕೇಳಿ ಬರುತ್ತಿದ್ದ ಹಾಡಿನ ಅರ್ಥ ಗಂಡಿನ ಕಡೆಯವರಿಗೆ ಏನೂ ತಿಳಿಯುತ್ತಿರಲಿಲ್ಲ ವಾಗಿ ಗಂಡಿನ ಕಡೆಯವರು ಅದಕ್ಕೂ ಭಲ್ಲೇ, ಭಲ್ಲೇ ಎಂದು ಹೆಜ್ಜೆ ಹಾಕುತ್ತಿದ್ದರು. ಇಂಗ್ಲೀಷ್ ಮೀಡಿಯಂನಲ್ಲಿ ಓದಿದ ಇಂದಿರಮ್ಮನ ಮಗಳೂ ಶಬ್ದಗಳು ತಿಳಿಯದಿದ್ದರೂ ಮಗಳನ್ನು ಗಂಡನ ಮನೆಗೆ ಕಳುಹಿಸಬೇಕಲ್ಲ ಎಂಬ ಸಂಕಟದೊಂದಿಗೆ ಕಣ್ಣಂಚಿನಲ್ಲಿ ನೀರು ತುಳುಕದಂತೆ ತಡೆ ಹಿಡಿದು ಮುಗುಳು ನಗೆಯನ್ನು ಮುಖದ ತುಂಬ ಹರಡಿ ಕೊಂಡು ಅತ್ತಿಂದಿತ್ತ ಗಡಿಬಿಡಿಯಲ್ಲಿ ಓಡಾಡುತ್ತಿದ್ದಳು. ಇಂದಿರಮ್ಮನಿಗೆ ಇನ್ನು ಮೊಮ್ಮಗಳು ಮನೆಯಲ್ಲಿ ಇರುವದಿಲ್ಲ ಎಂಬ ನೋವಿನೊಂದಿಗೇ ಅವಳ ಮದುವೆಯ ವಿಷಯ ಮನೆಯಲ್ಲಿ ಪ್ರಸ್ತಾಪವಾದಾಗ ನಡೆದ ಹಗರಣವನ್ನು ನೆನೆಸಿಕೊಂಡಿತು. ಮೊಮ್ಮಗಳು ಪಂಜಾಬೀ ಹುಡುಗನನ್ನು ಮದುವೆಯಾಗುತ್ತೇನೆ ಎಂದಾಗ ಮಗಳು ಮತ್ತು ಅಳಿಯ ಹೆಚ್ಚು ಏನೂ ಮಾತನಾಡಲಿಲ್ಲ. ಹುಡುಗ ಏನು ಮಾಡುತ್ತಾನೆ?

ತಂದೆ–ತಾಯಿ ಯಾರು? ಇತ್ಯಾದಿ ವಿವರಗಳನ್ನು ತೆಗೆದುಕೊಂಡು ಸುಮ್ಮನಾದರು. ಆದರೆ ಅವಳ ಅಜ್ಜ ಅಂದರೆ ಇಂದಿರಮ್ಮನ ಪತಿ ಗಲಾಟೆಯೆಬ್ಬಿಸಿದ್ದ ಪರಿ ಹೇಗಿತ್ತು ಅಂದರೆ ಇಂದು ಇಂದಿರಮ್ಮನ ಪತಿ ಮದುವೆಗೂ ಬಂದಿರಲಿಲ್ಲ. ಆದರೆ ಅವರ ಅನುಪಸ್ಥಿತಿ ಯಾರನ್ನೂ ಅಷ್ಟಾಗಿ ಬಾಧಿಸುತ್ತಿಲ್ಲ ವೇನೋ ಎಂಬಂತೆ ಎಲ್ಲರ ವರ್ತನೆಯಿತ್ತು.

So called generation gap ಇರಬಹುದೇ ಈ ತರಹದ ವರ್ತನೆಗೆ ಕಾರಣ? ಇಂದಿರಮ್ಮ ಕುಳಿತಲ್ಲೇ ಯೋಚಿಸಿದರು.

* * * * *

ಮನುಷ್ಯ ಯೋಚಿಸುವ ಪರಿ ಈ ಬದಲಾವಣೆಗೆ ಕಾರಣವಿರಬಹುದೇ? ಅಥವಾ ಸ್ತ್ರೀವಾದದ ಬಗ್ಗೆ ಮಾತನಾಡುವದಕ್ಕಿಂತ ಆಚರಣೆಗೆ ತರುವ ಆತ್ಮವಿಶ್ವಾಸವೇ ಹೆಚ್ಚಾಗಿರುವ ಈಗಿನ ಪೀಳಿಗೆಯ ಮನಃಸ್ಥಿತಿಯಿರಬಹುದೇ? ಯಾಕೆ? ಯಾಕೆ? ಮದುವೆಯಾಗುತ್ತಿದ್ದಂತೆ ಹೆಣ್ಣೊಬ್ಬಳ ವ್ಯಕ್ತಿತ್ವ, ವರ್ತನೆ, ಎಲ್ಲವೂ ಯಾಕೆ ಬದಲಾಗ ಬೇಕು? ಎಂದು ಯೋಚಿಸುತ್ತಿದ್ದಂತೆ ಅದೇ ಹಾಡಿನ ಮತ್ತೊಂದು ವಾಕ್ಯ ಮಧುರವಾಗಿ ತೇಲಿ ಬಂತು. **ನಮ್ಮ ಕುಲ, ಮನೆಗಳಿಗೆ ಹೊರಗಾಗಿ ಬಂದಿಹಳು ನಿಮ್ಮ ಕುಲವನು ಬೆಳೆಸೆ ಬಂದಿಹಳು.**

ಅಂದರೆ ಮದುವೆ ಮಾಡಿ ಕೊಟ್ಟ ಕೂಡಲೇ ಮಗಳೇಕೆ ಕುಲದಿಂದ ಹೊರಗಾಗಬೇಕು? ಮನೆಯಿಂದ ಎರವಾಗಬೇಕು? ಬಹುಶಃ ನಾವು ಅವಳಿಗೆ ಹೇಳಿ ಕಳುಹಿಸುವ ಈ ಮಾತುಗಳೇ ಅವಳ ಧೀಮಂತಿಕೆ ಯನ್ನು, ವ್ಯಕ್ತಿತ್ವವನ್ನು ಇಂಚು, ಇಂಚಾಗಿ ಕೊಲ್ಲುತ್ತ ಹೋಗುತ್ತದೆಯೇ? ಬಹುಶಃ ನಾನಿನ್ನು ಮೇಲೆ ತೋಳದ ಹೊದಿಕೆ ಹೊದ್ದ ಕುರಿಯಂತೆಯೇ ಬದುಕಬೇಕು ಎನ್ನುವ ವಿಚಾರವನ್ನು ಹುಡುಗಿಯಲ್ಲಿ ಹುಟ್ಟು ಹಾಕುತ್ತದೆಯೇ? ಇಂದಿರಮ್ಮನ ಮನಸ್ಸು ಮೊಮ್ಮಗಳ ಮದುವೆಯ ಸಂಭ್ರಮದಿಂದ ಜಿಗಿ, ಜಿಗಿದು ಹಿಂದಕ್ಕೋಡಿತು. "ಕುಮಾರಿ ಇಂದಿರಾ ಡಿಬೇಟ್ ಫಸ್ಟ್, ಡ್ರಾಯಿಂಗ್ ಸೆಕೆಂಡ್, ಎಸ್ಸೇ ರೈಟಿಂಗ್ ಫಸ್ಟ್.." ಐದನೇ ತರಗತಿಯ ಪುಟ್ಟ ಇಂದಿರಾಳ ಎರಡೂ ಕೈಗಳು ಬಹುಮಾನದಿಂದ ತುಂಬಿ ಕೊಳ್ಳುತ್ತಿದ್ದವು. ಚುರುಕು ಕಣ್ಣುಗಳು ಇನ್ನೂ ಚೆಂದಾಗಿ ಹೊಳೆಯುತ್ತಿದ್ದವು. ತುಂಬುಗೆನ್ನೆಗಳು ಖುಷಿಯಿಂದ ಬಲೂನು ಊದಿದಂತೆ ಊದಿ ಕೊಳ್ಳುತ್ತಿದ್ದವು. ಅಷ್ಟೇನೂ ಎತ್ತರವಲ್ಲದ, ಮೈ–ಕೈ ತುಂಬಿಕೊಂಡು ದುಂಡಗೇ ಪಾದರಸದಂತೆ ಚಟುವಟಿಕೆಯಾಗಿದ್ದ ಇಂದಿರೆ ಓದಿನಲ್ಲೂ ಮುಂದು, ಚಟುವಟಿಕೆಗಳಲ್ಲೂ ಮುಂದು. ಸದಾ ಏನಾದರೊಂದು ಓದಿಕೊಂಡು ತನ್ನ ಪಾಡಿಗೆ ತಾನು ಬೊಂಬೆಯಾಟವಾಡಿಕೊಂಡು ಇರುತ್ತಿದ್ದ ಹುಡುಗಿ ಅವಳು. ಎಲ್ಲ ಶಿಕ್ಷಕ–ಶಿಕ್ಷಕಿಯರ ಮುದ್ದಿನ ಶಿಷ್ಯೆಅವಳು. ವರ್ಷವಿಡೀ ಭಾಷಣ, ಡ್ರಾಯಿಂಗ್, ಚರ್ಚಾ ಸ್ಪರ್ಧೆ, ಆ ಸ್ಪರ್ಧೆ, ಈ ಸ್ಪರ್ಧೆಗಳಲ್ಲಿ ತೊಡಗಿಸಿಕೊಂಡು ಓದಿನಲ್ಲೂ ಮುಂದಿದ್ದ ಆ ಹುಡುಗಿಯ ಕಣ್ಣು ತುಂಬ ಕರಗದ ಕನಸುಗಳು.

ನಿಜ, ಆ ಕಾಲವೊಂದಿತ್ತು, ಅದು ದಿವ್ಯವಾಗಿತ್ತು; ಅದು ಬಾಲ್ಯವಾಗಿತ್ತು. ಬೆಳೆದಂತೆಲ್ಲ ಕೇವಲ ಅವಳ ವಯಸ್ಸು ಬೆಳೆಯಲಿಲ್ಲ; ಅವಳ ಬುದ್ಧಿ ಅರಳತೊಡಗಿತು; ಅವಳ ಕಲಾಭಿರುಚಿ, ಸಾಹಿತ್ಯಾಸಕ್ತಿ ಹೆಚ್ಚಿತು. ಈಗೀಗ ಅವಳು ಕಥೆ, ಕವನಗಳನ್ನೂ ಬರೆಯತೊಡಗಿದಳು. ಹರೆಯ ಕಾಲಿಟ್ಟಾಗಲೂ ಅವಳು ತನ್ನ ಮುಂದಿನ ಗುರಿಯಿಂದ ವಿಚಲಿತಳಾಗ ಲಿಲ್ಲ. ಓದಿನಲ್ಲಿ ಎಷ್ಟು ಮುಂದೆಯೋ, ತುಂಟಾಟದಲ್ಲೂ ಅಷ್ಟೇ ಮುಂದು! ಬಾಲ್ಯ ಯಾವಾಗ ಕಳೆಯಿತೋ, ಯೌವ್ವನ ಯಾವಾಗ ಕಾಲಿಟ್ಟಿತೋ ಅರಿವಾಗಲೇ ಇಲ್ಲ. ಹಾಲು ಬಿಳುಪಿನ ಬಣ್ಣ, ತೆಳುವಾದ ಬಳುಕುವ ಮೈ ಮಾಟ, ಬುದ್ಧಿವಂತೆ ಎಂಬ ಪಟ್ಟ ಹರೆಯದ ಹುಡುಗರ ಹಾರ್ಟ್ ಥ್ರಾಬ್ ಆಗಲು ಇನ್ನೇನು ಬೇಕು? ಆದರೂ ಇಂದಿರೆಯಲ್ಲಿ ಚಪಲತೆ ಇರಲಿಲ್ಲ. ಓದಬೇಕು, ನಾನು ಇನ್ನೂ ಓದಬೇಕು ಎನ್ನುವ ಹಂಬಲ. ಎಪ್ಪತ್ತು ವರ್ಷಗಳ ಹಿಂದೆಯೇ ಆ ಕಾಲಕ್ಕೆ ಅತೀ ಹೆಚ್ಚು ಎನ್ನುವಂಥ ಓದು ಓದಿದ್ದ ಇಂದಿರೆಗೆ ಮದುವೆಯ ಕನಸಿತ್ತು ನಿಜ; ಆದರೆ ಆ ಕನಸಿಗೆ ಇದ್ದಿದ್ದ ರಂಗೇ ಬೇರೆ. ಆ ಕನಸಿನಲ್ಲಿ ಗಂಡ ಹೆಂಡತಿ ಕೇವಲ ಗಂಡ ಹೆಂಡತಿಯ ರಾಗಿರದೇ ಒಲುಮೆಯ ಸಖ, ಸಖಿಯರಾಗಿದ್ದರು. ಪತಿಯ ಪ್ರೀತಿ ಇಂದಿರೆಯ ವ್ಯಕ್ತಿತ್ವವನ್ನು ನಶಿಸುವದಾಗಿರಲಿಲ್ಲ. ಭಾವನೆಗಳನ್ನು ಮಾತ್ರವಲ್ಲ, ಮನೆಗೆಲಸವನ್ನೂ ಹಂಚಿಕೊಂಡು, ಪರಸ್ಪರ ಗೌರವ ತೋರಿ ಬಾಳಬಂಡಿಯಲ್ಲಿ ಜೊತೆ, ಜೊತೆಯಾಗಿ ಬಹು ದೂರ ಸಾಗುವ ಕನಸದು. ಮದುವೆಗೆ ಮುಂಚೆಯೇ 'ಹೌದು, ನಾನು ಹಾಗೆಯೇ ಇರುವವನು' ಎಂಬ ಭಾವನೆ ಮೂಡಿಸಿದ್ದ ಭಾವೀ ಗಂಡ. ಅಪ್ಪ, ಅಮ್ಮನಿಗೂ ಮಗಳಿಗೆ ಒಂದು ಮದುವೆ ಅಂತ ಮಾಡಿದರೆ ಸಾಕಾಗಿತ್ತೇನೋ?! ಮದುವೆಯಾಗಿ ಎಂಟೇ ದಿನದಲ್ಲಿ ಪ್ರೀತಿ ಹುಟ್ಟ ಬೇಕಾದ ಎಡೆಯಲ್ಲಿ ನೋವು ಹುಟ್ಟಿತ್ತು. ಗಂಡ ನನ್ನನ್ನು ಕೇವಲ ಅವನ ಮನೆಯ ಶೋಪೀಸ್‌ನಂತೆ ಉಪಯೋಗಿಸಿಕೊಳ್ಳುತ್ತಾನೆ; ನಾನು ಎಷ್ಟೇ ಓದಿದರೂ ಮೊದಲು ಹೆಂಡತಿಯಾಗಬೇಕು, ನಂತರ ನನಗಾಗಿ ನನ್ನದೇ ಆದ ಸಮಯ ಉಳಿದರೆ ಏನಾದರೂ ಆಗಬೇಕು ಎಂಬ ಕಟು ಸತ್ಯದ ವಾಸ್ತವ ನನ್ನೆದುರಿಗೆ ಧುತ್ತೆಂದು ನಿಂತಿತ್ತು. ನಿಜ, ನಾನು ಹೆಣ್ಣೇ ಆಗದಿದ್ದರೆ ಎಷ್ಟೋ ಚೆನ್ನಾಗಿತ್ತು ಎಂಬ ವಿಷಾದ ವೊಂದು ಮನಸ್ಸಿನ ಮೂಲೆಯಲ್ಲಿ ತಲೆಯೆತ್ತುತ್ತಿತ್ತು. ಮನಸಾರೆ ಅನುಭವಿಸಿ, ಕಣ್ಣು ಮುಚ್ಚಿ ಬೊಗಸೆ ಯಲ್ಲಿ ಸುಖವನ್ನು ಮೊಗೆ, ಮೊಗೆದು ಕುಡಿಯ ಬೇಕಾದ ಘಳಿಗೆಯಲ್ಲಿ ಇದ್ದಕ್ಕಿದ್ದಂತೆ ಮನಸ್ಸು ನಿಷ್ಕ್ರಿಯವಾಗಿ ಮೈಗೆ ಬೆಸೆದ ಮೈಗೆ ಯಾವುದೇ ಪ್ರತಿಕ್ರಿಯೆ ತೋರದೇ ತಟಸ್ಥವಾದಾಗ ಕೈ ಹಿಡಿದ ಗಂಡ ಸಿಡುಕುತ್ತಿದ್ದ. ಹೆತ್ತವರ ಮನೆಗಿಂದು ಹೊರಗಾದೆ ಮಗಳೇ ಎಂದು ಉಡಿಯ ತುಂಬಾ ಮಡಿಲಕ್ಕಿ ಹಾಕಿ ಕಳುಹಿಸಿದ ತವರುಮನೆಯವರ ಮುಂದೆ ನಾನು ಅತ್ಯಂತ ಸುಖಿ ಎಂದು ಮುಖವಾಡ ಧರಿಸುವ ಅಗತ್ಯ ತಾನಾಗಿಯೇ ಹುಟ್ಟಿಕೊಂಡಿತ್ತು. ಎರಡೂ ಮನೆಗಳ ಖ್ಯಾತಿ ಉಳಿವಂತೆ ಬಾಳಿ ಬದುಕು ಮಗಳೇ ಎಂದು ಹರಸಿ ಕಳುಹಿಸಿದ ಅಮ್ಮನ ನಂಬಿಕೆಯನ್ನು ಉಳಿಸಿಕೊಳ್ಳಬೇಕಾದ ಅನಿವಾರ್ಯತೆಯಲ್ಲಿ ನಾನು ಇಂದಿರೆ ಎಂಬ ಸುಂದರ, ಸುಶಿಕ್ಷಿತ ಸ್ತ್ರೀ ಒಳಗೊಳಗೇ ಅಣು, ಅಣುವಾಗಿ ಸಾಯತೊಡಗಿದ್ದೆ. ನನ್ನ ಗಂಡನಿಗೆ ಇದೆಲ್ಲದರ ಅರಿವು ಆಗಿತ್ತೇ? ಅರಿತೂ, ಅರಿಯದವನಂತೆ ಇರುತ್ತಿದ್ದನೋ, ಇಂದಿಗೂ ನನಗೆ ಗೊತ್ತಿಲ್ಲ. ನಿಡುಸುಯ್ದರು ಇಂದಿರಮ್ಮ. ಉರುಳುತ್ತಿದ್ದ ಕಾಲಚಕ್ರದಲ್ಲಿ ಮಕ್ಕಳೆರಡು ಆದದ್ದೂ ಆಯಿತು. ಇಂದಿರೆಯೀಗ ಆದರ್ಶ ಪತ್ನಿ; ಮಮತಾಮಯಿ ತಾಯಿ, ಹೆತ್ತವರ ಮನೆಯ ಖ್ಯಾತಿ ಎತ್ತಿ ಹಿಡಿದ ಮಗಳು. ಏನೆಲ್ಲ ಆಗಿದ್ದರೂ ಅತ್ತೆಯ ಮನೆಯ ಮುತ್ತಾಗದೇ ತೊತ್ತಾಗಿಯೇ ಉಳಿದಳು. ಏರುತ್ತಿರುವ ಸಂಸಾರದ ವೆಚ್ಚವನ್ನು ಸರಿದೂಗಿಸಲಾರದೇ ಗಂಡ ಹೆಣಗಾಡುತ್ತಿದ್ದಾಗ ಅಷ್ಟೊಂದು ಓದಿದ ನಾನೇಕೆ ಮನೆಯಲ್ಲಿ ಕುಳಿತುಕೊಳ್ಳಬೇಕು? ಹೇಗೂ ಈಗ ಮಕ್ಕಳು ಶಾಲೆಗೆ ಹೋಗುತ್ತಿದ್ದಾರಲ್ಲ ಎಂದು ಯೋಚಿಸಿ ಇಂದಿರೆ ನೌಕರಿ ಮಾಡಲು ಉದ್ದೇಶಿಸಿದಳು. ಆಗಲೂ ಕೂಡಾ ನನ್ನ ಆರ್ಥಿಕ ಸ್ವಾತಂತ್ರ್ಯ, ನನ್ನ ಜ್ಞಾನದ ಬಳಕೆ ಇಂತಹ ವಿಚಾರಗಳಿಗಿಂತ ಹೆಚ್ಚಾಗಿ ಆರ್ಥಿಕವಾಗಿ ಸಬಲವಾದ ಪರಿವಾರವನ್ನು ರೂಪಿಸುವದೇ ಪ್ರಥಮ ಆದ್ಯತೆಯಾಗಿತ್ತು. ಗಂಡ ಯಥಾ ಪ್ರಕಾರ ಮೌನಿ ಬಾಬಾ. ಓದಿನಲ್ಲಿ ಬುದ್ಧಿವಂತೆಯಾಗಿದ್ದ ಇಂದಿರೆಗೆ ಒಳ್ಳೆಯ ಸಂಬಳ, ಸ್ಥಾನ ಎರಡೂ ಸಿಕ್ಕಿದವು. ಆದರೆ ಒಳಗೂ ದುಡಿವ, ಹೊರಗೂ ದುಡಿವ ಬಿಡುಗಡೆಯೇ ಇಲ್ಲದ; ಸ್ವಾತಂತ್ರ್ಯ ವಿದ್ದೂ ಹಾರಲಾಗದ ರೆಕ್ಕೆ ಕತ್ತರಿಸಿದ ಹಕ್ಕಿ ನಾನು ಎಂದು ಅವಳಿಗೆ ಅರಿವಾಗಲು ಬಹಳ ಹೊತ್ತೇನೂ ಹಿಡಿಯಲಿಲ್ಲ. ಹೆಂಡತಿ ಆಫೀಸ್‌ಗೆ ಹೋಗುತ್ತಾಳೆ; ನಾನವಳಿಗೆ ಕೈಲಾದ ಸಹಾಯ ಮಾಡಬೇಕು ಎನ್ನುವ ಕನಿಷ್ಠ ಜ್ಞಾನವೂ, ಕನಿಕರವೂ ಅವಳ ಕೈ ಹಿಡಿದವನಿಗಿರಲಿಲ್ಲ. ಹುಟ್ಟಿನಿಂದ ಸ್ವಾಭಿಮಾನಿಯಾದ ಇಂದಿರೆ ತನ್ನ ಕಷ್ಟಗಳನ್ನು ಎಂದಿಗೂ ಬೇರೆಯವರ ಮುಂದೆ ತೋಡಿ ಕೊಳ್ಳಲು ಬಯಸುತ್ತಿರಲಿಲ್ಲ. ಆದರೆ ಒಂದು ಕಾಲಕ್ಕೆ ಬಾಯಿ ತುಂಬಾ ಗಲ, ಗಲ ಮಾತ ನಾಡುತ್ತ ಸುತ್ತಲೂ ಗೆಳೆಯ, ಗೆಳತಿಯರನ್ನು ಕೂಡಿಕೊಂಡು ಕಥೆ, ಕವನ ಬರೆದುಕೊಂಡು, ಸ್ತ್ರೀ ವಾದ ಇತ್ಯಾದಿಗಳ ಬಗೆಗೆ ಭಾಷಣ ಮಾಡುತ್ತ ಕಾಲೇಜ್ ಲೀಡರ್ ಆಗಿ ಮೆರೆದ ಹುಡುಗಿ ಮೆಲ್ಲನೇ ಮಾತುಮರೆಯ ತೊಡಗಿದ್ದು ಯಾರ ಗಮನಕ್ಕೂ ಬರಲೇ ಇಲ್ಲ. ಒಂದು ಚೆಂದದ ಹೂವು, ಎಲ್ಲೋ ಮೂಲೆ ಯಲ್ಲಿ ಕುಳಿತು ಹಾಡುವ ಪಕ್ಷಿ ಎಷ್ಟೆಲ್ಲ ಸಣ್ಣ, ಸಣ್ಣ ಸಂಗತಿಗಳು ಅವಳಲ್ಲಿ ಮಧುರ ಭಾವನೆಗಳನ್ನು ಸ್ಫುರಿಸುತ್ತಿದ್ದವು. ಖುಷಿಯೆಂದರೆ ಕೇವಲ ಅಂತಸ್ತಲ್ಲ. ಖುಷಿಯೆಂದರೆ ಮನಸ್ಸು ಅರಳಿಸುವ ಜೀವ ಭಾವಗಳು ಎಂದುಕೊಂಡವಳು ಅವಳು. ಅಂಥ ಮನಸ್ಸೀಗ ಮಾಧುರ್ಯತೆಯನ್ನೇ ಮರೆಯತೊಡಗಿತ್ತು. ಕಾಲಚಕ್ರದಲ್ಲಿ ಇಂದಿರೆ ಮೇಲೆ ಸುಪುಷ್ಟವಾಗಿದ್ದು, ಒಳಗೆಲ್ಲ ಟೊಳ್ಳಾದ ಆಲದ ಮರದಂತೆ ಎಲ್ಲರಿಗೂ ಆಶ್ರಯವಾಗಿ ತಾನು ಒಳಗೆಲ್ಲ ಖಾಲಿ, ಖಾಲಿಯಾಗಿ ಉಳಿದಳು. ಎಲ್ಲವನ್ನೂ ಚಿಪ್ಪೊಳಗೆ ಹುದುಗಿಸಿಕೊಂಡು ಮೇಲೆ ಗಟ್ಟಿಯಾಗಿ ನಿಂತ ಆಮೆಯಂತಾದಳು. ಈರುಳ್ಳಿ ಕತ್ತರಿಸಲೂ ಬಾರದ ಇಂದಿರಾ ನಳ ಪಾಕ ಪ್ರವೀಣೆಯಾದಳು. ಎಲ್ಲೆಂದರಲ್ಲಿ ಸ್ವಚ್ಛಂದ ವಾಗಿ, ನಿರ್ಭೀತೆಯಾಗಿ ತಿರುಗುತ್ತಿದ್ದ ಇಂದಿರಾ ಚಲಿಸದ ನೀರಾದಳು. ಇಂದಿರೆಯಿದ್ದಲ್ಲಿ ಮಾತಿಗೆ, ನಗುವಿಗೆ ಬರವಿಲ್ಲ ಎನ್ನುವಂತಿದ್ದ ಇಂದಿರೆ ಯಾರೋ ಮಾಡಿದ ಅಬದ್ಧ ಹಾಸ್ಯಕ್ಕೆ ಮುಗುಳ್ನಕ್ಕು ಮೌನವಾಗುವಷ್ಟು ನಿಗೂಢವಾದಳು. ಗಂಡನ ದರ್ಪದ ನಡೆಗೆ, ನುಡಿಗೆ ಎಂದಿಗೂ ಪ್ರತಿ ನುಡಿಯದೇ ಹಾಡಲು ಮರೆತ ಪಂಜರದ ಹಕ್ಕಿಯಂತೆ ಮೌನವಾದಳು ಇಂದಿರೆ. ಯಾವುದೇ ಏರಿಳಿತವಿಲ್ಲದೇ ಬದುಕ ಬಂಡಿ ಸಾಗುತ್ತಿತ್ತು. ಯಂತ್ರದಂತೆ ಇಂದಿರೆ ಮನೆಯ, ಮಕ್ಕಳ ಆದ್ಯತೆಗೆ ಗಮನ ಕೊಡುತ್ತಾ ಬದುಕುತ್ತಿದ್ದಳು. ಮಕ್ಕಳು ಬೆಳೆದರು. ಒಳ್ಳೊಳ್ಳೆಯ ಉದ್ಯೋಗ, ಒಳ್ಳೊಳ್ಳೆಯ ಅಳಿಯ, ಚೆಂದದ ಸೊಸೆ ಬಂದಾಗಲೂ ಇಂದಿರೆಯ ದಿನಚರಿ ಬದಲಾಗಲಿಲ್ಲ. ಕಾಲಗತಿಗೆ ತಕ್ಕಂತೆ ಮಗಳು, ಅಳಿಯ, ಮಗ ಮತ್ತು ಸೊಸೆ ಎಲ್ಲರೂ ಉದ್ಯೋಗದಲ್ಲಿದ್ದರು. ಆರ್ಥಿಕವಾಗಿ ಸುಸ್ಥಿತಿಯಲ್ಲಿ ರಲು ಅದು ಅನಿವಾರ್ಯವೂ ಆಗಿತ್ತು ನಗು, ನಗುತ್ತ ಬದುಕುವ ಮಕ್ಕಳ ಸಂಸಾರವನ್ನು ನೋಡಿದಾಗ, ತಮಗೇನು ಬೇಕು ಎಂಬುದನ್ನು ನಿರ್ಭಯವಾಗಿ ಕೇಳಿ ಹಕ್ಕಿನಿಂದ ಪಡೆಯುವ, ಖುಷಿಯಿಂದ ಅನುಭವಿಸುವ ಮಗಳು, ಸೊಸೆ ಯನ್ನು ನೋಡಿದಾಗ ತಾನು ಕಳೆದುಕೊಂಡಿದ್ದೇನು ಎಂಬುದರ ಅರಿವು ಇಂದಿರೆಗಾಗುತ್ತಿತ್ತು.

* * * * *

ಎಷ್ಟು ಚೆಂದ, ಚೆಂದದ ಕತೆ, ಕವಿತೆಗಳನ್ನು ಬರೆಯುತ್ತಿದ್ದಳು ತಾನು ವಿದ್ಯಾರ್ಥಿನಿಯಾಗಿದ್ದಾಗ!! ಹೆಮ್ಮೆಯೆನಿಸುತ್ತಿತ್ತು. 'ಇದು ನೀನೇ ಸ್ವಂತವಾಗಿ ಬರೆದದ್ದಾ?' ಶಿಕ್ಷಕರು ಕಣ್ಣರಳಿಸಿ ಕೇಳಿದಾಗ ಎದೆ ಗರ್ವದಿಂದ ಉಬ್ಬುತ್ತಿತ್ತು. ಅಷ್ಟು ಚೆಂದದ ಭಾಷೆ ತನ್ನದು. ಬರೆಯಬೇಕೆಂಬ ತುಡಿತ, ಮನದಲ್ಲಿ ಸ್ಫುರಿಸಿದ ಭಾವ ಶಬ್ದ ಗಾರುಡಿಯಾಗಿ ಬರೆದದ್ದು ಯಾವುದಾದರೊಂದು ಪತ್ರಿಕೆಯಲ್ಲೋ, ಸಾಪ್ತಾಹಿಕದಲ್ಲೋ ಪ್ರಕಟವಾದಾಗ ಹಿಮಾಲಯ ಏರಿದಷ್ಟು ಖುಷಿಯಾಗುತ್ತಿತ್ತು. ಮತ್ತೆ, ಮತ್ತೆ ಬರೆಯಲು ಸ್ಫೂರ್ತಿ ಹುಟ್ಟುತ್ತಿತ್ತು. ಆದರೀಗ...? ಮನಸ್ಸೆಲ್ಲ ಖಾಲಿ, ಖಾಲಿ. ಎಲ್ಲರೂ, ಎಲ್ಲವೂ ಇದ್ದರೂ ಒಬ್ಬಂಟಿಯಾದ ಅನುಭವ. ಆಕಸ್ಮಾತ್ ಅಲ್ಲೊಂದು, ಇಲ್ಲೊಂದು ಲೇಖನವೋ, ಕತೆಯೋ, ಕವನವೋ ಪ್ರಕಟವಾಗಿ ಪತಿಗೆ, ಮಕ್ಕಳಿಗೆ ಖುಷಿಯಿಂದ ತೋರಿಸಿದಾಗ ಸಿಗುತ್ತಿದ್ದ ನೀರಸ ಪ್ರತಿಕ್ರಿಯೆಗೆ ಮನಸ್ಸು ಬಾಡಿ ಹೋಗುತ್ತಿತ್ತು. ಬೆಂಕಿಗೆ ಗುಬ್ಬಿಯನ್ನು ಹಾಕಿ ಸತ್ತೇನೇ ಗುಬ್ಬಿ ಎಂದರೆ ಇಲ್ಲ ಮೈ ಬೆಚ್ಚಗಾಯಿತು ಎಂಬಂತಹ ಮನೋಧಾರಣೆ ರೂಢಿಯಾಗಿ ಬಿಟ್ಟಿತ್ತು. ಎಂದಾದರೊಮ್ಮೆ ಮತ್ತೆ ಬರೆಯಬೇಕೆಂಬ ತುಡಿತ ಮೂಡಿದರೂ ಆ ಘಳಿಗೆಯ ಪ್ರಥಮ ಆದ್ಯತೆಯಾಗಿ ಮತ್ತೇನೋ ಕೆಲಸ ಹುಟ್ಟಿ ಕತೆ ಚಿಗುರುವ ಮೊದಲೇ ಬಾಡಿ ಹೋಗುತ್ತಿತ್ತು. ಆಮೇಲೆ ಬರೆಯಲೆತ್ನಿಸಿದಾಗಲೆಲ್ಲಾ ತಿಣುಕಿದನು ಫಣಿರಾಯ ಎಂಬಂತೆ ಬರೆಹ ಹಳಿ ತಪ್ಪಿ ಪೆನ್ ಮುಂದೆ ಓಡದೇ ಮುಷ್ಕರ ಹೂಡುತ್ತಿತ್ತು. ಹಳೆಯದನ್ನೆಲ್ಲ ಮೆಲುಕು ಹಾಕುತ್ತ ನಿಟ್ಟುಸಿರಿಟ್ಟರು ಇಂದಿರಮ್ಮ.

* * * * *

"ಅಮ್ಮ, ಬಾರಮ್ಮ! ಧಾರೆಯ ಮುಹೂರ್ತ ಹತ್ತಿರವಾಯಿತು" ಮಗಳು ಅವಸರದಿಂದ ಕರೆದಾಗ ಇಂದಿರಮ್ಮ ವಾಸ್ತವಕ್ಕಿಳಿದಿದ್ದರು. ಮುದ್ದಿನ ಗೊಂಬೆಯಂತಿದ್ದ ಮೊಮ್ಮಗಳು ದೇವಲೋಕದ ಅಪ್ಸರೆಯಂತೆ ಕಾಣುತ್ತಿದ್ದಳು. ನಮ್ಮದಲ್ಲದ ನೆಲ, ಆಡಲು ಬಾರದ ಭಾಷೆ, ಕಂಡರಿಯದ ಸಂಸ್ಕೃತಿ ಆದರೂ ಮೊಮ್ಮಗಳ ಮುಖದಲ್ಲಿ ತುಳುಕುತ್ತಿದ್ದ ಆತ್ಮವಿಶ್ವಾಸ.. ಇಂದಿರಮ್ಮ ಖುಷಿಯಿಂದ ಬೀಗಿದರು. ಎಷ್ಟಾದರೂ ತಾವೆತ್ತಿ ಬೆಳೆಸಿದ ಕೂಸು. 'ನನ್ನ ಮೊಮ್ಮಗಳಲ್ಲವೇ!" ಮನಸ್ಸು ತುಂಬಿ ಬಂತು.

ಮೊಮ್ಮಗಳು ಗಂಡನೊಂದಿಗೆ ಮುಂಬಯಿಯಲ್ಲಿ ನೆಲೆಸಲು ಹೊರಟು ನಿಂತಳು. "ಏನೂ ಅರಿಯದ ಕೂಸಲ್ವೇ ಅಮ್ಮಾ ಅದು? ಅನ್ನ ಮಾಡಲೂ ಬಾರದ ಮಗು! ನೀನಲ್ದೇ ಇನ್ಯಾರು ಅವಳ ಜೊತೆಗೆ ಹೋಗುವುದು? ತಿಂಗಳೊಪ್ಪತ್ತು ಇದ್ದು ಅವಳಿಗೆ ಎಲ್ಲ ಅಡ್ಜಸ್ಟ್ ಮಾಡಿಕೊಟ್ಟು ಬಾರಮ್ಮಾ" ಮಗಳು ಅನುನಯಿಸುತ್ತಿದ್ದಳು. ಇಂದಿರಮ್ಮನಿಗೂ ಬೇರೆ ದಾರಿ ತೋರಲಿಲ್ಲ. ಹೊರಟು ನಿಂತರು. ಎತ್ತರೆತ್ತರದ ಕಟ್ಟಡಗಳು, ಕುದಿಸುವ ಸೆಕೆ, ಕಿವಿಗೆ ಬೀಳುವ ಹಲವಾರು ಭಾಷೆಗಳು; ಪುಟ್ಟ ಭಾರತವೇ ಅಲ್ಲಿ ಇದೆಯೇನೋ ಎಂಬಂತೆ ಭಾಸವಾಗುತ್ತಿತ್ತು.

ಮೊಮ್ಮಗಳು, ಅವಳ ಗಂಡ ವಾರವೊಪ್ಪತ್ತಿಗೇ ಕೆಲಸಕ್ಕೆ ಹೊರಟು ನಿಂತರು. ಅವರಿಬ್ಬರೂ ಹೊರಟು ಹೋದ ನಂತರ ಮನೆ ಬರಿದೋ ಬರಿದು. ಇಂದಿರಮ್ಮನವರಿಗೆ ಅಕ್ಕ–ಪಕ್ಕದವರೊಂದಿಗೆ ಹರಟೆ ಕೊಚ್ಚಿ ಅಭ್ಯಾಸವಿಲ್ಲ. ಮೊಮ್ಮಗಳು ಬರುವದು ರಾತ್ರಿ ಎಂಟು ಘಂಟೆಗೇ. ಹೊತ್ತು ಕಳೆಯಲು ಅಪಾರ್ಟ್ ಮೆಂಟಿನ ಎದುರಿನ ಪಾರ್ಕ್‌ನಲ್ಲಿ ಸಂಜೆ ಹೊತ್ತು ಹೋಗಿ ಕುಳಿತುಕೊಳ್ಳ ತೊಡಗಿದರು. ಆಟವಾಡಿಕೊಳ್ಳುವ ಮಕ್ಕಳು, ವಾಕಿಂಗ್, ಜಾಗಿಂಗ್ ಎಂದು ತಿರು ಗಾಡುವ ಜನಗಳು, ಗುಂಪು, ಗುಂಪಾಗಿ ಕುಳಿತು ಮಕ್ಕಳ ಶಾಲೆ, ಹೋಮ್ ವರ್ಕ್ ಬಗ್ಗೆ ಮಾತನಾಡಿಕೊಳ್ಳುವ ಹೆಣ್ಣು ಮಕ್ಕಳು, ಎಲ್ಲವನ್ನೂ ನೋಡುತ್ತ ಮೌನವಾಗಿ ಕುಳಿತು ಕೊಳ್ಳುತ್ತಿದ್ದರು ಇಂದಿರಮ್ಮ. ಚೆಂದ, ಚೆಂದದ ಗಿಡ ಮರ, ಹೂಗಳು; ದೊಡ್ಡ, ದೊಡ್ಡ ಬಂಡೆ ಗಲ್ಲುಗಳನ್ನು ಉಪಯೋಗಿಸಿ ನಿರ್ಮಿಸಿದ ಕೊಳ, ಕೊಳದಲ್ಲಿನ ಬಣ್ಣ, ಬಣ್ಣದ ಮೀನುಗಳು, ಜಲಪಾತ ಎಲ್ಲವನ್ನೂ ಮೈ ಮರೆತು ನೋಡುತ್ತಿದ್ದರು ಇಂದಿರಮ್ಮ. ಇದ್ದಕ್ಕಿದ್ದಂತೇ ಮಕ್ಕಳ ಗುಂಪಿನಲ್ಲಿ ಗದ್ದಲ ಹೆಚ್ಚಾಯಿತು. "Tortoise, Tortoise" ಮಕ್ಕಳು ಕೂಗುತ್ತಿದ್ದರು. "See, its shell! It is so strong!!" ಒಂದು ಮಗು ಕೂಗಿ ಕೊಂಡಿತು. ಇನ್ನೊಂದು ಮಗು ಅದರ ಚಿಪ್ಪಿನ ಮೇಲೆ ಹತ್ತಿ ಕುಣಿದರೂ ಏನೂ ಆಗುವದಿಲ್ಲ ಎಂಬ ಜ್ಞಾನವನ್ನು ಎಲ್ಲರೊಂದಿಗೆ ಹೆಮ್ಮೆಯಿಂದ ಹಂಚಿಕೊಂಡಿತು. ಇದ್ಯಾವುದೂ ತನ್ನ ಕಿವಿಗೆ ಬೀಳಲೇ ಇಲ್ಲ ಎಂಬಂತೆ ಆಮೆ ಮುನ್ನಡೆಯುತ್ತಿತ್ತು. ಯಾರಾದರೂ ಅದನ್ನು ಮುಟ್ಟಲು ಪ್ರಯತ್ನಿಸಿದರೆ ತನ್ನ ತಲೆ, ಕಾಲುಗಳನ್ನು ಒಳಗೆ ಎಳೆದುಕೊಂಡು ಕ್ಷಣ ಕಾಲ ಅಲು ಗಾಡದೇ ಕುಳಿತಿರುತ್ತಿದ್ದ ಆಮೆ ಸ್ವಲ್ಪ ಹೊತ್ತಿನ ನಂತರ ನಿರುಮ್ಮಳವಾಗಿ ತಲೆ ಹೊರ ತೆಗೆದು, ಕಾಲು ಚಾಚಿ ನಡೆಯ ತೊಡಗಿತ್ತು. ಎಷ್ಟೆಲ್ಲ ತೊಂದರೆಯ ನಡುವೆಯೂ ಕೊಳದ ಬಳಿಯ ಕಲ್ಲು ಪೊಟರೆ ಮುಟ್ಟುವ ಅದರ ಇರಾದೆ ಸ್ಪಷ್ಟವಾಗಿತ್ತು. "ನಾನೂ ಆ ಆಮೆಯ ತರಹ ಎಲ್ಲ ಭಾವನೆಗಳನ್ನೂ ಒಳ ಗೆಳೆದುಕೊಂಡು ಬಿಟ್ಟೆನೇ? ಆದರೆ ನಾನೇಕೆ ಆ ಆಮೆಯ ತರಹ ಮತ್ತೆ ಕಾಲು ಚಾಚಿ ತಲೆಯೆತ್ತಿ ನಡೆಯಲೆತ್ನಿಸಲಿಲ್ಲ? ಭಾವನೆಗಳನ್ನು ಹತ್ತಿಕ್ಕಿಕೊಳ್ಳದೇ ಹರಿಯಬಿಡಬಹು ದಾಗಿತ್ತಲ್ಲ?! ನನ್ನನ್ನು ನಾನೇ ಹಿಂದಕ್ಕೆಳೆದೆನೇ?" ಮನದ ಮೂಲೆಯೆಲ್ಲೆಲ್ಲೋ ಹಳೆಯ ಇಂದಿರೆ ಎದ್ದು ಕುಳಿತು ಮೆಲ್ಲನೇ ಪಿಸುಗುಡುತ್ತಿದ್ದಳು.

* * * * *

ತನ್ನ ಮದುವೆಯಾದಾಗಿನಿಂದ ಮೊಮ್ಮಗಳ ಮದುವೆಯವರೆಗಿನ ಬದುಕು ಸಮುದ್ರದ ಅಲೆಗಳಂತೆ ಅಪ್ಪಳಿಸತೊಡಗಿತ್ತು. ಆ ಎಲ್ಲ ಅಲೆಗಳಲ್ಲೂ ತನಗಾಗಿ ತಾನು ಬದುಕಿದ ಇಂದಿರೆ ಕಾಣುತ್ತಿಲ್ಲ! ದಿಗಿಲಾಯಿತು; ಮನಸ್ಸು ಚಿಂತನೆಗೆ ತೊಡಗಿತು. "ಎಲ್ಲಿ ಕಾಣೆಯಾದಳು ಆಭ ಇಂದಿರೆ?! ಎಲ್ಲರನ್ನೂ ಖುಷಿಪಡಿಸುವದರಲ್ಲಿ, ಎಲ್ಲರ ಆರೈಕೆ ಮಾಡುವಲ್ಲಿ, ಮನೆ–ಉದ್ಯೋಗಗಳ ಜುಗಲ್ ಬಂದಿಯಲ್ಲಿ ತಾನು ಕಳೆದು ಹೋದೆನೇ?" ಪ್ರಶ್ನಿಸಿಕೊಂಡರು ತನ್ನಲ್ಲೇ. ಯಾಕೋ ಮಾತಿಗಿಂತ ಮೌನ ಪ್ರಿಯವೆನಿಸತೊಡಗಿತು. ಮೊದಲೆರಡು ದಿನ ಮೊಮ್ಮಗಳು ಇವರನ್ನು ಗಮನಿಸಲಿಲ್ಲ. ಮೂರನೇ ದಿನ ಮೊಮ್ಮಗಳಿಗೆ ಅಜ್ಜಿ ಯಾಕೋ ಎಂದಿನಂತಿಲ್ಲ ಎಂದೆನಿಸಿತು. ಊಟವಾದ ಮೇಲೆ ಹಾಲು, ಹಣ್ಣು ತೆಗೆದುಕೊಂಡು ಅಜ್ಜಿಯ ಕೋಣೆಗೆ ಬಂದಳು. ಒಳ ಬಂದ ಮೊಮ್ಮಗಳನ್ನು ಗಮನಿಸದಷ್ಟೂ ಗಹನ ಚಿಂತೆಯಲ್ಲಿ ಮುಳುಗಿದ್ದರು ಇಂದಿರಮ್ಮ. "ಅಜ್ಜೀ, ಅಜ್ಜೀ" ಮೊಮ್ಮಗಳ ಕರೆಗೆ ಬೆಚ್ಚಿ ಬಿದ್ದರು. "ಯಾಕಜ್ಜೀ, ಊರಿನ ನೆನಪಾಗುತ್ತಿದೆಯಾ? ಅಥವಾ ಅಜ್ಜನ ನೆನಪಾಯಿತಾ?" ಮೊಮ್ಮಗಳ ತುಂಟ ಪ್ರಶ್ನೆಗೆ ನಿರ್ಭಾವುಕ ನೋಟ ಬೀರಿದಾಗ ಮೊಮ್ಮಗಳಿಗೆ ಎಲ್ಲೋ, ಏನೋ ತಪ್ಪಿದೆ ಎನಿಸಿತು. ಅಜ್ಜಿಯನ್ನು ಮತ್ತೆ, ಮತ್ತೆ ಪ್ರಶ್ನಿಸಿದಳು. ನಿಧಾನವಾಗಿ ಇಂದಿರಮ್ಮ ಬಾಯಿ ಬಿಟ್ಟರು "ಏನಿಲ್ಲ, ಕಾಲ ಎಷ್ಟೊಂದು ಬದಲಾಗಿ ಬಿಟ್ಟಿದೆಯಲ್ಲಾ? ಅಪ್ಪ ಅಮ್ಮ, ಗಂಡ ಹೀಗೆ ಎಲ್ಲರ ಅಭಿಪ್ರಾಯಕ್ಕೂ ಬೆಲೆ ಕೊಡುತ್ತಾ, ನಿನ್ನ ಅಭಿಪ್ರಾಯವೇನು ಎಂದು ಎಂದಿಗೂ ಕೇಳದೇ ಇರುವವರನ್ನೆಲ್ಲ ಮೆಚ್ಚಿಸುತ್ತಾ ಬದುಕ ಸಂಜೆಯನ್ನೇ ಮುಟ್ಟಿ ಬಿಟ್ಟೆ, ನನಗಾಗಿ ನಾನು ಬದುಕಲೇ ಇಲ್ಲ!! ಒಂದು ಕಾಲದಲ್ಲಿ ಎಷ್ಟು ಚೆಂದ, ಚೆಂದದ ಕತೆ, ಕವನ ಇತ್ಯಾದಿ ಬರೆಯುತ್ತಿದ್ದೆ! ಎಲ್ಲ ಬಿಟ್ಟು ಬಿಟ್ಟೆ!!" ಗದ್ಗದಿತರಾದರು.

ಕಿರು ನಗೆ ನಕ್ಕಳು ಮೊಮ್ಮಗಳು. "ಅಜ್ಜೀ, ಕಾಲ ಯಾವತ್ತೂ ಬದಲಾಗುವದಿಲ್ಲ. ಮನುಷ್ಯನ ವಿಚಾರಗಳು ಬದಲಾಗುತ್ತವೆ. ಈಗಲೂ ಅದೇ ಸೂರ್ಯ, ಅದೇ ಚಂದ್ರ, ಅವೇ ವಾರದ ಏಳು ದಿನಗಳು, ದಿನದ ಇಪ್ಪತ್ನಾಲ್ಕು ಘಂಟೆಗಳು. ಎಲ್ಲಿ ಕಾಲ ಬದಲಾಗಿದೆ ಅಜ್ಜೀ? ನಾವು ಬದಲಾಗಿದ್ದೇವೆ. ಜೀವನದಲ್ಲಿ ನಿನ್ನ ಕರ್ತವ್ಯ, ನಿನ್ನ ಬದ್ಧತೆ ಎಲ್ಲವನ್ನೂ ನೀನು ಅದ್ಭುತವಾಗಿ ನಿರ್ವಹಿಸಿದ್ದೀಯಾ. ನಾವೆಲ್ಲರೂ ನಮಗೊಂದು ಹೊಸ ನೆಲೆ ಕಂಡುಕೊಂಡಿದ್ದೇವೆ. ನೀನ್ಯಾಕೆ ಮತ್ತೆ ಕತೆ ಬರೆಯಬಾರದು? ಮನುಷ್ಯನ ಕಲಿಕೆಗೆ ಕೊನೆಯೇ ಇಲ್ಲ. ಈಗಲೂ ನೀನು ಕತೆ ಬರೆ. ಬಹುಶಃ ಆಗ ವಾರಪತ್ರಿಕೆ, ಮಾಸಪತ್ರಿಕೆ, ದಿನಪತ್ರಿಕೆ ಇತ್ಯಾದಿಗಳು ಮಾತ್ರ ಇದ್ದವು. ಈಗ ಅಜ್ಜಿ, ಎಷ್ಟೊಂದು ತರಹೇ ವಾರಿ ಸೋಷಿಯಲ್ ಮೀಡಿಯಾ ಅವಕಾಶಗಳು ಇವೆ. ನಾನು ನಿನಗೆಲ್ಲ ಹೇಳಿ ಕೊಡ್ತೇನೆ. ಇಗೋ, ತೆಗೆದುಕೋ ಈ ಪೆನ್ನು, ಮತ್ತೆ ನೋಟ್ ಬುಕ್. ಎಲ್ಲಿ ನಿನ್ನ ಕನ್ನಡಕ?" ಎಂದು ಕನ್ನಡಕ ಎತ್ತಿದವಳೇ ಇಂದಿರಮ್ಮನ ಕಣ್ಣೇರಿಸಿದಳು. ಇಂದಿರಮ್ಮ ಕ್ಷಣಕಾಲ ಸುಮ್ಮನೇ ಕುಳಿತರು. ಮನದಲ್ಲಿ ಭಾವನೆಗಳು ಪುಂಖಾನುಪುಂಖವಾಗಿ ಉಕ್ಕತೊಡಗಿದವು.

ಆ ದಿನ ವಾಕಿಂಗ್ ಹೋಗುವಾಗ ಪೆನ್ ಮತ್ತು ನೋಟ್ ಬುಕ್ಕನ್ನೂ ಜೊತೆಗೆ ಒಯ್ದರು. ಅಲ್ಲಿ ಮೆಲ್ಲ, ಮೆಲ್ಲನೆ ನಡೆಯುತ್ತಿದ್ದ ಆಮೆ ಸುತ್ತಲೂ ನಡೆಯುತ್ತಿದ್ದ ಗೌಜಿ, ಗದ್ದಲದ ಪರಿವೆಯೇ ಇಲ್ಲದೇ ಕೊಳದ ಪಕ್ಕ ನಿರ್ಮಿಸಿದ್ದ ಕಲ್ಲು ಪೊಟರೆ ಸೇರಿಕೊಂಡಿತು. "ಓಹ್! ಗಮ್ಯ ತಲುಪಿತು" ಉದ್ಗರಿಸಿದರು ಇಂದಿರಮ್ಮ. ಸಾಲುಗಳ ನಡುವೆ ಮೌನವಾಗಿ ಬದುಕಿದ ಭಾವನೆಗಳು ಜಲಲ, ಜಲಲ, ಜಲಧಾರೆಯಾಗಿ ಹರಿಯತೊಡಗಿದವು. ಸ್ಫುರಿಸುವ ಭಾವನೆಗಳಿಗೆ ಶಬ್ದದ ಜೀವ ತುಂಬಿ ಸರ, ಸರನೇ ಕಾಗದದ ಮೇಲೆ ಮೂಡಿಸತೊಡಗಿದರು ಇಂದಿರಮ್ಮ. ಹೊಸ ಕತೆ ಆಗಷ್ಟೇ ಮಗುವಿಗೆ ಜನ್ಮವಿತ್ತ ತಾಯಿಯಂತೆ ನಿಟ್ಟುಸಿರು ಬಿಟ್ಟು ಮುಗುಳ್ನಕ್ಕಿತು.



ಲೇಖಕರು

ಡಾ. ಎಸ್.ವಿ. ಗೌರಿ
ಭಾರತಿ ಎನ್‌ಕ್ಲೇವ್, ಗದ್ದಿಗೆ ಮೇನ್ ರೋಡ್, ಬೋಗಾದಿ
ಮೈಸೂರು–26.
ಮೊ : 9480085110

ವಾರಭವಿಷ್ಯ

10.05.2026 ರಿಂದ 16.05.2026

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:–ರವಿ–ಮೇಷ, ವೃಷಭ, ಚಂದ್ರ– ಮಕರ, ಕುಂಭ, ಮೀನ, ಮೇಷ, ಕುಜ–ಮೀನ, ಬುಧ–ಮೇಷ, ಗುರು–ಮಿಥುನ, ಶುಕ್ರ–ವೃಷಭ, ಶನಿ–ಮೀನ, ರಾಹು–ಕುಂಭ ಮತ್ತು ಕೇತು–ಸಿಂಹ



ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ್ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
'ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ'
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ: 9740973224, 9739548720

ಮೇಷ (ಚು,ಚೆ,ಲ,ಲಿ,ಲು,ಲೆ,ಲೂ,ಅ)

ವಾರದ ಆದಿಗೆ ಹಣಕಾಸಿನ ಪರಿಸ್ಥಿತಿಯಲ್ಲಿ ಸುಧಾರಣೆ ಕಂಡು ಬರುವುದು. ವೃತ್ತಿ ಜೀವನದಲ್ಲಿ ನೂತನ ಬೆಳವಣಿಗೆಗಳನ್ನು ಕಾಣುವಿರಿ. ಇದು ನಿಮ್ಮ ವೈಯಕ್ತಿಕ ಜೀವನದ ಮೇಲೆ ಧನಾತ್ಮಕ ಪರಿಣಾಮ ಬೀರಲಿದೆ. ಮನೆಯಲ್ಲಿ ಭಿನ್ನಾಭಿಪ್ರಾಯಗಳಿಗೆ ಅವಕಾಶ ನೀಡದಿರಿ. ಸಪ್ತಾಹದ ಕಡೆಗೆ ಎದುರಾಗುವ ವಿಷಮ ಪರಿಸ್ಥಿತಿಯನ್ನು ಸಮರ್ಥವಾಗಿ ಎದುರಿಸುವಿರಿ. ಆಗಬಹುದಾದ ಅಪಘಾತಗಳಿಂದ ಬಚಾವಾಗಲು ವಾಹನ ನಿಧಾನವಾಗಿ ಚಲಿಸಿ.

ಶ್ರೀ ಗಣಪತಿ ಪೂಜೆ, ಶುಭ ಸಂಖ್ಯೆ–2

ವೃಷಭ (ಇ,ಉ,ಎ,ಒ,ವ,ವಿ,ವು,ವೆ,ವೊ)

ಉದ್ಯೋಗ ನಿಮಿತ್ತ ಪ್ರಯಾಣ ಕೈಗೊಳ್ಳಬೇಕಾಗಬಹುದು. ಗುರುಬಲವಿದೆ. ನಿರೀಕ್ಷಿತ ಕೆಲಸ ಕಾರ್ಯಗಳು ಯಶಸ್ಸಿನ ಹಾದಿಯಲ್ಲಿ ಸಾಗುವುದು. ವೆಚ್ಚಗಳು ಹೆಚ್ಚಾದಾಗ ಆದಾಯವು ತಾನಾಗಿಯೇ ಹೆಚ್ಚುವುದು. ಮನೆಯಲ್ಲಿ ಮಂಗಳ ಕಾರ್ಯಗಳು ನಡೆಯುವುದು. ನಿಮ್ಮ ರಾಶ್ಯಾಧಿಪತಿ ಸ್ವಕ್ಷೇತ್ರದಲ್ಲಿ ಧನಲಾಭ, ಮನಸ್ಸಿಗೆ ಸೌಖ್ಯ. ಚಿಂತಿಸಿದ ಕಾರ್ಯಗಳು ಫಲಿಸುವುದು. ಉತ್ತಮ ಸ್ತ್ರೀ ಸಂಗ. ವಾರಾಂತ್ಯಕ್ಕೆ ಟ್ರಿಪ್ ಮೂಡ್.

ಶ್ರೀ ಲಲಿತಾಸಹಸ್ರನಾಮ ಪಠಿಸಿ. ಶುಭ ಸಂಖ್ಯೆ–3

ಮಿಥುನ (ಕ,ಕಿ,ಕು,ಘ,ಙ,ಛ,ಕೆ,ಕೊ,ಹ)

ವೃತ್ತಿ ಸ್ಥಳದಲ್ಲಿ ಅತಿಯಾದ ಕಾರ್ಯಭಾರ ಹಾಗೂ ಒತ್ತಡವಿರುತ್ತದೆ. ಚತುರರಾದ ನೀವು ಎಲ್ಲವನ್ನೂ ಸ್ಫೂರ್ತಿಯಿಂದ ನಿಭಾಯಿಸುವಿರಿ. ಧನ–ಧಾನ್ಯ ಲಾಭ ಸುಭೋಜನ, ಶಯನ ಸುಖಗಳನ್ನು ಅನುಭವಿಸುವಿರಿ. ವಿದ್ಯಾರ್ಥಿಗಳು ವಿದ್ಯಾಪ್ರಸಂಗಗಳಲ್ಲಿ ಅತಿಶಯವಾದ ಸಾಧನೆಯನ್ನು ಮಾಡುವರು. ಕಲಾ ಕ್ಷೇತ್ರದವರಿಗೆ ಸುಸಮಯ. ಕೆಲವೊಮ್ಮೆ ಶತ್ರುಗಳ ಕೈ ಮೇಲೆನಿಸಬಹುದು. ಮಾತೃಶ್ರೀಯವರ ಆರೋಗ್ಯದ ಕಡೆ ನಿಗಾ ವಹಿಸಿ.

ಶ್ರೀ ಅಷ್ಟಾಕ್ಷರಿ ಮಂತ್ರ ಜಪ. ಶುಭ ಸಂಖ್ಯೆ–1

ಕಟಕ (ಹೊ,ಹು,ಹೆ,ಡ,ಡಿ,ಡು)

ಈ ವಾರದಲ್ಲಿ ಹಲವು ಮೂಲಗಳಿಂದ ಹಣ ಗಳಿಕೆಯಾದರೂ ಕೈ ಮೀರಿದ ಖರ್ಚುಗಳಿಂದ ಪರ್ಸ್ ಖಾಲಿ. ಕಚೇರಿಯಲ್ಲಿ ಕೆಲಸದ ಒತ್ತಡ ಹಾಗೂ ಜವಾಬ್ದಾರಿಗಳು ಹೆಚ್ಚುವುದರಿಂದ ಮಾನಸಿಕ ದುಗುಡತೆ, ಮನೆಯಲ್ಲಿ ಸತಿ–ಸುತರಲ್ಲಿ ಸೌಹಾರ್ದತೆಯ ಕೊರತೆ ಕಂಡು ಬರುವುದು. ಹಿರಿಯರೊಬ್ಬರ ಆರೋಗ್ಯಕ್ಕೆ ಕುಂದುಂಟಾಗಬಹುದು. ವಾರಾಂತ್ಯಕ್ಕೆ ಪ್ರತಿಷ್ಠಿತ ವ್ಯಕ್ತಿಗಳ ಭೇಟಿಯಿಂದ ಲಾಭವಾಗುವುದು.

ಶ್ರೀ ರಾಜರಾಜೇಶ್ವರಿ ಅಷ್ಟಕ ಪಠಿಸಿ. ಶುಭ ಸಂಖ್ಯೆ–9

ಸಿಂಹ (ಮ,ಮಿ,ಮು,ಮೊ,ಮೆ,ಟ,ಟಿ,ಟು,ಟೆ)

ಆರ್ಥಿಕ ಪರಿಸ್ಥಿತಿಯಲ್ಲಿ ಗಣನೀಯ ಪ್ರಗತಿ. ಮನೆಯಲ್ಲಿ ಹರ್ಷದಾಯಕ ವಾತಾವರಣ. ಹಳೆಯ ಮಿತ್ರರ ಮಿಲನದಿಂದ ಉಲ್ಲಾಸ, ಸ್ನೇಹ ಕೂಟಗಳು. ನಿವೇಶನ, ಗೃಹ ಖರೀದಿಗೆ ಗುರುಬಲವಿದೆ. ಪ್ರಯತ್ನಿಸಬಹುದು. ಗುರುಜನರ ಭೇಟಿ ಹಾಗೂ ಧಾರ್ಮಿಕ ಕಾರ್ಯಗಳಲ್ಲಿ ಭಾಗಿತ್ವ, ರಾಹು–ಕೇತುಗಳು ಶುಭರಿಲ್ಲ. ಸಮಾಜಬಾಹಿರ ಕೆಲಸಗಳಿಗೆ ಪ್ರೇರಣೆ ಆಗಬಹುದು. ಮನಸ್ಸು ನಿಯಂತ್ರಣದಲ್ಲಿ ಇರಲಿ.

ಶ್ರೀ ಸೂರ್ಯಾಷ್ಟಕ ಪಠಿಸಿ. ಶುಭ ಸಂಖ್ಯೆ–4

ಕನ್ಯಾ (ಟೊ,ಪ,ಪಿ,ಪು,ಷ,ಣ,ಠ,ಪೆ,ಪೊ)

ನಿರ್ಧಾರಗಳನ್ನು ಜಾಗರೂಕತೆಯಿಂದ ತೆಗೆದುಕೊಳ್ಳಿ. ಏಕೆಂದರೆ ಇದು ನಿಮ್ಮ ಭವಿಷ್ಯದ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇರುತ್ತದೆ. ಸಪ್ತಮ ಶನಿ ಇರುವ ಕಾರಣ ಕುಟುಂಬ ಸಂಬಂಧಗಳಲ್ಲಿ ಬಿರುಕು ಉಂಟಾಗದಂತೆ ಎಚ್ಚರ ವಹಿಸಿ. ಆಡಿದ ಮಾತು ಬಿಟ್ಟ ಬಾಣ ವಾಪಸ್ಸು ತೆಗೆದುಕೊಳ್ಳಲಾಗದು. ಏಜೆನ್ಸಿ ವ್ಯವಹಾರ ಮಾಡುವವರಿಗೆ ಉತ್ತಮ ಸಮಯ, ಹಣವೂ ಕೈ ಸೇರುತ್ತದೆ. ದೈವ ಚಿಂತನೆಯಿಂದ ಮನಸ್ಸಿಗೆ ನೆಮ್ಮದಿ.

ಶ್ರೀ ವಿಷ್ಣು ಸಹಸ್ರನಾಮ ಪಠಿಸಿ. ಶುಭ ಸಂಖ್ಯೆ–5

ತುಲಾ (ರ,ರಿ,ರು,ರೆ,ರೊ,ತ,ತಿ,ತು,ತೆ)

ಶುಭ ಸ್ಥಾನ ಸ್ಥಿತ ಗ್ರಹಗಳ ಪರಿಣಾಮ ಲಾಭದಾಯಕ ಅವಕಾಶಗಳು ಒದಗಿ ಬರುತ್ತವೆ. ವಿವೇಕಿಗಳಾದ ನೀವು ಬಂದ ಅವಕಾಶಗಳನ್ನು ಸದುಪಯೋಗ ಮಾಡಿಕೊಳ್ಳಿ, ಸಾಹಿತ್ಯ, ಕಲಾ ಕ್ಷೇತ್ರದಲ್ಲಿರುವವರಿಗೆ ಸರ್ಕಾರದಿಂದ, ಸಂಘ–ಸಂಸ್ಥೆಗಳಿಂದ ಪ್ರಶಸ್ತಿ ಪುರಸ್ಕಾರಗಳು ಲಭಿಸೀತು. ಹಲವರಿಗೆ ಪುತ್ರ ಸಂತಾನದ ಸಂತಸ. ಕೆಲವರಿಗೆ ಮದುವೆ ನಿಶ್ಚಿತಾರ್ಥದ ಸಂತೋಷ. ವಾರಾಂತ್ಯಕ್ಕೆ ಮನೆ ಮಂದಿಯೊಂದಿಗೆ ಪಿಕ್‌ನಿಕ್.

ಶ್ರೀ ಸತ್ಯನಾರಾಯಣ ಆರಾಧನೆ. ಶುಭ ಸಂಖ್ಯೆ–8

ವೃಶ್ಚಿಕ (ತೊ,ನ,ನಿ,ನು,ನೆ,ನೊ,ಯು,ಯಿ,ಯ)

ಹೆಚ್ಚು ಹಣ ಕೈಗೆ ಬಂದಂತೆ ಹೆಚ್ಚು ಖರ್ಚುಗಳೂ ಎದುರಾಗುತ್ತದೆ. ಜಲಜನ್ಯ ವಸ್ತು ವ್ಯಾಪಾರಿಗಳಿಗೆ ಹೆಚ್ಚು ಧನಲಾಭವಾಗುವುದು. ಕುಟುಂಬ ಸದಸ್ಯರಲ್ಲಿ ಸಾಮರಸ್ಯದ ಕೊರತೆಯಿಂದ ಮನಃಶಾಂತಿಗಾಗಿ ಪರದಾಡುವಿರಿ. ಹೆಚ್ಚಿನ ಗ್ರಹಗಳು ನಿಮ್ಮ ಸಹಾಯಕ್ಕಿಲ್ಲದ ಕಾರಣ ಜೂಜು–ಮದ್ಯಗಳಿಂದ ದೂರವಿದ್ದರೆ ಕ್ಷೇಮ. ಸಮಾಜಘಾತುಕ ಜನರ ಸಹವಾಸ ಮುಳುವಾಗುವುದು. ಹಿರಿಯರ ಮಾರ್ಗದರ್ಶನದ ಅವಶ್ಯಕತೆ ಇದೆ.

ಶ್ರೀ ಶಿರಡಿ ಸಾಯಿ ದರ್ಶನ. ಶುಭ ಸಂಖ್ಯೆ–9

ಧನುಸ್ಸು (ಯೆ,ಯೊ,ಬ,ಬಿ,ಬು,ಧ,ಭ,ಢ,ಬೆ)

ಧನ–ಧಾನ್ಯ ವೃದ್ಧಿ, ಶರೀರ ಸೌಖ್ಯ, ಅಧಿಕಾರಿ ವರ್ಗದವರ ಭೇಟಿಯಿಂದ ಕಾರ್ಯ ಸಾಧನೆ. ವ್ಯಾಪಾರ ವ್ಯವಹಾರಗಳಲ್ಲಿ ನಿರೀಕ್ಷೆ ಮೀರಿ ಲಾಭವನ್ನು ಹೊಂದುವಿರಿ. ಮನೆಯಲ್ಲಿ ಶುಭ ಕಾರ್ಯಕ್ಕೆ ನಾಂದಿ. ಸ್ವಂತ ಕೆಲಸಗಳಿಗೆ ಸ್ವಜನರ ಸಹಕಾರ ದೊರಕುವುದು. ವಿದ್ಯಾ ಪ್ರಸಂಗಗಳಲ್ಲಿ ಪರಿಶ್ರಮಕ್ಕೆ ಗಣನೆ ದೊರೆಯುತ್ತದೆ. ಆಮದು–ರಫ್ತು ವ್ಯವಹಾರಿಗಳಿಗೆ ದೊಡ್ಡ ಆರ್ಡರ್ ದೊರೆಯುವ ಸಂಭವ.

ಶ್ರೀ ನವಗ್ರಹ ದರ್ಶನ. ಶುಭ ಸಂಖ್ಯೆ–6

ಮಕರ (ಬೊ,ಜ,ಜೆ,ಶಿ,ಶು,ಶೆ,ಶೊ,ಗ,ಗಿ)

ವಾರದ ಆದಿಗೆ ನಿಮ್ಮ ರಾಶಿಗೆ ಬರುವ ಚಂದ್ರನಿಂದ ಧನ–ಕನಕ ವಸ್ತು ಪ್ರಾಪ್ತಿ. ಗೃಹ ಸುಖ, ಸ್ತ್ರೀ, ಸುಖ, ಸಜ್ಜನರ ಭೇಟಿಯಿಂದ ಲಾಭ. ಆದಾಯ–ವೆಚ್ಚಗಳು ಸಮನಾಗಿ ನಡೆಯುವುದು. ರಾಹು–ಕೇತುಗಳು ಶುಭರಿಲ್ಲದ ಪರಿಣಾಮ ಮನೆಯಲ್ಲಿ ಸತಿ–ಸುತರಲ್ಲಿ ಸೌಹಾರ್ದತೆಯ ಕೊರತೆ. ವೃತ್ತಿ ಸ್ಥಳದಲ್ಲಿ ಕೆಲಸದ ಒತ್ತಡ, ಜವಾಬ್ದಾರಿಗಳು ಹೆಚ್ಚಾಗುವುದು. ಫುಡ್ ಪಾಯ್ಸನ್ ಬಗ್ಗೆ ಎಚ್ಚರದಿಂದಿರಿ.

ಶ್ರೀ ರಾಹು–ಕೇತು ಸ್ತೋತ್ರ ಪಠಿಸಿ. ಶುಭ ಸಂಖ್ಯೆ–7

ಕುಂಭ (ಗು,ಗೆ,ಗೊ,ಸ,ಸಿ,ಸು,ಸೆ,ಸೊ,ದ)

ಸಪ್ತಾಹದ ಆದಿಗೆ ವಿತ್ತ ಲಾಭ, ಸುಖ–ಸಂತೋಷ, ಮನಸ್ಸು ಪ್ರಫುಲ್ಲವಾಗಿರುತ್ತದೆ. ಬಲ್ಲವರ ಒಡನಾಟ ಬೆಲ್ಲವನು ಮೆದ್ದಂತೆ ಎಂಬ ನಾಣ್ನುಡಿಯಂತೆ ಉತ್ತಮರ ಸಹವಾಸದಲ್ಲಿರಲು ಪ್ರಯತ್ನಿಸಿ. ಇದರಿಂದ ಮನಸ್ಸು ಪ್ರಸನ್ನವಾಗಿರುತ್ತದೆ. ಯತ್ನ ಕಾರ್ಯಗಳಲ್ಲಿ ಪ್ರತಿಸ್ಪರ್ಧಿಗಳು ಹಿಂದೆ ಸರಿಯುವರು. ಪ್ರಯಾಣಗಳಿಂದಲೂ, ಸರ್ಕಾರದಿಂದಲೂ ಪ್ರತಿಫಲಗಳುಂಟು. ಕೃಷಿಕರಿಗೆ ಶ್ರಮಕ್ಕೆ ತಕ್ಕ ಪ್ರತಿಫಲ ದೊರೆಯುವುದು.

ಶ್ರೀ ಶನ್ಯಾಷ್ಟೋತ್ತರ ಪಠಿಸಿ. ಶುಭ ಸಂಖ್ಯೆ–5

ಮೀನ (ದಿ,ದು,ಖ,ಝ,ಥ,ತೆ,ದೊ,ಚ,ಚಿ)

ಇದು ಸಮ್ಮಿಶ್ರ ಫಲಗಳ ವಾರ. ಕುಟುಂಬದಲ್ಲಿ ಸಡಗರದ ಸಂಚಲನ. ಉತ್ತಮ ಅವಕಾಶಗಳು ಕೈ ತಪ್ಪದಂತೆ ನೋಡಿಕೊಳ್ಳಿ, ಶ್ರೀಮತಿಯ ಮಾತಿಗೆ ಮಾನ್ಯತೆ ನೀಡಿ, ಒಳಿತಾಗುತ್ತದೆ. ಹೆಚ್ಚಿನ ಆದಾಯವಾದರೂ ಖರ್ಚುಗಳೇ ಹೆಚ್ಚು. ಕೃಷಿಕರಿಗೆ ನಿರೀಕ್ಷಿತ ಪ್ರತಿಫಲವಿಲ್ಲ. ಸಾಡೇಸಾತಿ ಪ್ರಭಾವವಿದೆ. ಸಮಾಜ ವಿರೋಧಿ ಕೃತ್ಯಗಳಿಗೆ ಮನಸ್ಸಾಗಬಹುದು. ನಿಮ್ಮ ಆರೋಗ್ಯದ ಬಗ್ಗೆ ಅಸಡ್ಡೆ ಬೇಡ. ಹಾಗೂ ವಿಶ್ರಾಂತಿ ತೆಗೆದುಕೊಳ್ಳಿ.

ಶ್ರೀ ಗುರುರಾಯರ ಉಪಾಸನೆ. ಶುಭ ಸಂಖ್ಯೆ–9

ಆಸ್ಪತ್ರೆಯಲ್ಲಿ ಉತ್ತಮ ಆರೋಗ್ಯ ಸೇವೆ ನೀಡಿ

ವೈದ್ಯರಿಗೆ ಶಾಸಕ ದರ್ಶನ್ ಧ್ರುವನಾರಾಯಣ್ ಸೂಚನೆ



ವೈದ್ಯರ ಸಭೆ ನಡೆಸುತ್ತಿರುವ ಶಾಸಕ ದರ್ಶನ್ ಧ್ರುವನಾರಾಯಣ್.

ನಂಜನಗೂಡು: ತಾಯಿ ಮತ್ತು ಮಕ್ಕಳ ಆಸ್ಪತ್ರೆ ಮತ್ತು ಸಾರ್ವಜನಿಕ ಆಸ್ಪತ್ರೆಗೆ ಬರುವ ರೋಗಿಗಳಿಗೆ ಸಮರ್ಪಕವಾಗಿ ಉತ್ತಮವಾದ ಆರೋಗ್ಯ ಸೇವೆಯನ್ನು ಒದಗಿಸಬೇಕು ಎಂದು ಶಾಸಕ ದರ್ಶನ್ ಧ್ರುವನಾರಾಯಣ ಆಸ್ಪತ್ರೆಯ ವೈದ್ಯಾಧಿಕಾರಿಗಳಿಗೆ ಸೂಚನೆ ನೀಡಿದರು.

ನಗರದ ಸಾರ್ವಜನಿಕ ಆಸ್ಪತ್ರೆಯ ಸಭಾಂಗಣದಲ್ಲಿ ಆಸ್ಪತ್ರೆಯ ವೈದ್ಯಾಧಿಕಾರಿಗಳ ಮತ್ತು ಆಡಳಿತ ಅಧಿಕಾರಿಗಳ ಜೊತೆ ತುರ್ತು ಸಭೆಯನ್ನು ನಡೆಸಿ ಮಾತನಾಡಿದರು.

ತಾಯಿ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ತುರ್ತು ಸಂದರ್ಭದಲ್ಲಿ ಚಿಕಿತ್ಸೆ ನೀಡಲಾಗುತ್ತಿಲ್ಲ, ಸಾಮಾನ್ಯ ಹೆರಿಗೆಯಾದರು ಸಹ ಮೈಸೂರಿಗೆ ಕರೆದುಕೊಂಡು ಹೋಗುವಂತೆ ಶಿಫಾರಸು ಮಾಡಲಾಗುತ್ತಿದೆ ಮತ್ತು ಸಾರ್ವಜನಿಕ ಆಸ್ಪತ್ರೆಯಲ್ಲಿ ತುರ್ತು ಸಂದರ್ಭದಲ್ಲಿ ಚಿಕಿತ್ಸೆಗೆ ವೈದ್ಯರು ಮುಂದಾಗುತ್ತಿಲ್ಲ, ಜೊತೆಗೆ ಆಸ್ಪತ್ರೆಯಲ್ಲಿ ಅತ್ಯಾಧುನಿಕ ಸ್ಕ್ಯಾನಿಂಗ್ ಯಂತ್ರಗಳ ಸೌಲಭ್ಯವಿದ್ದರೂ ಸಹ ಹೊರಗಡೆ ಸ್ಕ್ಯಾನಿಂಗ್ ಮಾಡಿಸುವಂತೆ ಚೀಟಿ ಪಡೆದುಕೊಳ್ಳುತ್ತಾರೆ ಎಂಬ ಆರೋಪ ಸಾರ್ವಜನಿಕ ವಲಯದಲ್ಲಿ ಕೇಳಿ ಬರುತ್ತಿದೆ. ಆದ್ದರಿಂದ ವೈದ್ಯರು ಮತ್ತು ವೈದ್ಯಾಧಿಕಾರಿಗಳ ನಡುವೆ ಬಾಂಧವ್ಯವಿಟ್ಟುಕೊಂಡು ಕೆಲಸದಲ್ಲಿ ನಿರತರಾಗಬೇಕು, ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ರೋಗಿಗಳಿಗೆ ಉತ್ತಮ ಚಿಕಿತ್ಸೆ ನೀಡಿ ನೆರವಾಗುವ ಜೊತೆಗೆ ಆಸ್ಪತ್ರೆಗೆ ಬರುವ ಎಲ್ಲಾ ಸಾರ್ವಜನಿಕರಿಗೂ ಉತ್ತಮ ಗುಣಮಟ್ಟದ ಚಿಕಿತ್ಸೆ ಲಭ್ಯವಾಗುವಂತೆ ಕ್ರಮ ವಹಿಸಬೇಕು ಎಂದು ಸೂಚಿಸಿದರು.

ಆಸ್ಪತ್ರೆಯ ಆಡಳಿತ ಅಧಿಕಾರಿ ನಾಗರಾಜು ಮಾತನಾಡಿ, ನಂಜನಗೂಡಿನ ಜನಸಂಖ್ಯೆಯ ಪ್ರಮಾಣದಲ್ಲಿ ಹೆಚ್ಚುವರಿಯಾಗಿದ್ದು, ಆಸ್ಪತ್ರೆಗೆ ದಿನನಿತ್ಯ 800 ರಿಂದ 900 ಹೊರ ರೋಗಿಗಳು ಬರುತ್ತಿದ್ದಾರೆ, ಆಸ್ಪತ್ರೆಯಲ್ಲಿ ವೈದ್ಯರು ಮತ್ತು ಸಿಬ್ಬಂದಿಗಳ ಕೊರತೆಯಿಂದ ಆಸ್ಪತ್ರೆಯಲ್ಲಿ ವೈದ್ಯರ ಮೇಲೆ ಹೆಚ್ಚಿನ ಕೆಲಸದ ಒತ್ತಡವಿದೆ. ಆದರೂ ಸಹ ವೈದ್ಯರು ರೋಗಿಗಳಿಗೆ ಸಮರ್ಪಕವಾದ ಚಿಕಿತ್ಸೆ ನೀಡುತ್ತಿದ್ದಾರೆ. ಗಂಭೀರವಾದ ಕೆಲವು ಪ್ರಕರಣಗಳಿರುವ ದಿನಕ್ಕೆ 15 ರಿಂದ 20 ರೋಗಿಗಳನ್ನು ಮಾತ್ರ ಮೈಸೂರಿನ ಆಸ್ಪತ್ರೆಗೆ ಹೋಗುವಂತೆ ಸೂಚನೆ ನೀಡಲಾಗುತ್ತಿದೆ, ತಾಯಿ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಗಳ ಕೊರತೆ ಇಲ್ಲ ಸೂಕ್ತ ಚಿಕಿತ್ಸೆ ಒದಗಿಸಲಾಗುತ್ತಿದೆ ಎಂದು ಹೇಳಿದರು.

ನಂತರ ಶಾಸಕರಾದ ದರ್ಶನ್ ಮಾತನಾಡಿ, ಕಾಡಂಚಿನ ಪ್ರದೇಶಗಳಲ್ಲಿ ಅಪಘಾತಗಳಾದಲ್ಲಿ ತುರ್ತು ಸಂದರ್ಭದಲ್ಲಿ ಆಂಬ್ಯುಲೆನ್ಸ್ ಸರಿಯಾದ ಸಮಯಕ್ಕೆ ಸೇವೆ ದೊರಕುತ್ತಿಲ್ಲ ಎಂಬ ದೂರು ಸಾಕಷ್ಟು ಕೇಳಿಬರುತ್ತಿರುವುದರಿಂದ ಆಸ್ಪತ್ರೆಯಲ್ಲಿರುವ ಒಂದು ಆಂಬ್ಯುಲೆನ್ಸ್ ಅನ್ನು ಯಡಿಯಾಲ ಪ್ರಾಥಮಿಕ ಕೇಂದ್ರಗಳಲ್ಲಿ ನಿಲ್ಲಿಸಿ ಆ ಭಾಗದ ಜನರಿಗೆ ಸೂಕ್ತ ಸಮಯದಲ್ಲಿ ಆಂಬ್ಯುಲೆನ್ಸ್ ಸೇವೆ ದೊರಕುವಂತೆ ಕ್ರಮವಹಿಸಬೇಕು ಎಂದರು.

ಮೇ 13, ವರುಣ ವಿಧಾನಸಭಾ ಕ್ಷೇತ್ರದಲ್ಲಿ ಜನರೊಂದಿಗೆ ಜನತಾದಳ ಕಾರ್ಯಕ್ರಮ



ಜನರೊಂದಿಗೆ ಜನತಾದಳ ಕಾರ್ಯಕ್ರಮದ ಪೋಸ್ಟರ್ ಅನ್ನು ಜೆಡಿಎಸ್ ಮುಖಂಡರು ಬಿಡುಗಡೆ ಮಾಡಿದರು.

ತಿ.ನರಸೀಪುರ, ಮೇ 9– ಜೆಡಿಎಸ್ ರಾಜ್ಯ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಅವರ ನೇತೃತ್ವದಲ್ಲಿ ವರುಣ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಜನರೊಂದಿಗೆ ಜನತಾದಳ ಕಾರ್ಯಕ್ರಮವನ್ನು ಮೇ13 ರಂದು ಆಯೋಜಿಸಲಾಗಿದೆ ಎಂದು ವರುಣ ವಿಧಾನಸಭಾ ಕ್ಷೇತ್ರದ ಜೆಡಿಎಸ್ ಪಕ್ಷದ ಮುಖಂಡ ಅಭಿಷೇಕ್ ಮಣೇಗಾರ್ ಹೇಳಿದರು.

ಪುರಸಭೆ ವ್ಯಾಪ್ತಿಯ ಹಳೇ ತಿರುಮಕೂಡಲಿನ ಆದಿ ಚುಂಚನ ಗಿರಿ ರಜತೋತ್ಸವ ಭವನದಲ್ಲಿ ಶನಿವಾರ ಕರೆಯಲಾಗಿದ್ದ ಪೂರ್ವಭಾವಿ ಸಭೆಯಲ್ಲಿ ಭಾಗವಹಿಸಿ ಕಾರ್ಯಕರ್ತರು ಹಾಗೂ ಮುಖಂಡರೊಟ್ಟಿಗೆ ಚರ್ಚಿಸಿ,ಕಾರ್ಯಕ್ರಮದ ರೂಪು ರೇಷೆಗಳ ಬಗ್ಗೆ ಅಭಿಪ್ರಾಯ ಸಂಗ್ರಹಿಸಿ ಅವರು ಮಾತನಾಡಿದರು.

ನಿಖಿಲ್ ಕುಮಾರ ಸ್ವಾಮಿಯವರು ಜಾತ್ಯಾತೀತ ಜನತಾ ದಳದ ಭರವಸೆಯ ಯುವ ನಾಯಕರಾಗಿದ್ದು ವಿಭಿನ್ನ ಆಲೋಚನೆಯೊಂದಿಗೆ ಜನರೊಂದಿಗೆ ಜನತಾದಳ ಎಂಬ ಕಾರ್ಯಕ್ರಮವನ್ನು ರಾಜ್ಯಾದ್ಯಂತ ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿದ್ದಾರೆ. ಈವರೆವಿಗೆ 70 ಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ ಕಾರ್ಯಕ್ರಮ ನಡೆಸಿದ್ದು ಇದೇ ತಿಂಗಳು 13ರಂದು ವರುಣ ಕ್ಷೇತ್ರದಲ್ಲಿ ಕಾರ್ಯಕ್ರಮ ಮಾಡಲಾಗುತ್ತಿದ್ದು, ವರುಣ ಕ್ಷೇತ್ರ ವ್ಯಾಪ್ತಿಯ ಮೆಲ್ಲಹಳ್ಳಿ ಗ್ರಾಮ ಸಮೀಪದ ಶಾಂತಲ ದೇವಿ ಕಲ್ಯಾಣ ಮಂಟಪದ ಬಳಿ ಇರುವ ವಿಶಾಲವಾದ ಮೈದಾನದಲ್ಲಿ ಕಾರ್ಯಕ್ರಮ ನಡೆಸಲಾಗುತ್ತಿದೆ. ಕಾರ್ಯ ಕ್ರಮದಲ್ಲಿ ಜೆಡಿಎಸ್ ಪಕ್ಷದ ಮುಂಚೂಣಿ ನಾಯಕರು, ಪ್ರಮುಖ ಮುಖಂಡರು ಭಾಗವಹಿಸುತ್ತಿದ್ದು, ಕಾರ್ಯಕ್ರಮದಲ್ಲಿ 10 ಸಾವಿರಕ್ಕೂ ಹೆಚ್ಚು ಮಂದಿ ಕಾರ್ಯಕರ್ತರು ಭಾಗವಹಿಸಲಿದ್ದಾರೆ ಎಂದು ಮಾಹಿತಿ ನೀಡಿದರು.

ವರುಣ ಕ್ಷೇತ್ರದ ಜೆಡಿಎಸ್ ಅಧ್ಯಕ್ಷ ಕೆಂಪಯ್ಯನಹುಂಡಿ ಬಾಲಕೃಷ್ಣ ಮಾತನಾಡಿ ಪಕ್ಷದ ತತ್ವ ಹಾಗೂ ಸಿದ್ಧಾಂತಗಳನ್ನು ಜನರಿಗೆ ತಲುಪಿಸುವ ಉದ್ದೇಶದಿಂದ ಈ ಕಾರ್ಯಕ್ರಮವನ್ನು ಆಯೋಜಿಸಲಾಗಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರನ್ನು ಭಾಗವಹಿಸಲು ಕಾರ್ಯಕರ್ತರು ಪ್ರೇರೇಪಿಸಬೇಕು ಎಂದು ಕರೆ ನೀಡಿದರು.

ಸಭೆಯಲ್ಲಿ ಜೆಡಿಎಸ್‌ನ ಹಿರಿಯ ಮುಖಂಡರಾದ ಕೆಂಪಯ್ಯನಹುಂಡಿ ಚನ್ನೇಗೌಡ, ಎಂ.ಶಿವಪ್ರಸಾದ್, ಉಪ್ಪಾರಬಸವರಾಜು, ಆಟೋ ಕೃಷ್ಣ, ಹಿಟ್ಟುವಳ್ಳಿ ಪ್ರಭುಸ್ವಾಮಿ, ಯಡದೊರೆ ಸತೀಶ್, ನಾಡನಹಳ್ಳಿ ಸಿದ್ದರಾಜು, ಮಾದೇಗೌಡನ ಹುಂಡಿ ಚೇತು, ಅರುಣ, ಲಲಿತಾದ್ರಿಪುರ ಹರ್ಷ, ಹುನುಗನಹಳ್ಳಿ ಕೃಷ್ಣ, ಚಂದ್ರ, ರಂಗನಾಥಪುರ ಬಸವರಾಜು ಹಾಜರಿದ್ದರು.

ಜಕ್ಕಹಳ್ಳಿ ಗ್ರಾಮದಲ್ಲಿ ನಾಳೆ ಅಂಬೇಡ್ಕರ್ ಪ್ರತಿಮೆ ಅನಾವರಣ



ಸರಗೂರು: ಎಚ್.ಡಿ.ಕೋಟೆ ತಾಲೂಕಿನ ಜಕ್ಕಹಳ್ಳಿ ಗ್ರಾಮದಲ್ಲಿ ಮೇ 11ರಂದು ಡಾ.ಬಿ.ಆರ್.ಅಂಬೇಡ್ಕರ್ ಅವರ ಪ್ರತಿಮೆ ಅನಾವರಣ ಮಾಡಲಾಗುವುದು.

ಅಂದು ಬೆಳಗ್ಗೆ 11 ಗಂಟೆಗೆ ಮೈಸೂರಿನ ಗಾಂಧೀನಗರದ ಉರಿಲಿಂಗಿ ಪೆದ್ದಿ ಮಠದ ಜ್ಞಾನ ಪ್ರಕಾಶ್ ಸ್ವಾಮೀಜಿ ಪ್ರತಿಮೆ ಅನಾವರಣದ ವಿಧಿ ವಿಧಾನ ನೆರವೇರಿಸಲಿದ್ದು, ಸಮಾಜ ಕಲ್ಯಾಣ ಇಲಾಖೆ ಸಚಿವ ಡಾ.ಎಸ್.ಸಿ.ಮಹದೇವಪ್ಪ ಪ್ರತಿಮೆ ಅನಾವರಣಗೊಳಿಸಲಿದ್ದಾರೆ. ಕಾಯ್ರಕ್ರಮದ ಅಧ್ಯಕ್ಷತೆಯನ್ನು ಶಾಸಕ ಅನಿಲ್ ಚಿಕ್ಕಮಾದು ವಹಿಸಲಿದ್ದು, ಉದ್ಘಾಟನೆಯನ್ನು ಸಂಸದ ಸುನೀಲ್ ಬೋಸ್ ನೇರವೇರಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ, ಶಾಸಕ ದರ್ಶನ್ ಧ್ರುವನಾರಾಯಣ, ವಿಧಾನಪರಿಷತ್ ಸದಸ್ಯ ಶಿವಕುಮಾರ್, ಮಾಜಿ ಸಚಿವ ಎನ್. ಮಹೇಶ್ ಭಾಗವಹಿಸಲಿದ್ದಾರೆ.

ಸಾವಿರಾರೂ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ



ಎಸ್ಎಸ್ಎಲ್‌ಸಿ, ಪಿಯುಸಿ ಫಲಿತಾಂಶದಲ್ಲಿ ಉತ್ತಮ ಅಂಕ ಪಡೆದ ಸಾವಿರ ವಿದ್ಯಾರ್ಥಿಗಳಿಗೆ ಅಭಿನಂದಿಸಿದ ಶಾಸಕ ಅನಿಲ್ ಚಿಕ್ಕಮಾದು.

ಹೆಚ್.ಡಿ.ಕೋಟೆ: ಹೆಚ್.ಡಿ.ಕೋಟೆ ಎಸ್‌ಎಸ್‌ಎಲ್‌ಸಿ ಫಲಿತಾಂಶದಲ್ಲಿ ಮೈಸೂರು ಜಿಲ್ಲೆಗೆ ಹೆಚ್.ಡಿ.ಕೋಟೆ ಪ್ರಥಮ ಸ್ಥಾನ ಹಾಗೂ ರಾಜ್ಯಕ್ಕೆ ಏಳನೇ ರಾಂಕ್ ಬಂದಿದೆ ಎಂದು ಶಾಸಕ ಅನಿಲ್ ಚಿಕ್ಕಮಾದು ಹರ್ಷ ವ್ಯಕ್ತಪಡಿಸಿದರು.

ಪಟ್ಟಣದಲ್ಲಿರುವ ಕಾಕ ಭವನದಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಉನ್ನತ ಶ್ರೇಣಿ ಪಡೆದ ಒಂದು ಸಾವಿರ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡುವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ವಿದ್ಯಾರ್ಥಿಗಳಿಗೆ ತಾಲೂಕಿನಲ್ಲಿ ಶಿಕ್ಷಣ ಕ್ಷೇತ್ರವನ್ನು ಪ್ರಮುಖವಾಗಿ ಶೈಕ್ಷಣಿಕವಾಗಿ ಅಭಿವೃದ್ಧಿಪಡಿಸಲು ಸಾಕಷ್ಟು ಸತತ ಪ್ರಯತ್ನಗಳನ್ನು ಮಾಡುತ್ತಾ ಬಂದಿದೆ. ಆದರೆ ನಮ್ಮ ತಾಲೂಕಿನಲ್ಲಿ ಎಸ್‌ಎಸ್‌ಎಲ್‌ಸಿ ಫಲಿತಾಂಶ 9ನೇ ಸ್ಥಾನಕ್ಕೆ ಬಂದಿತ್ತು, ಹಾಗಾಗಿ ಈ ಬಾರಿ, ಉತ್ತಮ ಫಲಿತಾಂಶ ತರುವ ನಿಟ್ಟಿನಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಸಿ.ಎನ್.ರಾಜು ಅವರಿಗೆ ಸೂಚನೆ ನೀಡಲಾಗಿತ್ತು. ಹಾಗಾಗಿ ಎಲ್ಲಾ ಶಿಕ್ಷಕರನ್ನು ಒಗ್ಗೂಡಿಸಿ ಮಕ್ಕಳಿಗೆ ಉತ್ತಮ ಪಾಠ ಪ್ರವಚನ ಮಾಡುವುದರ ಮೂಲಕ ಈ ಬಾರಿ ಮೈಸೂರು ಜಿಲ್ಲೆಗೆ ಪ್ರಥಮ ಸ್ಥಾನ ಬಂದಿದೆ. ಇಂಥ ಒಂದು ಉತ್ತಮ ಫಲಿತಾಂಶ ತರಲು ಶಿಕ್ಷಣದಲ್ಲಿ ರಾಜಕೀಯ ಬೆರಸದೆ ಉತ್ತಮ ಕೆಲಸವನ್ನು ಮಾತ್ರ ಮಾಡಿದರೆ ಉತ್ತಮ ಫಲಿತಾಂಶ ಬರಲು ಸಾಧ್ಯ, ಆದ್ದರಿಂದ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಶಿಕ್ಷಕರು, ವಿದ್ಯಾರ್ಥಿಗಳಿಗೆ ಅಭಿನಂದನೆ ಸಲ್ಲಿಸುತ್ತೇನೆ ಎಂದರು.

ತಾಲೂಕಿಗೆ ಆದರ್ಶ ಶಾಲೆ, ಏಕಲವ್ಯ ಶಾಲೆ ಮತ್ತು ಕಿತ್ತೂರು ರಾಣಿ ಚೆನ್ನಮ್ಮ ಶಾಲೆ ಮಂಜೂರಾಗಲು ಸಂಸದ ದಿ: ಆರ್. ಧ್ರುವ ನಾರಾಯಣ್‌ರವರ ಶ್ರಮವಿತ್ತು, ಅಲ್ಲದೇ ನನ್ನ ತಂದೆಯವರಾದ ದಿ: ಮಾಜಿ ಶಾಸಕ ಚಿಕ್ಕಮಾದುರವರ ಶ್ರಮವೂ ಸಹ ಇತ್ತು ಎಂದು ತಂದೆ ಮತ್ತು ರಾಜಕೀಯ ಗುರುಗಳನ್ನು ನೆನೆದರು.

ಪೊಲೀಸ್ ವರಿಷ್ಠಾಧಿಕಾರಿ ರವಿ ಡಿ ಚೆನ್ನಣ್ಣ ಮಾತನಾಡಿ, ಇಂದಿನ ದಿನಗಳಲ್ಲಿ ಓದು, ಕಲಿಕೆ, ಸಂಸ್ಕಾರ, ಸಮಯ ಪ್ರಜ್ಞೆ ಹೆಚ್ಚಾಗಬೇಕು, ಸಭೆ ಸಮಾರಂಭಗಳು, ಹೊಗಳಿಕೆಯ ಕಾರ್ಯಕ್ರಮಗಳು ಕಡಿಮೆಯಾಗಬೇಕು ಆಗ ಮಾತ್ರ ಒಂದು ಶಿಕ್ಷಣ ಕ್ಷೇತ್ರ ಅಭಿವೃದ್ಧಿ ಸಾಧಿಸಲು ಸಾಧ್ಯ ಎಂದರು.

ಕ್ಷೇತ್ರ ಶಿಕ್ಷಣಾಧಿಕಾರಿ ಸಿ.ಎನ್. ರಾಜು ಮಾತನಾಡಿದರು. ಕಾರ್ಯಕ್ರಮದಲ್ಲಿ ಮೈಮುಲ್ ಅಧ್ಯಕ್ಷ ಈರೇಗೌಡ, ಮುಖಂಡರಾದ ನಂದಿನಿ, ಭಾಗ್ಯಲಕ್ಷ್ಮಿ, ನರಸೀಪುರರವಿ, ಬಿ.ವಿ.ಬಸವರಾಜು, ಶಿವಪ್ಪ ಕೋಟೆ, ಮಧು ಕುಮಾರ್, ಹಿರೇಹಳ್ಳಿ ಸೋಮೇಶ್, ಅಶೋಕ್, ಶ್ರೀನಿವಾಸ, ಪುರದಕಟ್ಟೆ ಬಸವರಾಜು, ಶಿವರಾಜು, ಕ್ಯಾತನಹಳ್ಳಿ ನಾಗರಾಜು, ಅಜರುದ್ದೀನ್, ರಾಜು, ಸೌಮ್ಯ ಮತ್ತಿತರರಿದ್ದರು.

ಯುವಕನನ್ನು ಇರಿದ ಗುಂಪು



ಮನೋಜ್

ಕೆ.ಆರ್.ನಗರ, ಮೇ 9– ಕ್ಷುಲ್ಲಕ ಕಾರಣಕ್ಕೆ ಯುವಕನೋರ್ವನ ಮೇಲೆ ಅನ್ಯ ಕೋಮಿನ ಯುವಕರು ಚಾಕುವಿನಿಂದ ಇರಿದು ಗಾಯಗೊಳಿಸಿರುವ ಘಟನೆ ಇತ್ತೀಚೆಗೆ ಪಟ್ಟಣದಲ್ಲಿ ಸಂಭವಿಸಿದೆ.

ಪಟ್ಟಣದ ಮಧುವನಹಳ್ಳಿ ಬಡಾವಣೆಯ ತುಳಸಿದಾಸ್ ಅವರ ಪುತ್ರ ಮನೋಜ್ ಅಲಿಯಾಸ್ ಮನು ಫ್ಲವರ್ ಡೆಕೋರೇಷನ್ ಕೆಲಸ ಮಾಡುತ್ತಿದ್ದು ಮೇ 5ರಂದು ಕೆಲಸ ಮುಗಿಸಿಕೊಂಡು ಮಧುವನಹಳ್ಳಿ ರಸ್ತೆಯಲ್ಲಿರುವ ವೈನ್‌ಸ್ಟೋರ್‌ನಲ್ಲಿ ರಾತ್ರಿ ವೇಳೆ ಮದ್ಯ ಖರೀದಿಸಿ ಬರುವಾಗ ಅಲ್ಲೇ ಗುಂಪುಗೂಡಿದ್ದ ಮುದಾಸೀರ್, ಸೈಯದ್ ಸಹಬಾಜ್, ತಾಜ್ ಹಾಗೂ ಮತ್ತಿತರರು ಬಾಯಿಗೆ ಬಂದಂತೆ ಬೈಯ್ಯುತ್ತಿದ್ದರು ಎನ್ನಲಾಗಿದ್ದು ಇದನ್ನು ಪ್ರಶ್ನಿಸಿದಕ್ಕೆ ಮನೋಜ್‌ಗೆ ಅವ್ಯಾಚ ಶಬ್ಧಗಳಿಂದ ನಿಂದಿಸಿರುವುದಲ್ಲದೇ ಮೂವರು ಮನೋಜ್ ಮೇಲೆ ಹಲ್ಲೆ ಮಾಡಿರುವುದಲ್ಲದೇ ಚಾಕುವಿನಿಂದ ಹೊಟ್ಟೆಗೆ ಮತ್ತು ಮುಖ ಚುಚ್ಚಿ ಹಲ್ಲೆ ಮಾಡಿ ಗಾಯಗೊಳಿಸಿದ್ದಾರೆ.

ಈ ಸಂಬಂಧ ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹುಣಸೂರು ಬಳಿ ಭಾರೀ ಬಿರುಗಾಳಿಯಿಂದ ಮನೆಗೆ ಹಾನಿ

ಸ್ಥಳಕ್ಕೆ ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಭೇಟಿ



ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಭೇಟಿ ನೀಡಿ ವೈಯುಕ್ತಿಕ ಪರಿಹಾರ ವಿತರಿಸಿದರು.

ಹುಣಸೂರು, ಮೇ 9– ಕಳೆದ ಐದು ದಿನಗಳ ಹಿಂದೆ ಬೀಸಿದ ಭಾರೀ ಬಿರುಗಾಳಿಯಿಂದ ವದ್ದಿಮನಗನಹಳ್ಳಿ ಗ್ರಾಮದ ಬುದ್ಧಿಮಾಂದ್ಯತೆಯಿಂದ ಬಳಲುತ್ತಿರುವ ಪುಟ್ಟಸ್ವಾಮಿ ನಾಯಕ ಅವರ ವಾಸದ ಮನೆಗೆ ಅಪಾರ ಹಾನಿಯಾಗಿದೆ.

ಬಿರುಗಾಳಿಯ ತೀವ್ರತೆಗೆ ಮನೆಯ ಮೇಲ್ಛಾವಣಿಗೆ ಅಳವಡಿಸಿದ್ದ ಶೀಟುಗಳು ಹಾಗೂ ಕಬ್ಬಿಣದ ಸಾಮಗ್ರಿಗಳು ಸಂಪೂರ್ಣವಾಗಿ ನಾಶವಾಗಿದ್ದು, ಬಡ ಕುಟುಂಬ ಸಂಕಷ್ಟಕ್ಕೆ ಸಿಲುಕಿದೆ. ಅವರ ಮನೆಗೆ ಮಾಜಿ ಶಾಸಕ ಹೆಚ್. ಪಿ.ಮಂಜುನಾಥ್ ಭೇಟಿ ನೀಡಿ ಹಾನಿಯನ್ನು ಪರಿಶೀಲಿಸಿ, ಸಂಕಷ್ಟದಲ್ಲಿರುವ ಕುಟುಂಬಕ್ಕೆ ಆತ್ಮಸ್ಥೈರ್ಯ ತುಂಬಿದರು. ಜೊತೆಗೆ ವೈಯಕ್ತಿಕ ಸಹಾಯಧನ ನೀಡಿದರು. ಮಕ್ಕಳಿಗೆ ಉತ್ತಮ ಶಿಕ್ಷಣ ಕಲ್ಪಿಸಿ ಅವರ ಭವಿಷ್ಯ ಉಜ್ವಲವಾಗುವಂತೆ ನೋಡಿಕೊಳ್ಳಬೇಕೆಂದು ಸಲಹೆ ನೀಡಿದರು.

ಮೂರನೇ ಪುಟದಿಂದ

2028ಕ್ಕೆ 175 ಸ್ಥಾನ ಗೆದ್ದು ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ



'ಬಿಎಸ್‌ವೈ ಅಭಿಮಾನೋತ್ಸವ' ಸಮಾರಂಭದಲ್ಲಿ ಭಾಗವಹಿಸಿದ್ದ ಜನಸ್ತೋಮ.

50 ವರ್ಷಗಳು ನಿಮ್ಮೊಂದಿಗೆ ಕಳೆದ ನನ್ನನ್ನು ಈ ರೀತಿ ಅಭಿಮಾನದ ಹೊಳೆಯಲ್ಲಿ ತೋಯಿಸಿ, ಸಡಗರ ಪಡುತ್ತಿರುವುದಕ್ಕೆ ಜನ್ಮಜನ್ಮಾಂತರಕ್ಕೂ ಋಣಿಯಾಗಿರುತ್ತೇನೆ. ದೇವರು ನನಗೆ ಮರುಜನ್ಮ ಕರುಣಿಸಿದರೆ ಅದು ಕರುನಾಡಲ್ಲೇ ಹುಟ್ಟಬೇಕು. ಇಲ್ಲಿ ನೆರೆದಿರುವ ಪ್ರತಿಯೊಬ್ಬರ ಕಣ್ಣುಗಳಲ್ಲಿ ಪ್ರೀತಿಯ ಬೆಳಕು ಪ್ರಜ್ವಲಿಸುತ್ತಿದೆ. ಆ ಬೆಳಕಿನಲ್ಲಿ ನಿಮ್ಮ ಯಡಿಯೂರಪ್ಪ ಕಂಗೊಳಿಸುತ್ತಿದ್ದಾನೆ. ಇದು ನನ್ನ ಜನ್ಮಾಂತರಗಳ ಸೌಭಾಗ್ಯ ಎಂದು ನುಡಿದರು.

ಸರ್ದಾರ್ ವಲ್ಲಭಭಾಯೀ ಪಟೇಲರ ನಂತರ ದೇಶ ಕಂಡ ದಿಟ್ಟೆದೆಯ ಗೃಹ ಮಂತ್ರಿ ಅಮಿತ್ ಷಾ ಅವರು ಕಾರ್ಯದೊತ್ತಡವಿದ್ದರೂ ಆಗಮಿಸಿ, ದುರ್ಗದ ನೆಲದಲ್ಲಿ ವೀರ ಮದಕರಿನಾಯಕರಂತೆ ಕಂಗೊಳಿಸುತ್ತಿದ್ದಾರೆ. ವಿಶ್ವದ ಅಗ್ರಸ್ಥಾನದಲ್ಲಿ ಭಾರತವನ್ನು ಕಾಣುವ ನಿಟ್ಟಿನಲ್ಲಿ ದುಡಿಯುತ್ತಿರುವ ನಮ್ಮ ನೆಚ್ಚಿನ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಹೆಗಲು ಕೊಟ್ಟಿರುವ ಇವರು, ಸ್ವಾಭಿಮಾನಿ ಭಾರತೀಯರ ಹಲವು ವರ್ಷಗಳ ನಿರೀಕ್ಷೆಯನ್ನು ಸಾಕಾರಗೊಳಿಸುವ ದಿಟ್ಟತನ ತೋರಿದ್ದಾರೆ. ನುಸುಳುಕೋರರ ಹಾವಳಿಯಿದ್ದ ಪಶ್ಚಿಮ ಬಂಗಾಳದಲ್ಲಿ 200ಕ್ಕೂ ಹೆಚ್ಚು ಸ್ಥಾನಗಳಲ್ಲಿ ಬಿಜೆಪಿ ಗೆಲ್ಲಿಸುವ ಮೂಲಕ ಈ ಇಬ್ಬರು ನಾಯಕರು ಶತಕೋಟಿ ಭಾರತೀಯರಲ್ಲಿ ರೋಮಾಂಚನ ಸೃಷ್ಟಿಸಿದ್ದಾರೆ. ಇವರಿಗೆ ನಾಡಿನ ಜನತೆ ಪರವಾಗಿ ಅಭಿನಂದನೆ ಸಲ್ಲಿಸುತ್ತೇನೆ ಎಂದರು.

ಮೋದಿ ಇನ್ನು 10 ವರ್ಷ ಅಧಿಕಾರದಲ್ಲಿರಬೇಕು: ಪ್ರಧಾನಿ ಮೋದಿ ಅವತಾರ ಪುರುಷನಂತೆ ರಾಷ್ಟ್ರವನ್ನು ಮುನ್ನಡೆಸುತಿದ್ದಾರೆ. ಅಮಿತ್ ಷಾ ಸೇರಿದಂತೆ ಅನೇಕ ಸಚಿವರು ಬೆಂಬಲವಾಗಿದ್ದಾರೆ. ರಾಷ್ಟ್ರೀಯ ಅಧ್ಯಕ್ಷರನ್ನಾಗಿ ನಿತಿನ್ ನಬಿನ್ ಅವರನ್ನು ನೇಮಿಸುವ ಮೂಲಕ ಯುವ ಶಕ್ತಿಗೆ ಪ್ರೇರಣೆ ನೀಡಿದ್ದಾರೆ. ರಾಷ್ಟ್ರೀಯ ಮಟ್ಟದಲ್ಲಿ ಸಂಘಟನೆಗಾಗಿ ಸಂತೋಷ್ ಜೀ ಅಂತಹವರು ತಮ್ಮನ್ನು ತಾವು ಸಮರ್ಪಿಸಿಕೊಂಡಿದ್ದಾರೆ. ರಾಜ್ಯದಲ್ಲಿ ವಿಜಯೇಂದ್ರರಂತಹ ಯುವಕರಿಗೆ ಅವಕಾಶ ಮಾಡಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರು ಕನಿಷ್ಠ ಇನ್ನೂ 10 ವರ್ಷ ಈ ದೇಶವನ್ನು ಮುನ್ನಡೆಸಬೇಕು. ಅವರೊಂದಿಗೆ ಅಮಿತ್ ಶಾ ಮಹಾಸೇನಾನಿಯಂತೆ ಕಾಯಕ ಮುಂದುವರೆಸಬೇಕಿದೆ. ಮೋದಿ ಅಂತಹ ಶ್ರೇಷ್ಠ ನಾಯಕರು, ಅಮಿತ್ ಷಾ ಅವರಂತಹ ದಿಟ್ಟ ಸಂಘಟಕರು ಹೆಚ್ಚಬೇಕು ಎಂದು ಆಶಿಸಿದರು.

ಯಡಿಯೂರಪ್ಪರಂತಹ ನಾಯಕ ದಕ್ಷಿಣ ಭಾರತದಲ್ಲಿ ಮತ್ತೊಬ್ಬರಿಲ್ಲ

ವೀರ ಓಬವ್ವಗೆ ಕೈ ಮುಗಿದು ನಮಸ್ಕಾರ ಮಾಡುತ್ತೇವೆ ಎನ್ನುವ ಮೂಲಕ ಮತ್ತೆ ರಾಜ್ಯದಲ್ಲಿ ಅಧಿಕಾರ ಹಿಡಿಯುತ್ತೇವೆ ಎಂದು ಪರೋಕ್ಷವಾಗಿ ಹೇಳಿದರು. ಯಡಿಯೂರಪ್ಪ ಅವರು 'ಜನಸೇವೆ ಪ್ರಭು ಸೇವೆ' ಮಂತ್ರದಂತೆ ಕೆಲಸ ಮಾಡಿದವರು. ರೈತರ ಕೆಲಸ, ದೇಶದ ಕೆಲಸ ಅಂತ ದುಡಿದವರು. ಇವರನ್ನು 4 ಬಾರಿ ಕರ್ನಾಟಕದ ಜನ ಮುಖ್ಯಮಂತ್ರಿ ಮಾಡಿದ್ದರು. ರಾಜಕೀಯದಲ್ಲಿ ಎರಡು ರೀತಿಯ ನಾಯಕರು ಇರುತ್ತಾರೆ. ಒಂದು ತನ್ನ ದಾರಿಯಲ್ಲಿ ನಡೆಯೋರು, ಮತ್ತೊಂದು ಇನ್ನೊಬ್ಬರಿಗೆ ದಾರಿ ಮಾಡಿಕೊಡೋರು. ಯಡಿಯೂರಪ್ಪ ಎರಡನೇ ರೀತಿಯ ನಾಯಕರು ಎಂದು ಬಣ್ಣಿಸಿದರು.

ಅವರು ಯಾವುದೇ ರಾಜಕೀಯ ಹಿನ್ನಲೆ ಇಲ್ಲದವರು. ಶಿಕಾರಿಪುರಿಂದ ಹೋರಾಟ ಶುರು ಮಾಡಿ, ಸೈಕಲ್‌ನಲ್ಲಿ ಇಡೀ ರಾಜ್ಯ ಸುತ್ತಿ ಪಕ್ಷ ಸಂಘಟನೆ ಮಾಡಿದರು. ಬಗರ್‌ಹುಕುಂ ಸೇರಿದಂತೆ ಅನೇಕ ರೈತರ ಪರ ಹೋರಾಟ ನಡೆಸಿದರು. ಯಡಿಯೂರಪ್ಪ ಜೊತೆ ಮೂರು ಚುನಾವಣೆ ಮಾಡಿದ್ದೇನೆ. ಅವರ ಜೇಬಿನಲ್ಲಿ ಚಿಕ್ಕ ಡೈರಿ ಇರುತ್ತದೆ. ಅದರಲ್ಲಿ ಎಲ್ಲಾ ವಿಷಯಗಳನ್ನು ಬರೆದುಕೊಳ್ತಾರೆ. ಯುವಕರು ಇವರನ್ನು ಅನುಸರಿಸಬೇಕು. ದಕ್ಷಿಣ ಭಾರತದಲ್ಲಿ ಬಿಜೆಪಿ ಇರಲಿಲ್ಲ. ಬಿಜೆಪಿಯನ್ನು ದಕ್ಷಿಣ ಭಾರತದಲ್ಲಿ ಅಧಿಕಾರಕ್ಕೆ ತಂದವರು ಬಿಎಸ್‌ವೈ ಎಂದು ಕೊಂಡಾಡಿದರು.

ದೇಶದಲ್ಲಿ ಮೊದಲ ಬಾರಿಗೆ ರೈತರಿಗಾಗಿ ಕೃಷಿ ಬಜೆಟ್ ಮಂಡಿಸಿದ್ದು ಯಡಿಯೂರಪ್ಪ. ಬೆಂಗಳೂರು ಗ್ಲೋಬಲ್ ಟೆಕ್ ಆಗೋಕೆ ಇವರ ಕೊಡುಗೆ ಅಪಾರವಾಗಿದೆ. ಎಲ್ಲಾ ವರ್ಗದ ಸಮುದಾಯದ ಅಭಿವೃದ್ಧಿಗೆ ಅವರು ಕೆಲಸ ಮಾಡಿದ್ದಾರೆ. ಕೇಂದ್ರ ಸರ್ಕಾರದಲ್ಲಿ ಮಂತ್ರಿ ಆಗುವ ಅವಕಾಶ ನೀಡಿದರೂ ಯಡಿಯೂರಪ್ಪ ವಿನಯದಿಂದಲೇ ನಿರಾಕರಿಸಿದರು. ನನಗೆ ಮಂತ್ರಿ ಬೇಡ, ಮತ್ತೆ ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ತರೋಕೆ ಕೆಲಸ ಮಾಡ್ತೀನಿ ಎಂದರು. ಇವತ್ತಿನ ದಿನ ಯಡಿಯೂರಪ್ಪ ದಿನವಾಗಿದೆ ಎಂದು, ಇದೇ ವೇಳೆ ಚಿತ್ರದುರ್ಗದ ಜನರಿಗೆ ಧನ್ಯವಾದ ಅರ್ಪಿಸಿದರು.

ಪತ್ನಿ ನೆನೆದು ಭಾವುಕರಾದ ಬಿಎಸ್‌ವೈ: ಇಂದಿನ ಈ ಕಾರ್ಯಕ್ರಮಕ್ಕೆ ನಾಡಿನ ಮೂಲೆ ಮೂಲೆಗಳಿಂದ ಬಸವಾದಿ ಶರಣರು, ಸಾಧು–ಸಂತರು, ಮಠಾಧೀಶರು, ಹರಗುರುಚರ ಮೂರ್ತಿಗಳು ಆಗಮಿಸಿ ನನ್ನನ್ನು ಆಶೀರ್ವದಿಸಿದ್ದಾರೆ. ಅಧಿಕಾರದಲ್ಲಿ ಇಲ್ಲದಿದ್ದರೂ ಇಷ್ಟೊಂದು ಸಂಖ್ಯೆಯಲ್ಲಿ ನೆರೆದಿರುವುದು ಸದಾ ನಾನು ನಿಮ್ಮ ಹೃದಯದಲ್ಲಿರುತ್ತೇನೆ ಎಂಬುದಕ್ಕೆ ಸಾಕ್ಷಿಯಾಗಿದೆ. ನಡೆದಾಡುವ ದೇವರಾಗಿದ್ದ ಸಿದ್ದಗಂಗೆಯ ಡಾ.ಶ್ರೀ ಶಿವಕುಮಾರ ಸ್ವಾಮೀಜಿಗಳನ್ನು ಈ ಸಂದರ್ಭದಲ್ಲಿ ನಾನು ಅತ್ಯಂತ ಭಕ್ತಿಯಿಂದ ಸ್ಮರಿಸಿಕೊಳ್ಳುತ್ತೇನೆ. ನನ್ನನ್ನು ಹರಸಿ, ಮಾರ್ಗದರ್ಶನ ತೋರಿದ ನಾಡಿನ ಎಲ್ಲಾ ಶ್ರೀಗಳಿಗೂ ನಮಿಸುತ್ತೇನೆ. ಹಾಗೆಯೇ ನನ್ನ ಕೈಹಿಡಿದು ಕಷ್ಟದ ದಿನಗಳಲ್ಲಿ ಹೆಗಲು ಕೊಟ್ಟ ನನ್ನ ಪತ್ನಿ ಮೈತ್ರಾದೇವಿಯನ್ನು ನೆನಪಿಸಿಕೊಳ್ಳುತ್ತೇನೆ. ಇಲ್ಲೆಲ್ಲೋ ಅವಳ ಆತ್ಮ ಈ ಸಡಗರ ನೋಡಿ ಸಂಭ್ರಮಿಸುತ್ತಿರಬಹುದೆಂಬ ಭಾವನೆ ನನ್ನನ್ನು ಆವರಿಸಿದೆ ಎಂದು ಭಾವುಕರಾಗಿ ನುಡಿದರು.

ನನಗೆ ಸಂಸ್ಕಾರ ನೀಡಿದ್ದು ಆರ್‌ಎಸ್‌ಎಸ್: ನಿಮ್ಮ ಯಡಿಯೂರಪ್ಪ ಚಿನ್ನದ ಚಮಚ ಇಟ್ಟುಕೊಂಡು ಸಾರ್ವಜನಿಕ ಬದುಕಿಗೆ ಬರಲಿಲ್ಲ. ಸಾಮಾನ್ಯರಲ್ಲಿ ಸಾಮಾನ್ಯನಾಗಿ ಅನಿರೀಕ್ಷಿತ ತಿರುವುಗಳಲ್ಲಿ ನಾನು ಈ ನಾಡಿನ ಜನರ ಸೇವೆಗೆ ಸಮರ್ಪಣೆ ಗೊಂಡವನು. ಬೂಕನಕೆರೆಯಲ್ಲಿ ಜನ್ಮತಾಳಿ, ಶಿಕಾರಿಪುರವನ್ನು ಕರ್ಮಭೂಮಿಯನ್ನಾಗಿಸಿಕೊಂಡು ನಂತರ ರಾಜ್ಯದ ಮುಖ್ಯಮಂತ್ರಿಯಾಗಿ ರೈತರು, ಬಡವರು, ಮಹಿಳೆಯರ ಕಣ್ಣೀರೊರೆಸುವ ಕಾರ್ಯಕ್ರಮಗಳನ್ನು ನೀಡಿದ ಸಾರ್ಥಕ ಭಾವ ನನಗಿದೆ. ನನಗೆ ಸಂಸ್ಕಾರ ನೀಡಿದ್ದು ರಾಷ್ಟ್ರೀಯ ಸ್ವಯಂ ಸೇವಕ ಸಂಘ. ನಾನೂ ಒಬ್ಬ ಕಾರ್ಯಕರ್ತ ಎಂದು ಹೇಳಿಕೊಳ್ಳಲು ಹೆಮ್ಮೆ ಎನ್ನಿಸುತ್ತದೆ. ಸಂಘವನ್ನು ನಾನು ಮತ್ತೊಬ್ಬ ತಾಯಿಯಂತೆ ಪ್ರೀತಿಸಿದ್ದೇನೆ, ಗೌರವಿಸಿದ್ದೇನೆ, ಅದರ ನೆರಳಿನಲ್ಲಿಯೇ ಹೆಜ್ಜೆಯಿಟ್ಟು ಬಂದಿದ್ದೇನೆ ಎಂದು ತಮ್ಮ ಸಾರ್ವಜನಿಕ ಹೋರಾಟದ ದಿನಗಳನ್ನು ಸ್ಮರಿಸಿಕೊಂಡರು.

ನನ್ನ ಸಂಘಟನಾ ಕಾರ್ಯದಲ್ಲಿ ಆರ್‌ಎಸ್‌ಎಸ್ ಹಾಗೂ ಪಕ್ಷದ ಅನೇಕ ಹಿರಿಯರು ಮಾರ್ಗದರ್ಶನವಿದೆ. ಅಟಲ್ ಬಿಹಾರಿ ವಾಜಪೇಯಿ ಅವರು ನನ್ನ ಹೋರಾಟ–ಸಂಘಟನೆಗಳಿಗೆ ಪ್ರೀತಿಯ ನೀರೆರೆದು ಆಶೀರ್ವದಿಸಿದವರು. ಹಿರಿಯರಾದ ಎಲ್.ಕೆ.ಅಡ್ವಾಣಿ, ಮುರಳಿ ಮನೋಹರ ಜೋಷಿ ಹಾಗೂ ಸಂಘದ ಅನೇಕ ಹಿರಿಯರು ನನಗೆ ಮಾರ್ಗದರ್ಶನ ನೀಡಿದರು. ನನ್ನೊಂದಿಗೆ ಹೆಗಲು ಕೊಟ್ಟ ದಿವಂಗತ ಅನಂತ ಕುಮಾರ್ ಅವರನ್ನು ಈ ಸಂದರ್ಭದಲ್ಲಿ ಭಾವುಕತೆಯಿಂದ ನೆನೆಯಲು ಬಯಸುತ್ತೇನೆ. ಅದೇ ರೀತಿ ಅನೇಕ ಹಿರಿಯರು ನನ್ನೊಂದಿಗೆ ಕೈ ಜೋಡಿಸಿದ್ದಾರೆ. ವಿಶೇಷವಾಗಿ ನನ್ನ ಶಿಕಾರಿಪುರದ ಜನತೆ ಈವರೆಗೂ ನನ್ನ ಬೆನ್ನಿಗೆ ನಿಂತಿದ್ದಾರೆ. ಅದೇ ರೀತಿ ಕಲ್ಯಾಣ ಕರ್ನಾಟಕ, ಕಿತ್ತೂರು ಕರ್ನಾಟಕ, ಹಳೇ ಮೈಸೂರು, ಕರಾವಳಿ, ಉತ್ತರ ಕನ್ನಡದ ಜನತೆ ನನಗೆ ತೋರಿಸಿದ ಪ್ರೀತಿ ಮರೆಯಲಾಗದು. ನಾನೆಂದೂ ಅಧಿಕಾರದ ಬೆನ್ನತ್ತಿದವನಲ್ಲ. ಮುಖ್ಯಮಂತ್ರಿಯಾಗುವ ಕನಸನ್ನೂ ಕಂಡಿರಲಿಲ್ಲ. ಪುರಸಭೆಯಿಂದ ವಿಧಾನಸಭೆವರೆಗೆ, ವಿರೋಧ ಪಕ್ಷದ ಸ್ಥಾನದಿಂದ ಮುಖ್ಯಮಂತ್ರಿ ಸ್ಥಾನದವರೆಗೆ ನಾಡಿನ ಜನತೆ ನನ್ನನ್ನು ಬೆಳೆಸಿ ಹರಸಿದರು. ಇವ ನಮ್ಮವ, ಇವ ನಮ್ಮವ ಎಂದು ಪ್ರೀತಿಯಿಂದ ಅಪ್ಪಿ ಆಶೀರ್ವದಿಸಿದ್ದರಿಂದ 50 ವರ್ಷಗಳ ನನ್ನ ಪಯಣ ಸಾರ್ಥಕವಾಗಿ ಪೂರ್ಣಗೊಳ್ಳಲು ಸಾಧ್ಯವಾಯಿತು. ಈ ಋಣ ಎಂದಿಗೂ ತೀರಿಸಲಾಗದು. ನನ್ನ ಕಡೆಯ ಉಸಿರಿರುವ ತನಕ ವಿರಮಿಸುವ ಪ್ರಶ್ನೆಯೇ ಇಲ್ಲ, ಆ ಪದವೂ ನನ್ನ ಹತ್ತಿರ ಸುಳಿಯುದಿಲ್ಲ. ಶಕ್ತಿ ಇರುವವರೆಗೂ ನಾಡಿಗಾಗಿ, ದೇಶಕ್ಕಾಗಿ, ಪಕ್ಷಕ್ಕಾಗಿ ದುಡಿಯುತ್ತೇನೆ ಎಂದರು.

ಇಂತಹ ದೊಡ್ಡ ಕಾರ್ಯಕ್ರಮ ಆಯೋಜಿಸಲು ಶ್ರಮಿಸಿದ ಎಲ್ಲರಿಗೂ ಕೃತಜ್ಞತೆಗಳು. ಈ ವೇದಿಕೆಯಲ್ಲಿ ಅಮಿತ್ ಶಾ ಲೋಕಾರ್ಪಣೆಗೊಳಿಸಿದ 'ಕೆಂದಾವರೆ–ಕಮಲ ಅರಳಿದ ಕತೆ' ಹಾಗೂ 'ಸದನ ಶಿಕಾರಿ–ಯಡಿಯೂರಪ್ಪನವರ ಗುಡುಗಿನ ಮಾತುಗಳು' ಪುಸ್ತಕಗಳ ಲೇಖಕರು, ಪ್ರಕಾಶಕರನ್ನು ನಾನು ಅಭಿನಂದಿಸುತ್ತೇನೆ. ಈ ನಾಡು ಸದಾ ಸುಭಿಕ್ಷವಾಗಿರಬೇಕು. ತ್ರಿವಿಧ ದಾಸೋಹ ನಡೆಸುವ ಮಠಮಾನ್ಯಗಳಿಗೆ ಯಾವುದೇ ಕೊರತೆಯಾಗಬಾರದು. ಯಾವುದೇ ಸರ್ಕಾರ ಅಧಿಕಾರಕ್ಕೆ ಬಂದರೂ ಯಾರೂ ಹಸಿವಿನ ಬಾಧೆ, ಶಿಕ್ಷಣದ ಕೊರತೆ ಅನುಭವಿಸಬಾರದು. ನರೇಂದ್ರ ಮೋದಿಯವರ 'ವಿಕಸಿತ ಭಾರತ' ನಿರ್ಮಾಣದ ಕನಸು ಸಾಕಾರಗೊಳ್ಳಬೇಕು. ಇದಕ್ಕೆ ಕರುನಾಡು ಮಹತ್ವದ ಕೊಡುಗೆ ನೀಡಬೇಕು ಎಂದು ಆಶಿಸಿದರು.

ಮುಖ್ಯಮಂತ್ರಿಯಾಗಿ ವಿಜಯ್ ಪ್ರಮಾಣ

ಟಿವಿಕೆ, ಸರ್ಕಾರ ರಚಿಸಲು ಡಿಎಂಕೆ ಮಿತ್ರಪಕ್ಷಗಳಾದ ಸಿಪಿಐ, ಸಿಪಿಐ(ಎಂ) ಮತ್ತು ವಿಸಿಕೆ ಅವರ ಬೆಂಬಲವನ್ನು ಕೋರಿತ್ತು. ಕಾಂಗ್ರೆಸ್‌ನ ಐದು ಶಾಸಕರು ಹಾಗೂ ಎಡಪಂಥೀಯ ಪಕ್ಷಗಳ ನಾಲ್ವರು ಶಾಸಕರೂ ಸೇರಿದಂತೆ ವಿಜಯ್ ನೇತೃತ್ವದ ಮೈತ್ರಿಗೆ ಈಗಾಗಲೇ 116 ಶಾಸಕರ ಬೆಂಬಲವಿತ್ತು. ಇದೀಗ ವಿಸಿಕೆಯ ಇಬ್ಬರು ಹಾಗೂ ಐಯುಎಂಎಲ್ ನ ಇಬ್ಬರು ಶಾಸಕರ ಬೆಂಬಲ ಸಿಕ್ಕಿದ್ದರಿಂದ ಮೈತ್ರಿಯ ಬಲ 120ಕ್ಕೆ ಹೆಚ್ಚಿದೆ.

ನಾಳೆ ಬೆಳಗ್ಗೆ 10 ಗಂಟೆಗೆ ಚೆನ್ನೈನ ನೆಹರು ಮೈದಾನದಲ್ಲಿ ದಳಪತಿ ವಿಜಯ್ ತಮಿಳುನಾಡು ಮುಖ್ಯಮಂತ್ರಿ ಯಾಗಿ ಪ್ರಮಾಣವಚನ ಸ್ವೀಕರಿಸಲಿದ್ದಾರೆ. ವಿಜಯ್ ಜೊತೆ 9 ಶಾಸಕರು ಸಚಿವರಾಗಿ ಪ್ರಮಾಣವಚನ ಸ್ವೀಕರಿಸುವ ಸಾಧ್ಯತೆ ಇದೆ.

ಅಪವಾದ ಬರಬಾರದು: ರಾಜಕೀಯ ಪರಿಸ್ಥಿತಿಯ ಬಗ್ಗೆ ಸವಿಸ್ತಾರ ಚರ್ಚೆ ನಡೆಸಿ, ಟಿವಿಕೆಗೆ ಬೆಂಬಲ ನೀಡಲು ತೀರ್ಮಾನಿಸಿದೆವು. ಈಗಾಗಲೇ ನಮ್ಮ ಬೆಂಬಲ ಪತ್ರವನ್ನು ಅವರಿಗೆ ಸಲ್ಲಿಸಿದ್ದೇವೆ. ರಾಜ್ಯದಲ್ಲಿ ಸಂವಿಧಾನಾತ್ಮಕ ಅನಿಶ್ಚಿತತೆಯನ್ನು ತಪ್ಪಿಸುವುದು ಪಕ್ಷದ ತಕ್ಷಣದ ಚಿಂತೆಯಾಗಿದೆ. ಈ ರಾಜಕೀಯ ಪರಿಸ್ಥಿತಿಯನ್ನು ಬಳಸಿಕೊಂಡು ತಮಿಳುನಾಡಿನಲ್ಲಿ ರಾಷ್ಟ್ರಪತಿ ಆಡಳಿತ ಜಾರಿಯಾಗುವುದನ್ನು ನಾವು ತಡೆಯಲು ಬಯಸುತ್ತೇವೆ. 108 ಸ್ಥಾನಗಳನ್ನು ಗೆದ್ದಿದ್ದರೂ ಟಿವಿಕೆ ಸರ್ಕಾರ ರಚಿಸಲು ಕಷ್ಟಪಡುತ್ತಿತ್ತು. ಆದ್ದರಿಂದ ನಾವು ಅವರಿಗೆ ಬೆಂಬಲ ನೀಡಿದೆವು. ಸರ್ಕಾರ ರಚನೆ ವಿಫಲವಾಗಲು ವಿಸಿಕೆ ಕಾರಣವಾಗಬಾರದು ಎಂಬುದು ಪಕ್ಷದ ನಿಲುವು ಎಂದು ವಿದುತಲೈ ಚಿರುಥೈಗಳ್ ಕಚ್ಚಿ (ವಿಸಿಕೆ) ಮುಖ್ಯಸ್ಥ ತಿರುಮಾವಳವನ್ ತಿಳಿಸಿದ್ದಾರೆ.

ಡಿಎಂಕೆ ಮೈತ್ರಿಯಲ್ಲೇ ಇರಲಿದ್ದೇವೆ: ಟಿವಿಕೆಗೆ ಬೆಂಬಲ ಘೋಷಣೆ ಹೊರತಾಗಿಯೂ ನಾವು ಡಿಎಂಕೆ ನೇತೃತ್ವದ ಎಸ್‌ಪಿಎ ಮೈತ್ರಿಯೊಂದಿಗೇ ಇದ್ದೇವೆ. ಆದರೆ ಈ ಮಹತ್ವದ ರಾಜಕೀಯ ಸಂದರ್ಭದಲ್ಲಿ ರಾಜಕೀಯ ಪಕ್ಷವಾಗಿ ನಮ್ಮ ಸ್ವತಂತ್ರ ನಿರ್ಧಾರ ತೆಗೆದುಕೊಳ್ಳುವ ಹಕ್ಕನ್ನು ಬಳಸಿದ್ದೇವೆ. ಇದರಿಂದ ಡಿಎಂಕೆಯೊಂದಿನ ನಮ್ಮ ಸಂಬಂಧಕ್ಕೆ ಯಾವುದೇ ಹಾನಿಯಾಗುತ್ತದೆ ಎಂದು ನಾವು ನಂಬುವುದಿಲ್ಲ. ಈ ನಿರ್ಧಾರ ಕೈಗೊಳ್ಳುವ ಮೊದಲು ವಿಸಿಕೆ ಡಿಎಂಕೆಗೆ ಮಾಹಿತಿ ನೀಡಿತ್ತು ಎಂದು ತಿರುಮಾವಳವನ್ ಹೇಳಿದರು.

ಕಾರ್ಯಕರ್ತನಿಂದ ಮೋದಿಗೆ ಆಶೀರ್ವಾದ!

ನೆರೆದ ಜನ ಹರ್ಷೋದ್ಗಾರ ವ್ಯಕ್ತಪಡಿಸಿದರು. ಬಂಗಾಳದಲ್ಲಿ ಶ್ಯಾಮ್‌ಪ್ರಸಾದ ಮುಖರ್ಜಿ ಅವರ ನೇತೃತ್ವದಲ್ಲಿ 1980ರಲ್ಲಿ ಬಿಜೆಪಿ ಅಸ್ತಿತ್ವಕ್ಕೆ ಬಂದಾಗಿನಿಂದ ಇಂದಿನವರೆಗೂ ಸರ್ಕಾರ್ ಬಿಜೆಪಿಯಲ್ಲೇ ಇದ್ದಾರೆ. ಸ್ವಾತಂತ್ರ್ಯಾನಂತರ ಭಾರತದಲ್ಲಿ ನಡೆದ ರಾಷ್ಟ್ರೀಯತಾವಾದಿ ಚಳವಳಿಯಲ್ಲಿ ಸರ್ಕಾರ್ ಭಾಗಿಯಾಗಿದ್ದರು. 1952 ರಲ್ಲಿ, ಕಾಶ್ಮೀರದಲ್ಲಿ ಭಾರತೀಯ ತ್ರಿವರ್ಣ ಧ್ವಜವನ್ನು ಹಾರಿಸುವ ಚಳವಳಿಯ ಸಮಯದಲ್ಲಿ ಶ್ಯಾಮ ಪ್ರಸಾದ್ ಮುಖರ್ಜಿ ಅವರೊಂದಿಗೆ ಸರ್ಕಾರ್ ಕೂಡ ಬಂಧನಕ್ಕೆ ಒಳಗಾಗಿದ್ದರು. ಬಿಜೆಪಿ ರಚನೆಯಾದ ಮೇಲೆ ಸರ್ಕಾರ್, ಪಶ್ಚಿಮ ದಿನಾಜ್‌ಪುರ, ಜಲ್ಪೈಗುರಿ ಮತ್ತು ಡಾರ್ಜಿಲಿಂಗ್ ಜಿಲ್ಲೆಗಳಿಗೆ ಸಂಘಟನಾ ಸಂಯೋಜಕರಾದರು. ಒಂದು ವರ್ಷದೊಳಗೆ, ಅವರು ಸುಮಾರು 10,000 ಸದಸ್ಯರನ್ನು ಪಕ್ಷಕ್ಕೆ ಸೇರಿಸಿದ್ದರು. 1981 ರಿಂದ, ಅವರು ಜಿಲ್ಲಾ ಅಧ್ಯಕ್ಷರಾಗಿ ಏಳು ವರ್ಷಗಳ ಕಾಲ ಕೆಲಸ ಮಾಡಿದ್ದರು. ಪಕ್ಷದ ಸಾಂಸ್ಥಿಕ ರಚನೆಯಲ್ಲಿ ಸರ್ಕಾರ್ ಅವರದ್ದು ಅಪರೂಪದ ಸಾಧನೆ ಎಂದೇ ಪರಿಗಣಿಸಲಾಗಿದೆ.

ಅಧಿಕಾರಿ ಪ್ರಮಾಣ

ಸಂಘಟಿಸುವಲ್ಲಿ ಯಶಸ್ವಿಯಾದರು. ಇವರ ಸಂಘಟನಾ ಚಾತುರ್ಯ ವನ್ನು ಅಮಿತ್ ಶಾ ಅವರು ಮುಕ್ತಕಂಠದಿಂದ ಶ್ಲಾಘಿಸಿದ್ದರು. ಸೋಲಿಲ್ಲದ ಸರದಾರ ಎನಿಸಿಕೊಂಡಿದ್ದ ಮಮತಾ ಬ್ಯಾನರ್ಜಿ ಅವರಿಗೆ ಅವರದ್ದೇ ನೆಲದಲ್ಲಿ ಸೋಲುಣಿಸಿದ ಸುವೇಂದು ಅಧಿಕಾರಿ, ಈಗ 'ಸೋನಾರ್ ಬಾಂಗ್ಲಾ' ನಿರ್ಮಾಣದ ಜವಾಬ್ದಾರಿ ಹೊತ್ತುಕೊಂಡಿದ್ದಾರೆ. ಇತ್ತೀಚೆ ಗಷ್ಟೇ ಮುಕ್ತಾಯಗೊಂಡ ಬಂಗಾಳ ಚುನಾವಣೆಯಲ್ಲಿ ಬಿಜೆಪಿ 207 ಸ್ಥಾನಗಳನ್ನಗಳಿಸಿ, ಅಧಿಕಾರದ ಗದ್ದುಗೆ ಹಿಡಿದಿದೆ. ಇನ್ನೂ ತೃಣಮೂಲ ಕಾಂಗ್ರೆಸ್ (ಟಿಎಂಸಿ) 80 ಸ್ಥಾನಗಳನ್ನು ಗೆದ್ದಿದೆ.

ಲೆಫ್ಟಿನೆಂಟ್ ಜನರಲ್ ರಾಜಾ ಸುಬ್ರಮಣಿ ನೇಮಕ

ಸೆಂಟ್ರಲ್ ಕಮಾಂಡ್‌ನ ಜನರಲ್ ಆಫೀಸರ್ ಕಮಾಂಡಿಂಗ್–ಇನ್–ಚೀಫ್ ಆಗಿಯೂ ಕಾರ್ಯನಿರ್ವಹಿಸಿದ ದಕ್ಷ ಅಧಿಕಾರಿಯಾಗಿದ್ದಾರೆ. ರಾಜಾ ಸುಬ್ರಮಣಿ ಅವರನ್ನು ಮೊದಲಿಗೆ 1985ರ ಡಿ.14ರಂದು ಗರ್ವಾಲ್ ರೈಫಲ್ಸ್‌ನ 8ನೇ ಬೆಟಾಲಿಯನ್‌ಗೆ ನಿಯೋಜಿಸಲಾಗಿತ್ತು. ಒಟ್ಟು ಭಾರತೀಯ ಸೇನೆಯಲ್ಲಿ 39 ವರ್ಷಗಳ ಸೇವೆ ಸಲ್ಲಿಸಿದ್ದಾರೆ.

ನೌಕಾಪಡೆಗೂ ನೂತನ ಮುಖ್ಯಸ್ಥರ ನೇಮಕ: ಮತ್ತೊಂದು ಪ್ರಮುಖ ಮಿಲಿಟರಿ ನೇಮಕಾತಿಯಲ್ಲಿ, ವೈಸ್ ಅಡ್ಮಿರಲ್ ಕೃಷ್ಣ ಸ್ವಾಮಿನಾಥನ್ ಅವರನ್ನು ಭಾರತೀಯ ನೌಕಾಪಡೆಯ ಮುಂದಿನ ಮುಖ್ಯಸ್ಥರನ್ನಾಗಿ ನೇಮಿಕ ಮಾಡಲಾಗಿದೆ.

ಚಿರತೆ ಕಾರ್ಯಪಡೆ ಯಶಸ್ವಿ ಅಭಿಯಾನ; 220 ಚಿರತೆ ರಕ್ಷಣೆ

● ಮೈಸೂರು, ಬೆಂಗಳೂರು, ಮಂಡ್ಯ, ಚಾಮರಾಜನಗರ, ಹಾಸನ, ಶಿವಮೊಗ್ಗ, ಚಿಕ್ಕಮಗಳೂರು, ಹುಬ್ಬಳ್ಳಿಯಲ್ಲೂ ಯಶಸ್ವಿ ಕಾರ್ಯ ● 2023ರ ಫೆ.2ರಿಂದ 2026 ಏ.28ರವರೆಗೆ 3949 ದೂರುಗಳಿಗೆ ಸ್ಪಂದನೆ ● ಮೈಸೂರು ಜಿಲ್ಲೆಯಲ್ಲಿ 164, ಮಂಡ್ಯ ಜಿಲ್ಲೆಯಲ್ಲಿ 45 ಚಿರತೆ ರಕ್ಷಿಸಿದ ಸಿಬ್ಬಂದಿ

ಮೈಸೂರು, ಮೇ 9(ಎಂಟಿವೈ)– ಮೈಸೂರು ಜಿಲ್ಲೆಯಲ್ಲಿ ಚಿರತೆ ಉಪಟಳ ನಿಯಂತ್ರಣಕ್ಕಾಗಿ ಎರಡು ವರ್ಷದ ಹಿಂದೆ ರಚಿಸಲ್ಪಟ್ಟ ಚಿರತೆ ಕಾರ್ಯಪಡೆ ಇದುವರೆಗೂ ಮೈಸೂರು ಜಿಲ್ಲೆ ಮಾತ್ರವಲ್ಲದೆ ಏಳು ಜಿಲ್ಲೆಗಳಲ್ಲಿ 3949 ದೂರುಗಳಿಗೆ ಸ್ಪಂದಿಸಿ, ಮಾನವ ಸಂಘರ್ಷಕ್ಕಿಳಿದ 220 ಚಿರತೆಗಳನ್ನು ಸುರಕ್ಷಿತವಾಗಿ ಸೆರೆ ಹಿಡಿಯುವ ಮೂಲಕ ಗಮನ ಸೆಳೆದಿದೆ.



ನಿರೀಕ್ಷೆಗೂ ಮೀರಿದ ಸಾಧನೆ ಮಾಡಿರುವ ಚಿರತೆ ಕಾರ್ಯಪಡೆ ತಂಡವಿದು.

ಎರಡು ವರ್ಷದ ಹಿಂದೆ ಮೈಸೂರು ಜಿಲ್ಲೆಯ ತಿ.ನರಸೀಪುರ ತಾಲೂಕಿನ ಬನ್ನೂರು ಹೋಬಳಿಯಲ್ಲಿ ಚಿರತೆ ದಾಳಿಗೆ ಮೂವರು ಬಲಿಯಾದ ಹಿನ್ನೆಲೆಯಲ್ಲಿ ಜನರಲ್ಲಿ ಉಂಟಾದ ಆತಂಕ ಪರಿಸ್ಥಿತಿ ನಿವಾರಣೆಯೊಂದಿಗೆ ಮಾನವ ಸಂಘರ್ಷಕ್ಕಿಳಿದ ಚಿರತೆ ಸೆರೆ ಹಿಡಿಯಲು ರಚಿಸಲಾದ ಚಿರತೆ ಕಾರ್ಯಪಡೆ ನಿರೀಕ್ಷೆಗೂ ಮೀರಿದ ಸಾಧನೆ ಮಾಡುವ ಮೂಲಕ ಪ್ರಶಂಸೆಗೆ ಪಾತ್ರವಾಗಿದೆ. ಜನನಿಬಿಡ ಪ್ರದೇಶಕ್ಕೆ ನುಸುಳಿದ, ಗ್ರಾಮೀಣ ಪ್ರದೇಶಗಳಲ್ಲಿ ಜನ–ಜಾನುವಾರುಗಳ ಮೇಲೆರಗುತ್ತಿದ್ದ ಚಿರತೆಗಳ ಸೆರೆ ಹಿಡಿಯುವ ಮೂಲಕ ಜನರಲ್ಲಿದ್ದ ಆತಂಕ ನಿವಾರಣೆ ಮಾಡುವಲ್ಲಿ ಚಿರತೆ ಕಾರ್ಯಪಡೆ ಯಶಸ್ವಿಯಾಗಿದೆ. ಕೇವಲ ಮೈಸೂರು ಜಿಲ್ಲೆಗೆ ಮಾತ್ರ ಕಾರ್ಯಕ್ಷೇತ್ರ ಸೀಮಿತಗೊಳಿಸದೆ ಎಂಟು ಜಿಲ್ಲೆಗಳಲ್ಲೂ ಚಿರತೆ ಸೆರೆ ಕಾರ್ಯಾಚರಣೆ ನಡೆಸಿ, ದಕ್ಷತೆಯನ್ನು ಸಾಬೀತುಪಡಿಸಿದೆ.

3949 ದೂರಿಗೆ ಸ್ಪಂದನೆ: ಚಿರತೆ ಹಾವಳಿ ಹತ್ತಿಕ್ಕುವ ಹಾಗೂ ದೂರು ಬಂದ ಕೂಡಲೆ ಸ್ಪಂದಿಸುವ ನಿಟ್ಟಿನಲ್ಲಿ ಹೊಸದಾಗಿ ಸ್ಥಾಪಿಸಲಾದ ಚಿರತೆ ಕಾರ್ಯಪಡೆಗೆ ಪ್ರತ್ಯೇಕ ಸಿಬ್ಬಂದಿ ಸೇರಿದಂತೆ ಅಗತ್ಯ ವ್ಯವಸ್ಥೆ ಕಲ್ಪಿಸಲಾಗಿತ್ತು. ಅಲ್ಲದೆ, ಚಿರತೆ ಹಾವಳಿಗೆ ಸಂಬಂಧಿಸಿದಂತೆ ದೂರು ನೀಡಲು ಸಹಾಯವಾಣಿಗೆ ಮೊಬೈಲ್ ಸಂಖ್ಯೆ 9481996026 ನೀಡಲಾಗಿತ್ತು. ಇದುವರೆಗೆ ಮೈಸೂರು ನಗರ ಹಾಗೂ ತಾಲೂಕು ವ್ಯಾಪ್ತಿಯಿಂದ 1084 ದೂರು ಒಳಗೊಂಡಂತೆ ಜಿಲ್ಲೆಯಿಂದ 2955 ದೂರು ದಾಖಲಾಗಿವೆ. ಮಂಡ್ಯ ಜಿಲ್ಲೆಯಲ್ಲಿ 983 ದೂರು, ಚಾಮರಾಜನಗರ 1, ಕೊಳ್ಳೇಗಾಲದಿಂದ 6, ಶಿವಮೊಗ್ಗದಿಂದ 3 ಹಾಸನದಿಂದ 1 ದೂರು ಸೇರಿದಂತೆ 3949 ದೂರು ಸಲ್ಲಿಕೆಯಾಗಿದ್ದು, ಈ ಎಲ್ಲಾ ದೂರಿಗೂ ಸ್ಪಂದಿಸಿ ಸ್ಥಳ ಪರಿಶೀಲಿಸಲಾಗಿದೆ.

220 ಚಿರತೆ ರಕ್ಷಣೆ: ಚಿರತೆ ಕಾರ್ಯಪಡೆ ಇದುವರೆಗೆ 220 ಚಿರತೆ ರಕ್ಷಣೆ ಮಾಡಿದೆ. ಅವುಗಳಲ್ಲಿ 91 ಗಂಡು, 69 ಹೆಣ್ಣು ಹಾಗೂ 60ಮರಿ ಒಳಗೊಂಡಿವೆ. ಮೈಸೂರು ನಗರ ಮತ್ತು ತಾಲೂಕಲ್ಲಿ 68, ತಿ.ನರಸೀಪುರ ತಾಲೂಕಲ್ಲಿ 35, ಹೆಚ್.ಡಿ.ಕೋಟೆಯಲ್ಲಿ 30, ಹುಣಸೂರಲ್ಲಿ 5, ಕೆ.ಆರ್.ನಗರದಲ್ಲಿ 8, ನಂಜನಗೂಡಲ್ಲಿ 12, ಪಿರಿಯಾಪಟ್ಟಣದಲ್ಲಿ 6 ಚಿರತೆ ಸೇರಿದಂತೆ ಮೈಸೂರು ಜಿಲ್ಲೆಯಲ್ಲಿ 164 ಚಿರತೆ ರಕ್ಷಿಸಲಾಗಿದೆ.

ಮಂಡ್ಯ ಜಿಲ್ಲೆಯಲ್ಲಿ 45 ಚಿರತೆ ರಕ್ಷಣೆ ಮಾಡಲಾಗಿದ್ದು, ಅವುಗಳಲ್ಲಿ ಕೆ.ಆರ್.ಪೇಟೆ ತಾಲೂಕಲ್ಲಿ 14, ಮದ್ದೂರು ತಾಲೂಕಲ್ಲಿ 2, ಪಾಂಡವಪುರದಲ್ಲಿ 9, ನೆಲಮಂಗಲದಲ್ಲಿ 6, ಮಂಡ್ಯ ತಾಲೂಕಲ್ಲಿ 12 ಹಾಗೂ ಶ್ರೀರಂಗಪಟ್ಟಣ ತಾಲೂಕಲ್ಲಿ 2 ಚಿರತೆ ಸೇರಿವೆ. ಇದಲ್ಲದೆ, ಯಳಂದೂರಲ್ಲಿ 1, ಶಿವಮೊಗ್ಗದಲ್ಲಿ 1, ಭದ್ರಾವತಿಯಲ್ಲಿ 2, ಬೆಂಗಳೂರಲ್ಲಿ 1, ಸಕಲೇಶಪುರದಲ್ಲಿ 1, ಕೊಳ್ಳೇಗಾಲದಲ್ಲಿ 1, ಚನ್ನಪಟ್ಟಣದಲ್ಲಿ 1, ಮಲೆಮಹದೇಶ್ವರ ಬೆಟ್ಟದಲ್ಲಿ 1, ಚಿಕ್ಕಮಗಳೂರಲ್ಲಿ 1 ಹಾಗೂ ಹುಬ್ಬಳ್ಳಿಯಲ್ಲಿ 1 ಚಿರತೆಯನ್ನು ಚಿರತೆ ಕಾರ್ಯಪಡೆ ಸಿಬ್ಬಂದಿ ರಕ್ಷಣೆ ಮಾಡಿದ್ದಾರೆ.

ಚಿರತೆ ಕಾರ್ಯಪಡೆಯಲ್ಲಿ ಏನೇನಿದೆ: ಚಿರತೆ ಕಾರ್ಯಪಡೆಗೆ ಪ್ರತ್ಯೇಕ ಸಿಬ್ಬಂದಿ ನಿಯೋಜಿಸಲಾಗಿದೆ. ಮೈಸೂರು ವನ್ಯಜೀವಿ ವಿಭಾಗದ ಡಿಸಿಎಫ್ ಡಾ.ಐ.ಬಿ.ಪ್ರಭುಗೌಡ ಮಾರ್ಗದರ್ಶನದಲ್ಲಿ ಆರ್‌ಎಫ್‌ಓ ಪುಟ್ಟರಾಜು ನೇತೃತ್ವದಲ್ಲಿ ನಾಲ್ವರು ಡಿಆರ್‌ಎಫ್‌ಓ, 8 ಗಾರ್ಡ್, 45 ಮಂದಿ ಗುತ್ತಿಗೆ ಆಧಾರಿತ ಸಿಬ್ಬಂದಿ ಚಿರತೆ ರಕ್ಷಣಾ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದಾರೆ. ಈ ಕಾರ್ಯಪಡೆಗೆ ಪ್ರತ್ಯೇಕ ವಾಹನ, ಆಂಬುಲೆನ್ಸ್, ಇಲಾಖಾ ಪಶುವೈದ್ಯರು, ಡ್ರೋನ್, ಸಿಬ್ಬಂದಿಗೆ ಬಾಡಿ ಪ್ರೊಟೆಕ್ಟರ್, ಲಾಠಿ, ಹೆಲ್ಮೆಟ್, ಟಾರ್ಚ್ ಸೇರಿದಂತೆ ಇನ್ನಿತರ ಸಲಕರಣೆ ನೀಡಲಾಗಿದೆ. ಅಲ್ಲದೆ, ಐದು ಬಗೆಯ ಬೋನ್ ನೀಡಲಾಗಿದೆ. ಟ್ರೀಟ್‌ಮೆಂಟ್ ಕೇಜ್, ವಾಕ್ ಥ್ರೂ ಕೇಜ್, ಸಾಗಾಟ ಮಾಡುವ ಕೇಜ್ ಒಳಗೊಂಡಿದೆ.

> ❝ ಚಿರತೆ ಕಾರ್ಯಪಡೆ ರಚನೆಯಾದ ಎರಡು ವರ್ಷದಿಂದ ಚಿರತೆ ಹಾವಳಿಗೆ ಸಂಬಂಧಿಸಿದಂತೆ ಒಟ್ಟು 3949 ದೂರು ಸಲ್ಲಿಕೆಯಾಗಿದ್ದು, ಎಲ್ಲವನ್ನೂ ದಾಖಲಿಸಲಾಗಿದೆ. ದೂರು ಬಂದ ಸ್ಥಳಕ್ಕೆ ಚಿರತೆ ಕಾರ್ಯಪಡೆ ಸಿಬ್ಬಂದಿಯನ್ನು ಕಳುಹಿಸಿ ಕೂಂಬಿಂಗ್ ಕಾರ್ಯಾಚರಣೆ ನಡೆಸಲಾಗಿದೆ. ಇದುವರೆಗೆ 220 ಚಿರತೆಗಳನ್ನು ರಕ್ಷಣೆ ಮಾಡಲಾಗಿದೆ. ಮೈಸೂರು, ಮಂಡ್ಯ, ಚಾಮರಾಜನಗರ, ಬೆಂಗಳೂರು, ಹುಬ್ಬಳ್ಳಿ, ಹಾಸನ, ಶಿವಮೊಗ್ಗ, ಚಿಕ್ಕಮಗಳೂರಲ್ಲೂ ನಮ್ಮ ಚಿರತೆ ಕಾರ್ಯಪಡೆ ಸಿಬ್ಬಂದಿ ತೆರಳಿ ಚಿರತೆ ರಕ್ಷಣೆ ಮಾಡಿದ್ದಾರೆ. ಸಿಬ್ಬಂದಿಗೆ ಅಗತ್ಯ ತರಬೇತಿ ನೀಡಲಾಗಿದ್ದು, ಸಿಬ್ಬಂದಿಗಳ ರಕ್ಷಣೆಗೂ ಬಾಡಿ ಪ್ರೊಟೆಕ್ಟರ್, ಹೆಲ್ಮೆಟ್, ಲಾಠಿ ಸೇರಿದಂತೆ ಅಗತ್ಯ ಸುರಕ್ಷತಾ ಸಲಕರಣೆ ನೀಡಲಾಗಿದೆ. ಎರಡು ವರ್ಷದಲ್ಲಿ ಚಿರತೆ ಕಾರ್ಯಪಡೆ ಗಮನಾರ್ಹ ಸಾಧನೆ ಮಾಡಿದೆ. ಕೆಲವು ಕಾರ್ಯಾಚರಣೆ ಸವಾಲಿನದ್ದಾಗಿದ್ದರೂ ನಮ್ಮ ಸಿಬ್ಬಂದಿ ಚಿರತೆ ರಕ್ಷಣೆ ಮಾಡಿದ್ದಾರೆ.
>
> 
>
> – ಡಾ. ಐ.ಬಿ. ಪ್ರಭುಗೌಡ,
> ಡಿಸಿಎಫ್, ಮೈಸೂರು ವನ್ಯಜೀವಿ ವಿಭಾಗ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಕರ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ರೆಬೆಲ್ (ತೆ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಡಕಾಯಿಟ್ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಕೆಡಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಕೋಟಿಗೊಬ್ಬ (ಕ)	4 ಪ್ರದರ್ಶನಗಳು
ರಾಜಕಮಲ್	
ಪೆಟ್ರಿಯೋಟ್ (ಮ)	4 ಪ್ರದರ್ಶನಗಳು
ಸಂಗಂ	
ಕರ (ತ)	4 ಪ್ರದರ್ಶನಗಳು
ಲಿಡೋ	
ಮಾಣಿಕ್ಯ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಪುನೀತ್ ನಿವಾಸ (ಕ)	4 ಪ್ರದರ್ಶನಗಳು

ಸೋಮಾನಿ ಕಾಲೇಜಲ್ಲಿ ರೆಡ್ ಕ್ರಾಸ್ ದಿನಾಚರಣೆ



ಮೈಸೂರಿನ ಬಸುದೇವ ಸೋಮಾನಿ ಕಾಲೇಜಿನಲ್ಲಿ ನಡೆದ 'ರೆಡ್ ಕ್ರಾಸ್ ದಿನಾಚರಣೆ'ಯನ್ನು ಗಿಡಕ್ಕೆ ನೀರೆರೆಯುವ ಮೂಲಕ ಉದ್ಘಾಟಿಸಲಾಯಿತು.

ಮೈಸೂರು, ಮೇ 9– ಮೈಸೂರಿನ ಬಸುದೇವ ಸೋಮಾನಿ ಕಾಲೇಜಿನಲ್ಲಿ ಮೈಸೂರು ರೆಡ್‌ಕ್ರಾಸ್ ಘಟಕದ ವತಿಯಿಂದ 'ರೆಡ್ ಕ್ರಾಸ್ ದಿನಾಚರಣೆ' ಆಯೋಜಿಸಲಾಗಿತ್ತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲರಾದ ಡಾ.ಎಂ. ಮಹದೇವಸ್ವಾಮಿ ಮಾತನಾಡಿ, ಪ್ರತಿ ವರ್ಷ ಮೇ 8ರಂದು ರೆಡ್ ಕ್ರಾಸ್ ಸಂಸ್ಥೆ ಸಂಸ್ಥಾಪಕ ಜೀನ್ ಹೆನ್ರಿ ಡ್ಯೂನಾಂಟ್ ಅವರ ಜನ್ಮ ದಿನವನ್ನು ರೆಡ್‌ಕ್ರಾಸ್ ದಿನವನ್ನಾಗಿ ಆಚರಿಸಲಾಗುತ್ತದೆ. ಇದನ್ನು ರೆಡ್ ಕ್ರೆಸೆಂಟ್ ಡೇ ಎಂದೂ ಕರೆಯಲಾಗುತ್ತದೆ ಎಂದರು.

ರೆಡ್ ಕ್ರಾಸ್ ಮಾನವೀಯ ತತ್ವದಡಿ ಯುದ್ಧ ಹಾಗೂ ತುರ್ತು ಪರಿಸ್ಥಿತಿಯಲ್ಲಿ ಅಗತ್ಯವಿರುವ ಜನರಿಗೆ ಮೂಲಭೂತ ಸೌಕರ್ಯಗಳನ್ನು ಸಹ ಒದಗಿಸುತ್ತದೆ. ಆರೋಗ್ಯಕರವಾದ ಜನರ ಸೇವೆ ಮಾಡುವ ಕೆಲಸವನ್ನು ರೆಡ್ ಕ್ರಾಸ್ ಮಾಡುತ್ತಿದೆ. ವಿದ್ಯಾರ್ಥಿಗಳು ಹಾಗೂ ಯುವ ಜನರು ರೆಡ್ ಕ್ರಾಸ್ ಸಂಸ್ಥೆಯ ಮೂಲಕ ಸೇವಾ ಮನೋಭಾವನೆ ಬೆಳೆಸಿಕೊಳ್ಳಬೇಕಾಗಿದೆ. ಆರೋಗ್ಯಕರ ಸಮಾಜ ನಿರ್ಮಾಣದಲ್ಲಿ ರೆಡ್ ಕ್ರಾಸ್ ಪ್ರಮುಖ ಪಾತ್ರ ವಹಿಸುತ್ತಿದೆ ಎಂದು ತಿಳಿಸಿದರು.

ಕಾರ್ಯಕ್ರಮ ಸಂಯೋಜಕ ಡಾ.ಟಿ. ರಮೇಶ್ ಮಾತನಾಡಿ, ರೆಡ್‌ಕ್ರಾಸ್ ನಿರಂತರವಾಗಿ ಸಮಾಜ ಸೇವೆಯಲ್ಲಿ ತೊಡಗಿದೆ. ವಿಪತ್ತುಗಳು ಸಂಭವಿಸಿದಾಗ ಅಗತ್ಯವಿರುವ ಮೂಲ ಸೌಕರ್ಯ ಒದಗಿಸುವಲ್ಲಿ ರೆಡ್‌ಕ್ರಾಸ್ ಬಹಳ ಮುಖ್ಯವಾದ ಪಾತ್ರ ವಹಿಸುತ್ತಿದೆ. ಹಾಗಾಗಿ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ರೆಡ್‌ಕ್ರಾಸ್ ಸಂಸ್ಥೆಗೆ ಸೇರಿ ಸಮಾಜ ಸೇವೆಯಲ್ಲಿ ತೊಡಗಬೇಕು ಎಂದು ಸಲಹೆ ನೀಡಿದರು. ಕಾರ್ಯಕ್ರಮದಲ್ಲಿ ಕಾಲೇಜಿನ ಬೋಧಕ–ಬೋಧಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ರಾತ್ರೋರಾತ್ರಿ ನವ ವಿವಾಹಿತೆ ನಾಪತ್ತೆ

ಮೈಸೂರು, ಮೇ 9– ನವ ವಿವಾಹಿತೆ ಗಂಡನ ಮನೆಯಿಂದ ರಾತ್ರೋರಾತ್ರಿ ನಾಪತ್ತೆಯಾಗಿರುವುದಾಗಿ ಮೈಸೂರಿನ ನರಸಿಂಹರಾಜ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಬೆಲವತ್ತ ಆರ್‌ಎಸ್ ನಾಯ್ಡುನಗರ ನಿವಾಸಿ ಸುಹಾಸ್ ಅವರ ಪತ್ನಿ ಸರಸ್ವತಿ(21) ನಾಪತ್ತೆಯಾದವರು. ಪಾಂಡವಪುರ ತಾಲೂಕಿನ ಶಿವಯ್ಯ ಎಂಬುವರ ಪುತ್ರಿ ಸರಸ್ವತಿಯನ್ನು ಕಳೆದ ಮಾ.1ರಂದು ವಿವಾಹವಾಗಿದ್ದು, ದಂಪತಿ ಅನ್ಯೋನ್ಯವಾಗಿದ್ದರು. ಎಂದಿನಂತೆ ಮೇ 5ರಂದು ರಾತ್ರಿ ಊಟ ಮಾಡಿ ಮಲಗಿದ್ದು, ಮಧ್ಯರಾತ್ರಿ 12 ಗಂಟೆಗೆ ಎಚ್ಚರಗೊಂಡಾಗ ಪತ್ನಿ ಇರಲಿಲ್ಲ. ಶೌಚಾಲಯಕ್ಕೆ ಹೋಗಿರಬಹುದೆಂದು ತಿಳಿದು ಮುಂಜಾನೆ 5.30ಕ್ಕೆ ಎಚ್ಚರವಾಗಿ ನೋಡಿದಾಗಲೂ ಆಕೆ ಕಾಣಿಸಲಿಲ್ಲ. ಆಕೆಯ ತವರು ಮನೆಗೆ ಕರೆ ಮಾಡಿ ವಿಚಾರಿಸಿದ್ದು, ಆಕೆ ಅಲ್ಲಿಗೂ ಹೋಗಿಲ್ಲ ಎಂದು ಸುಹಾಸ್, ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ.

ಸರಸ್ವತಿ ಬಗ್ಗೆ ಸುಳಿವು ಸಿಕ್ಕರೆ ನರಸಿಂಹರಾಜ ಪೊಲೀಸ್ ಠಾಣೆ(0821–2418312) ಸಂಪರ್ಕಿಸಲು ಪ್ರಕಟಣೆಯಲ್ಲಿ ಕೋರಲಾಗಿದೆ.

ಡಾ.ಬಿ.ಜೆ.ವಿಜಯ್‌ಕುಮಾರ್ ವಿಧಾನ ಪರಿಷತ್‌ಗೆ ನಾಮ ನಿರ್ದೇಶನ ಮಾಡಿ



ಮೈಸೂರು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್ ಅವರನ್ನು ವಿಧಾನ ಪರಿಷತ್‌ಗೆ ನಾಮನಿರ್ದೇಶನ ಮಾಡುವಂತೆ ಹಾಲಿ ಮತ್ತು ಮಾಜಿ ಶಾಸಕರು ಹಾಗೂ ಮುಖಂಡರು ಖಾಸಗಿ ಹೋಟೆಲ್‌ನಲ್ಲಿ ಸಭೆ ಸೇರಿ ಒತ್ತಾಯಿಸಿದ್ದಾರೆ.

ಮೈಸೂರು, ಮೇ 9(ಎಸ್‌ಪಿಎನ್)– ಮೈಸೂರು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್ ಅವರನ್ನು ವಿಧಾನಪರಿಷತ್‌ಗೆ ನಾಮನಿರ್ದೇಶನ ಮಾಡುವಂತೆ ಹಾಲಿ ಶಾಸಕರು, ಮಾಜಿ ಶಾಸಕರು ಹಾಗೂ ಮುಖಂಡರು ಒತ್ತಾಯಿಸಿದ್ದಾರೆ.

ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ನಡೆದ ಸಭೆಯಲ್ಲಿ ಮಾಜಿ ಶಾಸಕ ನಂಜುಂಡಸ್ವಾಮಿ ಮಾತನಾಡಿ, ಕಾಂಗ್ರೆಸ್ ಪಕ್ಷ ಯಾವ ಕಾರ್ಯಕರ್ತರಿಗೂ ಮೋಸ ಮಾಡಿಲ್ಲ. ಎಲ್ಲರಿಗೂ ಅವರವರ ಯೋಗ್ಯತಾನುಸಾರ ಕಾಲ ಕಾಲಕ್ಕೆ ಸ್ಥಾನಮಾನಗಳ ನೀಡುತ್ತಾ ಬಂದಿದೆ.

ಹಾಗೆಯೇ ಡಾ.ಬಿ.ಜೆ.ವಿಜಯ್ ಕುಮಾರ್, ಎನ್‌ಎಸ್‌ಯುಐ, ಯೂತ್ ಕಾಂಗ್ರೆಸ್ ಇದೀಗ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾಗಿ ಹಲವು ವರ್ಷಗಳಿಂದ ಪಕ್ಷವನ್ನು ಸಂಘಟಿಸುತ್ತಿದ್ದಾರೆ. ಎಲ್ಲರನ್ನು ವಿಶ್ವಾಸಕ್ಕೆ ಪಡೆದು ಪಕ್ಷ ಸಂಘಟನೆ ಮಾಡುವುದು ಕಷ್ಟದ ಕೆಲಸ. ಹಲವು ಸಂಕಷ್ಟದ ನಡುವೆಯೂ ಯಶಸ್ವಿಯಾಗಿ ಮೈಸೂರು ಭಾಗದಲ್ಲಿ ಪಕ್ಷವನ್ನು ಮುನ್ನಡೆಸಿದ್ದು, ಇವರನ್ನು ವಿಧಾನಪರಿಷತ್ ಸದಸ್ಯ ಸ್ಥಾನಕ್ಕೆ ಪರಿಗಣಿಸಬೇಕು ಎಂದು ಒತ್ತಾಯಿಸಿದರು.

ವಿಧಾನ ಪರಿಷತ್ ಮಾಜಿ ಸದಸ್ಯ ಧರ್ಮಸೇನಾ ಮಾತನಾಡಿ, ದೇಶವ್ಯಾಪಿ ಕಾಂಗ್ರೆಸ್ ಕಷ್ಟದ ಪರಿಸ್ಥಿತಿ ಎದುರಿಸುತ್ತಿದೆ. ಇಂತಹ ಸಂದರ್ಭದಲ್ಲಿ ಪಕ್ಷದ ಧುರೀಣರಾದ ಸೋನಿಯಾಗಾಂಧಿ, ರಾಹುಲ್‌ಗಾಂಧಿ ಹಾಗೂ ಮಲ್ಲಿಕಾರ್ಜುನ ಖರ್ಗೆ ನೇತೃತ್ವದಲ್ಲಿ ಪಕ್ಷವನ್ನು ಮುನ್ನಡೆಸುತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ನಾವು ಹುದ್ದೆಗಳನ್ನು ಕೇಳುವಾಗ ಜಾಣತನ ಪ್ರದರ್ಶಿಸಬೇಕು ಎಂದು ಕಿವಿಮಾತು ಹೇಳಿದರು.

ರಾಜ್ಯ ಸಂವಿಧಾನ ಸಂರಕ್ಷಣಾ ವೇದಿಕೆ ಅಧ್ಯಕ್ಷ ಭಾಸ್ಕರ್ ಮಾತನಾಡಿ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಇತರೆ ಹಿರಿಯ ನಾಯಕರು, ಪಕ್ಷ ಅಧಿಕಾರದಲ್ಲಿದ್ದಾಗ, 10–15 ವರ್ಷ ದುಡಿದ ಕಾಂಗ್ರೆಸ್ ಕಾರ್ಯಕರ್ತರ ನಿಗಮ ಮಂಡಳಿಗೆ ಆಯ್ಕೆ ಮಾಡಬೇಕು. ಅಲ್ಲದೆ, ಕಳೆದ 26 ವರ್ಷಗಳಿಂದ ದುಡಿದಿರುವ ಡಾ.ಬಿ.ಜೆ.ವಿಜಯ್ ಕುಮಾರ್ ಅವರಿಗೆ ಸೂಕ್ತಸ್ಥಾನ ನೀಡಬೇಕೆಂದು ಒತ್ತಾಯಿಸಿದರು.

ವೇದಿಕೆಯಲ್ಲಿ ಶಾಸಕರಾದ ತನ್ವೀರ್ ಸೇಠ್, ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ, ರವಿಶಂಕರ್, ಕೆ.ಹರೀಶ್‌ಗೌಡ, ದರ್ಶನ್ ಧ್ರುವನಾರಾಯಣ್, ಅನಿಲ್ ಚಿಕ್ಕಮಾದು, ವಿಧಾನಪರಿಷತ್ ಮಾಜಿ ಸದಸ್ಯ ಮರಿತಿಬ್ಬೇಗೌಡ, ಕಾಂಗ್ರೆಸ್ ಮುಖಂಡ ಎಂ.ಲಕ್ಷ್ಮಣ್ ಸೇರಿದಂತೆ ಇತರರಿದ್ದರು.

ಪರಪ್ಪನ ಅಗ್ರಹಾರ ಜೈಲಿನ ಕೈದಿಗಳಿಗೂ ಬಯೋಮೆಟ್ರಿಕ್

ಕಾರಾಗೃಹ ಇಲಾಖೆಯಿಂದ 2.25 ಕೋಟಿ ರೂ. ವೆಚ್ಚ

ಆನೇಕಲ್, ಮೇ 9– ಪರಪ್ಪನ ಅಗ್ರಹಾರ ಜೈಲಿನಲ್ಲಿ ಕೈದಿಗಳ ಮೇಲೆ ನಿಗಾ ವಹಿಸಲು ಕಾರಾಗೃಹ ಇಲಾಖೆ 2.25 ಕೋಟಿ ರೂ. ಖರ್ಚು ಮಾಡಿ, ಬಯೋಮೆಟ್ರಿಕ್ ವ್ಯವಸ್ಥೆಯನ್ನು ಅಳವಡಿಸಿದೆ.

ಈ ಹಿಂದೆ ಎಐ ಕ್ಯಾಮರಾ ಬಳಕೆ ಮಾಡಿ ಕೈದಿಗಳ ಮೇಲೆ ನಿಗಾ ವಹಿಸಿತ್ತು. ಈ ಮೂಲಕ ಸಂದರ್ಶಕರನ್ನು ಭೇಟಿಯಾಗಲು ಡಿಜಿಟಲ್ ಟೋಕನ್ ವ್ಯವಸ್ಥೆ ಹಾಗೂ ಡಿಜಿಟಲ್ ಟ್ರ್ಯಾಕಿಂಗ್‌ನ್ನು ಜಾರಿಗೊಳಿಸಿತ್ತು. ಇದೀಗ ಒಂದು ಹೆಜ್ಜೆ ಮುಂದೆ ಇಟ್ಟು ಜೈಲಿನಲ್ಲಿ ನಡೆಯುವ ಅಕ್ರಮ ತಡೆಯಲು ಬಯೋಮೆಟ್ರಿಕ್ ಅಳವಡಿಕೆ ಮಾಡಿದೆ.

ಇತ್ತೀಚಿಗೆ ಜೈಲಿಗೆ ಎಸ್ಪಿ ಅನ್ಶುಕುಮಾರ್ ಮತ್ತು ಡಿಜಿಪಿ ಅಲೋಕ್ ಕುಮಾರ್ ಅವರನ್ನು ನೇಮಕ ಮಾಡಲಾಗಿತ್ತು. ಇದೀಗ ಅಧಿಕಾರಿಗಳು ಕಟ್ಟುನಿಟ್ಟಿನ ಕ್ರಮ ಕೈಗೊಂಡು, ಹಲವು ಬದಲಾವಣೆ ಜಾರಿಗೊಳಿಸಿದ್ದಾರೆ. 2.25 ಕೋಟಿ ರೂ. ಹಣ ಖರ್ಚು ಮಾಡಿ ಕಾರಾಗೃಹ ಇಲಾಖೆ ಬಯೋಮೆಟ್ರಿಕ್ ಅಳವಡಿಸಿದ್ದರು. ಜೈಲಿನ ಪ್ರತಿ ಬ್ಯಾರಕ್, ಸಂದರ್ಶಕರ ಕೊಠಡಿ, ಆಸ್ಪತ್ರೆ, ಕ್ಯಾಂಟೀನ್, ಅಡುಗೆ ಕೋಣೆ, ಗ್ರಂಥಾಲಯ, ಮೈದಾನ, ಕರಕುಶಲ ಕಾರ್ಖಾನೆಗಳು ಸೇರಿದಂತೆ ಬೇಕರಿ ಪ್ರವೇಶ ಸೇರಿ ಎಲ್ಲೆಡೆ ಬಯೋಮೆಟ್ರಿಕ್ ಹಾಕಿಸಿದೆ.

ಕೈದಿಗಳು ಮೊಬೈಲ್ ಫೋನ್, ನಿಷೇಧಿತ ವಸ್ತುಗಳ ಬಳಕೆಗೆ ಬ್ರೇಕ್ ಹಾಕಲಾಗಿದ್ದು, ಮತ್ತೆ ಬದಲಾವಣೆಯಾಗುವ ಸಾಧ್ಯತೆಯಿದೆ.

ಇಂದು 'ಬಣ್ಣದ ಬುಗುರಿ' ಮಕ್ಕಳ ಬೇಸಿಗೆ ಶಿಬಿರ ಸಮಾರೋಪ

ಮೈಸೂರು, ಮೇ 9– ಮೈಸೂರಿನ ಬಿದಿರು ಥಿಯೇಟರ್ ವತಿಯಿಂದ ನಡೆಸಲಾದ 'ಬಣ್ಣದ ಬುಗುರಿ' ಮಕ್ಕಳ ಬೇಸಿಗೆ ಶಿಬಿರ ಭಾನುವಾರ ಸಮಾರೋಪಗೊಳ್ಳಲಿದೆ.

ನಗರದ ಕಲಾಮಂದಿರದ ಆವರಣದ ಕಿರುರಂಗಮಂದಿರದಲ್ಲಿ ಸಂಜೆ 6ಕ್ಕೆ ನಡೆಯಲಿರುವ ಸಮಾರೋಪ ಸಮಾರಂಭದಲ್ಲಿ ರಂಗನಿರ್ದೇಶಕರಾದ ಅರಸೀಕೆರೆ ಯೋಗಾನಂದ, ಅಶ್ವತ್ ಕದಂಬ, ಲೇಖಕ ಹಾಗೂ ಕೃಷಿಕ ಅವಿನಾಶ್ ಟಿಜಿಎಸ್, ಪರಿಸರ ಚಿಂತಕ ವ್ಯಾನ್ ಮನು, ರಂಗಭೂಮಿ ಕಲಾವಿದೆ ಶ್ರೀಮತಿ ಶಾಲೋಮ್ ಸನ್ನುತ ಮತ್ತಿತರರು ಭಾಗವಹಿಸಲಿದ್ದಾರೆ.

ಇದೇ ವೇಳೆ ಶಿಬಿರದ ಮಕ್ಕಳು ಮಲೆ ಮಹದೇಶ್ವರರ ಕುರಿತ 'ಉರಿ ಚಮ್ಮಾಳಿಗೆ' ಜನಪದ ನಾಟಕ, ನೃತ್ಯ, ಕೋಲಾಟ, ಕಂಸಾಳೆ ಇನ್ನಿತರ ಕಲಾಪ್ರಕಾರಗಳನ್ನು ಪ್ರದರ್ಶಿಸಲಿದ್ದಾರೆ.

ರೇಡಿಯಾಲಜಿ ಸೌಲಭ್ಯಗಳು ಹೆಚ್ಚು ಹೆಚ್ಚು ಬಡವರಿಗೆ ದೊರಕಬೇಕು

ಜಯದೇವ ಹೃದ್ರೋಗ ಸಂಸ್ಥೆಯ ನಿರ್ದೇಶಕ ಡಾ. ಬಿ. ದಿನೇಶ್ ಅಭಿಮತ

ಮೈಸೂರು: ರೇಡಿಯಾಲಜಿ ಕ್ಷೇತ್ರದಲ್ಲಿ ಆಗಿರುವ ಉತ್ತಮ ಬದಲಾವಣೆಗಳ ಫಲ ಬಡ ಹಾಗೂ ಮಧ್ಯಮ ವರ್ಗದ ಜನರಿಗೆ ದೊರೆಯಬೇಕಿದೆ ಎಂದು ಜಯದೇವ ಹೃದ್ರೋಗ ಮತ್ತು ಸಂಶೋಧನಾ ಸಂಸ್ಥೆ ನಿರ್ದೇಶಕ ಡಾ.ಬಿ. ದಿನೇಶ್ ಅಭಿಪ್ರಾಯ ಪಟ್ಟರು.



"ಡಾ. ಜ್ಞಾನ್ ಪಿ. ಲಾಲ್ ಸಿಎಂಇ 2026" ಕಾರ್ಯಕ್ರಮವನ್ನು ಜಯದೇವ ಹೃದ್ರೋಗ ಮತ್ತು ಸಂಶೋಧನಾ ಸಂಸ್ಥೆ ನಿರ್ದೇಶಕ ಡಾ.ಬಿ. ದಿನೇಶ್ ಉದ್ಘಾಟಿಸಿದರು.

ಭಾರತೀಯ ರೇಡಿಯಾಲಜಿ ಮತ್ತು ಇಮೇಜಿಂಗ್ ಅಸೋಸಿಯೇಷನ್ ಸಹಯೋಗದಲ್ಲಿ ಜಯದೇವ ಆಸ್ಪತ್ರೆಯಲ್ಲಿ ಶನಿವಾರ ನಡೆದ "ಡಾ. ಜ್ಞಾನ್ ಪಿ. ಲಾಲ್ ಸಿಎಂಇ 2026" ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಆಧುನಿಕ ವೈದ್ಯಕೀಯ ಜಗತ್ತಿನಲ್ಲಿ ರೇಡಿಯಾಲಜಿಯು ವೈದ್ಯರ ಕಣ್ಣುಗಳಂತೆ ಕೆಲಸ ಮಾಡುತ್ತದೆ, ಇದು ಚಿಕಿತ್ಸೆಯನ್ನು ಹೆಚ್ಚು ಸುರಕ್ಷಿತ ಮತ್ತು ಪರಿಣಾಮ ಕಾರಿಯಾಗಿಸಿದೆ. ರೇಡಿಯಾಲಜಿಯು ದೇಹದ ಒಳಗಿನ ಭಾಗಗಳ ಸ್ಪಷ್ಟ ಚಿತ್ರಣವನ್ನು ನೀಡುತ್ತದೆ. ಕ್ಷ–ಕಿರಣ, ಸಿಟಿ ಸ್ಕ್ಯಾನ್ ಮತ್ತು ಎಂಆರ್‌ಐ ಮೂಲಕ ಮೂಳೆ ಮುರಿತ, ಗೆಡ್ಡೆಗಳು, ಮತ್ತು ಆಂತರಿಕ ಗಾಯಗಳನ್ನು ಅತ್ಯಂತ ನಿಖರವಾಗಿ ಗುರುತಿಸಿ ಚಿಕಿತ್ಸೆ ನೀಡಬಹುದು. ಆದರೆ ಈ ಸೇವೆಗಳ ಬೆಲೆ ದುಬಾರಿಯಾಗಿದ್ದು ಬಡ ಹಾಗೂ ಮಧ್ಯಮ ವರ್ಗದ ಜನರಿಗೆ ಕಡಿಮೆ ದರದಲ್ಲಿ ದೊರೆಯಬೇಕಿದೆ ಎಂದು ತಿಳಿಸಿದರು.

ವೈದ್ಯಕೀಯ ಕ್ಷೇತ್ರವು ಕೃತಕ ಬುದ್ಧಿಮತ್ತೆ ಮತ್ತು ಅತ್ಯಾಧುನಿಕ ಇಮೇಜಿಂಗ್ ತಂತ್ರಜ್ಞಾನಗಳ ಯುಗವನ್ನು ಪ್ರವೇಶಿಸಿದೆ. ಆದರೆ, ಅತ್ಯಾಧುನಿಕ ರೇಡಿಯಾಲಜಿ ಸೌಲಭ್ಯಗಳು ಇನ್ನೂ ನಗರ ಕೇಂದ್ರಗಳಿಗೆ ಮಾತ್ರ ಸೀಮಿತವಾಗಿರುವುದು ಗ್ರಾಮೀಣ ಮತ್ತು ಗಡಿ ಪ್ರದೇಶದ ಜನರಿಗೆ ಈ ಸೇವೆ ಮತ್ತಷ್ಟು ಪರಿಣಾಮಕಾರಿಯಾಗಿ ವಿಸ್ತರಣೆಯಾಗಬೇಕಿದೆ ಎಂದರು.

ರೇಡಿಯಾಲಜಿ ತಂತ್ರಜ್ಞಾನದಿಂದ ನಿಖರವಾದ ರೋಗ ಪತ್ತೆ, ಶಸ್ತ್ರಚಿಕಿತ್ಸೆಯ ಅಗತ್ಯತೆಯನ್ನು ಕಡಿಮೆ ಮಾಡುವುದು, ಸಕಾಲಕ್ಕೆ ಚಿಕಿತ್ಸೆ ದೊರೆಯುವುದು, ವೇಗದ ಫಲಿತಾಂಶ ದೊರೆಯುತ್ತದೆ. ಅಲ್ಲದೇ ನೀಡಿದ ಚಿಕಿತ್ಸೆ ಎಷ್ಟು ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿದೆ ಎಂಬುದನ್ನು ತಿಳಿದುಕೊಳ್ಳಲು ಅನುಕೂಲಕಾರಿಯಾಗಿದೆ ಹಾಗಾಗಿ ಮುಂದಿನ ದಿನಗಳಲ್ಲಿ ರೇಡಿಯಾಜಿಯು ವೈದ್ಯಕೀಯ ಕ್ಷೇತ್ರದ ಪ್ರಮುಖ ವಿಭಾಗವಾಗಿ ಬೆಳವಣಿಗೆಯಾಗಲಿದೆ ಎಂದರು.

ರೇಡಿಯಾಲಜಿಸ್ಟ್‌ಗಳ ಕೊರತೆಯ ಆತಂಕ : ಕಾರ್ಡಿಯಾಲಜಿ, ಗ್ಯಾಸ್ಟ್ರೋ ಎಂಟರಾಲಜಿ ಸೇರಿದಂತೆ ಹಲವು ವಿಶೇಷತೆಗಳಿಗೆ ಇಮೇಜಿಂಗ್ ಬೆಂಬಲ ಅನಿವಾರ್ಯವಾಗಿದೆ. ಭಾರತದಲ್ಲಿ ಪ್ರಸ್ತುತ ಸುಮಾರು 20 ಸಾವಿರ ನೋಂದಾಯಿತ ರೇಡಿಯಾಲಜಿಸ್ಟ್‌ಗಳಿದ್ದಾರೆ. ಇದು 150 ಕೋಟಿ ಮೀರಿದ ಜನಸಂಖ್ಯೆಗೆ ಸಾಕಾಗುವುದಿಲ್ಲ ಎಂದು ಆತಂಕ ವ್ಯಕ್ತಪಡಿಸಿದರು.

ನಿತ್ಯ 30 ತೆರದ ಹೃದಯ ಶಸ್ತ್ರಚಿಕಿತ್ಸೆ: ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯಲ್ಲಿ ಪ್ರಸ್ತುತ 8 ರೇಡಿಯಾಲಜಿಸ್ಟ್‌ಗಳಿದ್ದಾರೆ. ಆಧುನಿಕ ಎಂಆರ್‌ಐ, ಸಿಟಿ ಮತ್ತು ಅಲ್ಟ್ರಾಸೌಂಡ್ ಸೌಲಭ್ಯಗಳಿವೆ. ರಾಜ್ಯದಲ್ಲಿ ಜಯದೇವ ಸಂಸ್ಥೆಗೆ ಪ್ರತಿದಿನ ಸುಮಾರು 2 ಸಾವಿರ ರೋಗಿಗಳು ಬರುತ್ತಾರೆ. 30 ಓಪನ್ ಹಾರ್ಟ್ ಸರ್ಜರಿಗಳು ಮತ್ತು 200ಕ್ಕೂ ಹೆಚ್ಚು ಕ್ಯಾಥೆಟರ್ ಆಧಾರಿತ ಪ್ರಕ್ರಿಯೆಗಳು ನಡೆಯುತ್ತವೆ. ಈ ಎಲ್ಲಾ ಚಿಕಿತ್ಸೆಗಳಿಗೂ ರೇಡಿಯಾಲಜಿ ಬೇಕಾಗಿದೆ ಎಂದು ಡಾ. ದಿನೇಶ್ ಮಾಹಿತಿ ನೀಡಿದರು.

ಕಾರ್ಯಕ್ರಮದಲ್ಲಿ ಭಾರತೀಯ ರೇಡಿಯಾಲಜಿ ಮತ್ತು ಇಮೇಜಿಂಗ್ ಅಸೋಸಿಯೇಷನ್ ನಿರ್ಗಮಿತ ಅಧ್ಯಕ್ಷ ಉಮೇಶ್ ಕೃಷ್ಣಮೂರ್ತಿ, ಅಮರನಾಥ್, ಅಧ್ಯಕ್ಷ ಸುಧೀರ್ ಕಾಳೆ, ಚುನಾಯಿತ ಅಧ್ಯಕ್ಷ ಸಿ.ಪಿ. ನಂಜರಾಜ್, ಉಪಾಧ್ಯಕ್ಷ ಎಂವಿಕೆ ರಾವ್, ಕಾರ್ಯದರ್ಶಿ ನಟೇಶ ಗುಪ್ತಾ, ವಿಜಯಸಾರಥಿ, ಮೈಸೂರು ರೇಡಿಯಾಲಜಿಸ್ಟ್ ಅಸೋಸಿಯೇಷನ್ ಅಧ್ಯಕ್ಷ ಶಿವಪ್ರಸಾದ್ ಹಾಗೂ ಇತರರು ಇದ್ದರು.

ಸಿತಾರ್ ಸಂಭ್ರಮದಲ್ಲಿ ಸಂಗೀತ ಸ್ವರಗಳ ಲೀಲೆ

50ಕ್ಕೂ ಹೆಚ್ಚು ಕಲಾವಿದರಿಂದ ಏಕಕಾಲದಲ್ಲಿ ಸಿತಾರ್ ಸಂಗೀತ ಸಂಚಲನ



ಕಲಾಮಂದಿರದಲ್ಲಿ ಶನಿವಾರ ಸಿತಾರ್ ಸಿಂಚನ ತಂಡದ ಐವತ್ತಕ್ಕೂ ಹೆಚ್ಚು ಕಲಾವಿದರು ಸಮೂಹ ಸಿತಾರ್ ವಾದನದ ಮೂಲಕ ಸಭಿಕರ ಮನಕ್ಕೆ ಲಗ್ಗೆಯಿಟ್ಟರು.

ಮೈಸೂರು,ಮೇ 9(ಪಿಎಂ)– ಐವತ್ತಕ್ಕೂ ಹೆಚ್ಚು ಕಲಾವಿದರು ಏಕಕಾಲದಲ್ಲಿ ನುಡಿಸಿದ ಸಿತಾರ್ ವಾದನದಲ್ಲಿ 'ಸೋಜುಗದ ಸೂಜು ಮಲ್ಲಿಗೆ...' ಜಾನಪದ ಗೀತೆ ಹೊಮ್ಮಿ ಸಂಗೀತದ ಅಲೆಯೊಂದಿಗೆ ಸಭಿಕರಲ್ಲಿ ಭಕ್ತಿಭಾವ ಮೂಡಿಸಿ, ತಲೆದೂಗುವಂತೆ ಮಾಡಿತು.

ಸಿತಾರ್ ಸಿಂಚನ ತಂಡದ ಐವತ್ತಕ್ಕೂ ಹೆಚ್ಚು ಕಲಾವಿದರು ಸಮೂಹ ವಾದನದ ಮೂಲಕ ಸಭಿಕರ ಮನಕ್ಕೆ ಲಗ್ಗೆಯಿಟ್ಟರು. ಇದಲ್ಲದೆ ವಿವಿಧ ರಾಗಗಳೂ ಸಿತಾರ್ ವಾದನದಲ್ಲಿ ಸೂಸಿ ಸಭಿಕರು ಆನಂದಮಯ ಅಲೆಯಲ್ಲಿ ತೇಲಿದರು.

ಮೈಸೂರಿನ ಕಲಾಮಂದಿರದಲ್ಲಿ ಕಲಾ ಸಂವಹನ ಟ್ರಸ್ಟ್ ವತಿಯಿಂದ ಶನಿವಾರ ಹಮ್ಮಿಕೊಂಡಿದ್ದ 'ಮೈಸೂರು ಸಿತಾರ್ ಸಂಭ್ರಮ' ಕಾರ್ಯಕ್ರಮ ಇಂತಹ ಸಂಗೀತದ ರಸದೌತಣಕ್ಕೆ ಸಾಕ್ಷಿಯಾಯಿತು. ಧಾರವಾಡ ಸಿತಾರ್ ಘರಾನೆಯ 7ನೇ ತಲೆಮಾರಿನ ಅಂತಾರಾಷ್ಟ್ರೀಯ ಕಲಾವಿದ ಉಸ್ತಾದ್ ಡಾ.ಮೊಹಸಿನ್ ಖಾನ್ ಅವರು ಮೈಸೂರಿನಲ್ಲಿ ಸಿತಾರ್ ಕಲಿಕಾ ತರಬೇತಿ ಆರಂಭಿಸಿ ವರ್ಷ ತುಂಬಿದ ನೆನಪಿನಲ್ಲಿ ಈ ಕಾರ್ಯಕ್ರಮ ನಡೆಯಿತು. ಮೊಹಸಿನ್ ಖಾನ್ ಅವರ ಶಿಷ್ಯವೃಂದ ಸಾದರಪಡಿಸಿದ ಸಿತಾರ್ ವಾದನವು ಕಿಕ್ಕಿರಿದು ತುಂಬಿದ್ದ ಸಭಿಕರ ಮನಸೂರೆಗೊಂಡಿತು.

ಸಿಂಚನ ತಂಡದ ಸಂಗೀತ ಸ್ವರಗಳ ಲೀಲೆಗೆ ಸಭಿಕರು ಮನಸೋತರು. ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತದ ಪ್ರಸಿದ್ಧ 'ಯಮನ್ ರಾಗ'ದಲ್ಲಿ ಈ ತಂಡ ಪ್ರಸ್ತುತಪಡಿಸಿದ ಸಿತಾರ್ ವಾದನ ಸಂಗೀತದ ಕಂಪು ಸೂಸಿತು. ಹರ್ಷಿತ್, ಗೌರಿ ಪ್ರಭಾಕರ್, ಮಾನಸ, ಡಾ.ಕೆ.ಎಂ.ಅರ್ಚನಾ, ಡಾ.ಎಸ್.ಎಲ್.ರವೀಂದ್ರ, ಮುರಳೀಧರ್ ಆಚಾರ್ಯ, ಸಿ.ಎನ್.ಮದನ್ ಸೇರಿದಂತೆ 50ಕ್ಕೂ ಹೆಚ್ಚು ಕಲಾವಿದರು ಏಕಕಾಲದಲ್ಲಿ ಸಿತಾರ್ ನುಡಿಸಿ ಸಭಿಕರಿಂದ ಚಪ್ಪಾಳೆ ಗಿಟ್ಟಿಸಿದರು.

ಉಸ್ತಾದ್ ನಿಸಾರ್ ಅಹಮದ್, ಪಂಡಿತ್ ಕೇಶವ ಜೋಶಿ, ಚಾರುದತ್ ಮಹಾರಾಜ್ (ತಬಲಾ), ಪಂಡಿತ್ ವೀರಭದ್ರಯ್ಯ ಹಿರೇಮಠ (ಹಾರ್ಮೋನಿಯಂ), ಪಂಡಿತ್ ಚಿನ್ಮಯ ನಾಮಣ್ಣವರ (ವಯೋಲಿನ್), ರುದ್ರೇಶ್ ಭಜಂತ್ರಿ (ಶೆಹನಾಯಿ), ಮನು ರಾವ್ (ಕೀಬೋರ್ಡ್) ಹಾಗೂ ಸುಜಯೇಂದ್ರ ರಾವ್ (ರಿದಮ್) ಪಕ್ಕವಾದ್ಯದಲ್ಲಿ ಸಹಕಾರ ನೀಡಿದರು. ಖ್ಯಾತ ಹಿಂದೂಸ್ತಾನಿ ಗಾಯಕ ಪದ್ಮಶ್ರೀ ಪಂಡಿತ್ ವೆಂಕಟೇಶ್ ಕುಮಾರ್ ಅವರ ಗಾಯನ ಹಾಗೂ ಡಾ.ಮೊಹಸಿನ್ ಖಾನ್ ಅವರ ಸಿತಾರ್ ವಾದನವೂ ಸಭಿಕರ ಮೋಡಿ ಮಾಡಿತು.

ಕಾರ್ಯಕ್ರಮ ಉದ್ಘಾಟಿಸಿದ ಪ್ರಸಿದ್ಧ ಗಾಯಕಿ ಹೆಚ್.ಆರ್.ಲೀಲಾವತಿ ಮಾತನಾಡಿ, ಮೈಸೂರು ಕಲೆಗಳ ತವರೂರು. ಮಹಾರಾಜರ ಕಾಲದಿಂದಲೂ ಇಲ್ಲಿಗೆ ಕಲೆಗಳಿಗೆ ಉತ್ತೇಜನ ಸಿಕ್ಕಿದೆ. ಮೈಸೂರಿನಲ್ಲಿ ಸಿತಾರ್ ತರಬೇತಿ ಆರಂಭಿಸಿದ ವರ್ಷದಲ್ಲೇ ಇಷ್ಟೊಂದು ಮಕ್ಕಳು ವೇದಿಕೆಯಲ್ಲಿ ಸಿತಾರ್ ನುಡಿಸುವಂತೆ ಸಜ್ಜುಗೊಳಿಸಿರುವುದು ಸಾಮಾನ್ಯ ಸಂಗತಿಯಲ್ಲ. ಮೊಹಸಿನ್ ಖಾನ್ ಅವರ ಈ ಪ್ರಯತ್ನ ಮತ್ತಷ್ಟು ಯಶಸ್ಸು ಕಾಣಲಿ ಎಂದು ಹಾರೈಸಿದರು. ಚಿನ್ಮಯ ಮಿಷನ್‌ನ ಪೂಜ್ಯ ಸ್ವಾಮಿ ಕೃತಾತ್ಮಾನಂದ, ಖ್ಯಾತ ಹಿಂದೂಸ್ತಾನಿ ಗಾಯಕ ಪದ್ಮಶ್ರೀ ಪಂಡಿತ್ ವೆಂಕಟೇಶ ಕುಮಾರ್, ಕಲಾ ಸಂವಹನ ಟ್ರಸ್ಟ್ ಅಧ್ಯಕ್ಷೆ ರಾಜೇಶ್ವರಿ ವಸ್ತ್ರದ ಮತ್ತಿತರರು ವೇದಿಕೆಯಲ್ಲಿದ್ದರು. ಸಾರ್ವಜನಿಕರಿಗೆ ಉಚಿತ ಪ್ರವೇಶ ಕಲ್ಪಿಸಲಾಗಿತ್ತು.


VISMAYA
8050302424
ಜೆಡಿಎಸ್ ಮುಖಂಡರು ಹಾಗೂ ಮಾಜಿ ಗ್ರಾಮಪಂಚಾಯಿತಿ ಸದಸ್ಯರಾದ
ಸೊಸೈಟಿ ಆನಂದ್
ಅವರಿಗೆ
ಹುಟ್ಟುಹಬ್ಬದ ಶುಭಾಶಯಗಳು
ಶುಭಕೋರುವವರು ದುರ್ಗಾ ಗ್ರೂಪ್ಸ್, ಬೋಗಾದಿ 2ನೇ ಹಂತ


ಶ್ರೀ ಚಾಮುಂಡೇಶ್ವರಿಯ ಅಶೀರ್ವಾದದೊಂದಿಗೆ
ಶ್ರೀ ಚಾಮುಂಡೇಶ್ವರಿ ಪ್ಲೈವುಡ್ & ಹಾರ್ಡ್ ವೇರ್ ಮಾಲೀಕರು, ಉದ್ಯಮಿಗಳು ಹಾಗೂ ಸ್ನೇಹಿಜೀವಿಗಳಾದ
ಶ್ರೀಯುತ ಚಿನ್ನಂಬಳ್ಳಿ ಮಹದೇವು ರವರಿಗೆ
ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು
10-05-2026 ಭಾನುವಾರ
ವಾಟಾಳ್ ಕುಮಾರ್
ಮಾಲೀಕರು, ಬಾಳೆಹಣ್ಣು ಮಂಡಿ, ಮೈಸೂರು
ಎಂ. ಶಿವಕುಮಾರ್
ಮಾಜಿ ಅಧ್ಯಕ್ಷರು, ಕರ್ನಾಟಕ ಮೃಗಾಲಯ ಪ್ರಾಧಿಕಾರ
ಸಿ. ರೇವಣ್ಣ
ಮಾಜಿ ಅಧ್ಯಕ್ಷರು, ಮೈಸೂರು ಕೋಆಪರೇಟಿವ್ ಬ್ಯಾಂಕ್
ಚಿನ್ನಂಬಳ್ಳಿ ರಾಜಣ್ಣ
ಕಾಂಗ್ರೆಸ್ ಮುಖಂಡರು
ಎನ್. ಬಸವಣ್ಣ
ಕೆ.ಇ.ಬಿ. ಕಾರ್ಮಿಕ ಮುಖಂಡರು, ಮೈಸೂರು
ಸಿ. ಚಿಕ್ಕಣ್ಣ (ಚಿಕ್ಕಚಿಕ್ಕಣ್ಣ)
ಕಾಂಗ್ರೆಸ್ ಮುಖಂಡರು, ಮೈಸೂರು
ಪುಟ್ಟಸ್ವಾಮಿ
ಹೆಬ್ಬಾಡಿಹುಂಡಿ
ದೇವರಾಜ ಮಾರ್ಕೆಟ್
ಶುಭಕೋರುವವರು
ಚಿನ್ನಂಬಳ್ಳಿ ಮಹದೇವು ರವರ
ಸ್ನೇಹಬಳಗ, ಮೈಸೂರು
ಕಿರಣ್ ಸಿದ್ದೇಗೌಡ
ಎಂ. ರವಿ
ಕಾಂಗ್ರೆಸ್ ಮುಖಂಡರು
ಮೈಸೂರು
ಪಿ. ನಾಗರಾಜ್
ಕಾಂಗ್ರೆಸ್ ಮುಖಂಡರು
ಮೈಸೂರು
ಮೋಹಿತ್ ಮಹದೇವು